ಸಂಪುಟ: 06 ಸಂಚಿಕೆ: 230 ಪುಟಗಳು: 08 ಗುರುವಾರ 05 ನವೆಂಬರ್ 2026 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಮುಂಜಾನೆ ಮಾತು

ಮಾತು ಹೊರ ಸೌಂದರ್ಯ ನಮ್ಮ ಲಕ್ಷ್ಯವನ್ನು ಸೆಳೆದರೆ, ವ್ಯಕ್ತಿತ್ವ ಹೃದಯವನ್ನು ತಟ್ಟುತ್ತದೆ. ಉತ್ತಮ ವ್ಯಕ್ತಿತ್ವದಿಂದ ಎಲ್ಲರನ್ನೂ ಆಕರ್ಷಿಸೋಣ!

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಪಕ್ಷದ ಬಗ್ಗೆ ಮಾತಾಡಿದ್ದು ನಿಜ, ವ್ಯಕ್ತಿಗಳ ಕೊಲೆ ಮಾಡ್ತೀನಿ ಅನ್ನೋದು ಸುಳ್ಳು: ಛಲವಾದಿ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು

ಪಕ್ಷದ ಬಗ್ಗೆ ಮಾತಾಡಿದ್ದು ನಿಜ, ವ್ಯಕ್ತಿಗಳ ಕೊಲೆ ಮಾಡ್ತೀನಿ ಅನ್ನೋದು ಸುಳ್ಳು ಎಂದಿರುವ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ , ಕೋಲಾರದಲ್ಲಿ ನೀಡಿದ್ದ ಹೇಳಿಕೆ ಕುರಿತು ಮತ್ತೊಮ್ಮೆ ಸಮರ್ಥನೆ ಮಾಡಿಕೊಂಡಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಅವರು, ಇಡೀ ದೇಶದಲ್ಲಿ ಕಾಂಗ್ರೆಸ್ ಪಕ್ಷ ವಿಷಯದಲ್ಲಿ ಅರಾಜಕತೆ ಸೃಷ್ಟಿ ಮಾಡುತ್ತಿದೆ. ಪಾಕಿಸ್ತಾನ ಪರ ಘೋಷಣೆ ಕೂಗೋರ ಜೊತೆ ಇವರು ಪ್ರತಿಭಟನೆ ಮಾಡುತ್ತಾರೆ.

ನಾವು ಪ್ರಜಾಪ್ರಭುತ್ವ ಉಳಿಸಿ ಎಂದು ಹೋರಾಟ ಮಾಡುತ್ತಿದ್ದೇವೆ ಎಂದರು. ಕೋಲಾರದಲ್ಲಿ ನಾನು ನಿನ್ನೆ ಒಂದು ಹೇಳಿಕೆ ನೀಡಿದ್ದೆ. ಕಾಂಗ್ರೆಸ್ ಪಾರ್ಟಿಯನ್ನ ಬಿಜೆಪಿ ಕಾರ್ಯಕರ್ತರು ತುಂಡು ತುಂಡಾಗಿ ಮಾಡ್ತಾರೆ ಅಂತ. ಅರಾಜಕತೆ ಸೃಷ್ಟಿ ಮಾಡಿದ್ರೆ ಕಾಂಗ್ರೆಸ್ ಅನ್ನು ಕಾರ್ಯಕರ್ತರು ತುಂಡು ತುಂಡಾಗಿ ಕತ್ತರಿಸಿ ಹಾಕ್ತಾರೆ ಅಂತ ಹೇಳಿದ್ದೆ. ಇದನ್ನ ಕಾಂಗ್ರೆಸ್‌ನವರು ತಿರುಚಿದ್ದಾರೆ ಎಂದು ಆರೋಪಿಸಿದ್ದಾರೆ. ನಾನು ಹೇಳಿರುವ ಹೇಳಿಕೆ ಕುರಿತು ನಿನ್ನೆ ಪ್ರತಿಭಟನೆ ಮಾಡಿ ಪೊಲೀಸ್‌ಗೆ ದೂರು ಕೊಟ್ಟಿದ್ದಾರೆ. ಕಾಂಗ್ರೆಸ್ ಅವರು ಅಮ್ಮ ಅಪ್ಪನ ಬಗ್ಗೆ ಮಾತಾಡ್ತಾರೆ.

ಇನ್ನೂ 41 ಲಕ್ಷ ಜನರ ಇ-ಕೆವೈಸಿ ಬಾಕಿ

• ಉದಯವಾಹಿನಿ, ಬೆಂಗಳೂರು

ಪಡಿತರ ಚೀಟಿದಾರರು ಮರು ಇ-ಕೆವೈಸಿ ಮಾಡಿಸಲು ನವೆಂಬರ್ 10 ಕೊನೆಯ ದಿನವಾಗಿದೆ. ಬಾಕಿ ಉಳಿದಿರುವ ಪಡಿತರ ಚೀಟಿದಾರರು ನಿಗದಿತ ದಿನಾಂಕದೊಳಗೆ ಕಡ್ಡಾಯವಾಗಿ ತಪ್ಪದೇ ಇ-ಕೆವೈಸಿ ಮಾಡಿಸಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ ಸೂಚನೆ ನೀಡಿದೆ. ರಾಜ್ಯದಲ್ಲಿ ಮರು ಇ-ಕೆವೈಸಿ ಮಾಡಿಸಬೇಕಿದ್ದ ಒಟ್ಟು 2,67,64,276 ಪಡಿತರ ಚೀಟಿ ಫಲಾನುಭವಿಗಳ ಪೈಕಿ, ನವೆಂಬರ್ 3 ರವರೆಗೆ 2,26,30,747 ಫಲಾನುಭವಿಗಳು ಇ-ಕೆವೈಸಿ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ. ಇನ್ನುಳಿದ 41,33,529 ಫಲಾನುಭವಿಗಳು ಇ-ಕೆವೈಸಿ ಮಾಡಿಸಬೇಕಿದೆ.

ಈಗಾಗಲೇ ಒಂದು ಬಾರಿ ಇ-ಕೆವೈಸಿ ಮಾಡಿಸಲು ನೀಡಲಾಗಿದ್ದ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದ್ದು, ನ.10ರ ನಂತರ ಯಾವುದೇ ಕಾರಣಕ್ಕೂ ಕೊನೆಯ ದಿನಾಂಕ ವಿಸ್ತರಣೆ ಮಾಡಲಾಗುವುದಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ ಸ್ಪಷ್ಟನೆ ನೀಡಿದೆ. ತಂತ್ರಾಂಶದ ಮೂಲಕ ನವೆಂಬರ್ 10 ರೊಳಗೆ ಕಡ್ಡಾಯವಾಗಿ ಇ-ಕೆವೈಸಿ ಮಾಡಿಸಬೇಕು.

ಬಿಷ್ಣೋಯ್ ಗ್ಯಾಂಗ್ ಹೆಸರಲ್ಲಿ ಬಾಲಿವುಡ್ ಸೆಲೆಬ್ರಿಟಿಗಳಿಗೆ ಬೆದರಿಕೆ ಬೆಂಗಳೂರಿನ ಟೆಕ್ಕಿ ಬಂಧನ



• ಉದಯವಾಹಿನಿ, ಬೆಂಗಳೂರು

ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಹೆಸರಿನಲ್ಲಿ ಹಲವು ಸೆಲೆಬ್ರಿಟಿಗಳಿಗೆ ಬೆದರಿಕೆ ಹಾಕಿದ್ದ ಆರೋಪದ ಮೇಲೆ ಬೆಂಗಳೂರಿನ ಟೆಕ್ಕಿಯೊಬ್ಬನನ್ನ ಮುಂಬೈ ಕ್ರೈಂ ಬ್ರಾಂಚ್ ಪೊಲೀಸರು ಬಂಧಿಸಿದ್ದಾರೆ.

ವೈಭವ್ ಮಿಶ್ರಾ ಬಂಧಿತ ಟೆಕ್ಕಿಯಾಗಿದ್ದಾನೆ. ನಟರಾದ ತುಷಾರ್ ಕಪೂರ್ ಮತ್ತು ಆಯುಷ್ಮಾನ್ ಖುರಾನಾ ಸೇರಿದಂತೆ ಹಲವು ಸೆಲೆಬ್ರಿಟಿಗಳಿಗೆ ವೈಭವ್ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಹೆಸರಿನಲ್ಲಿ ಬೆದರಿಕೆ ಹಾಕಿದ್ದ. ಆಡಿಯೋ ಬೆದರಿಕೆ ಸಂದೇಶಗಳನ್ನೂ ಕಳುಹಿಸಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸದ್ಯ ವೈಭವ್ ಮಿಶ್ರಾನನ್ನ ಬಂಧಿಸಿರುವ ಮುಂಬೂ ಕ್ರೈಂ ಬ್ರಾಚ್ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಬೆಂಗಳೂರಿನಲ್ಲಿ ಮತ್ತೆ ಮಳೆ ಅಬ್ಬರ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಸ್ವಲ್ಪ ದಿನಗಳ ಕಾಲ ಬಿಡುವು ನೀಡಿದ್ದ ಮಳೆರಾಯ ಮತ್ತೆ ಎಂಟ್ರಿ ಕೊಟ್ಟಿದೆ. ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣದ್ದು, ಮಧ್ಯಾಹ್ನದ ವೇಳೆಗೆ ಬೆಂಗಳೂರಿನ ಹಲವೆಡೆ ವರುಣನ ಆರ್ಭಟ ಜೋರಾಗಿದೆ. ಮೆಜೆಸ್ಟಿಕ್, ಮೈಸೂರು ಬ್ಯಾಂಕ್ ಸರ್ಕಲ್, ಕಾರ್ಪೊರೇಷನ್, ವಿಧಾನಸೌಧ , ಕೆ.ಆರ್. ಸರ್ಕಲ್ ಸುತ್ತಮುತ್ತ ಮಳೆಯಾಗಿದೆ. ದಿಢೀರ್ ಸುರಿದ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಮೆಜೆಸ್ಟಿಕ್, ಮೈಸೂರ ಬ್ಯಾಂಕ್ ಸರ್ಕಲ್, ವಿಧಾನಸೌಧ, ಕೆಆರ್ ಸರ್ಕಲ್, ಕಾರ್ಪೊರೇಷನ್ ಸುತ್ತಮುತ್ತ ಸೇರಿದಂತೆ ಹಲವೆಡೆ ವರುಣನ ಸಿಂಚನವಾಗಿದೆ. ದಿಢೀರ್ ಮಳೆ ಹಿನ್ನೆಲೆ ಕೆಎಸ್‌ಆರ್ ಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿದೆ.

ಬಸ್‌ಗಳಿಗಾಗಿ ಕಾಯುತ್ತಿದ್ದ ಪ್ರಯಾಣಿಕರು ಮಳೆಯಿಂದ ತಪ್ಪಿಸಿಕೊಳ್ಳಲು ಪರದಾಡಿದ್ದಾರೆ. ಕೆಲವರು ಛತ್ರಿ ಹಿಡಿದು ಬಸ್‌ಗಳತ್ತ ತೆರಳಿದರೆ, ಮಳೆಯಿಂದ ರಕ್ಷಿಸಿಕೊಳ್ಳಲು ಅಲ್ಲೇ ಆಶ್ರಯ ಪಡೆದರು.

ಗೃಹಲಕ್ಷ್ಮಿ ಹಣ ಡೈವರ್ಟ್ ಆರೋಪ: 2,600 ಕೋಟಿ ರೂ. ಎಲ್ಲಿಗೆ ಹೋಯಿತು..? ಸರ್ಕಾರಕ್ಕೆ ನಿಖಿಲ್ ಕುಮಾರಸ್ವಾಮಿ ಪ್ರಶ್ನೆ

• ಉದಯವಾಹಿನಿ, ಬೆಂಗಳೂರು



ಮನೆ ಯಜಮಾನಿಗೆ 2000 ರೂ. ನೀಡುವ ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದ ಹಣವನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿದೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡದ ಸರ್ಕಾರ, ಸುಮಾರು 2,600 ಕೋಟಿ ರೂಪಾಯಿಯನ್ನು ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮಕ್ಕೆ ವರ್ಗಾವಣೆ ಮಾಡಿದೆ ಎಂದು ಅವರು ಆರೋಪಿಸಿದ್ದಾರೆ. ಬೆಂಗಳೂರಿನಲ್ಲಿ ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ನಿವಾಸದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ಗೃಹಲಕ್ಷ್ಮಿ ಯೋಜನೆಯ ಹಣದ ಲಭ್ಯತೆ ಮತ್ತು ವರ್ಗಾವಣೆ ಕುರಿತು ಸರ್ಕಾರ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು.

ಗೃಹಲಕ್ಷ್ಮಿ ಯೋಜನೆಯಲ್ಲಿ 2023ರಲ್ಲಿ ಸುಮಾರು 1 ಕೋಟಿ 27 ಲಕ್ಷ ಮಹಿಳೆಯರು ಫಲಾನುಭವಿಗಳಾಗಿದ್ದು, ಪ್ರತಿ ತಿಂಗಳು ಡಿಬಿಟಿ (ನೇರ ನಗದು ವರ್ಗಾವಣೆ) ಮೂಲಕ 2,000 ರೂ. ನೀಡುವುದಾಗಿ ಸರ್ಕಾರ ಘೋಷಿಸಿತ್ತು. 2023ರಲ್ಲಿ ಎಂಟು ತಿಂಗಳ ಕಾಲ ಹಣ ನೀಡಲಾಗಿತ್ತು. ಆದರೆ, 2024-25ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಹಣವನ್ನು ಬಿಡುಗಡೆ ಮಾಡಲಾಗಿಲ್ಲ ಎಂದು ನಿಖಿಲ್ ಆರೋಪಿಸಿದರು.ಈ ಕುರಿತು ಕೆಲವು ಮಹಿಳೆಯರು ನ್ಯಾಯಾಲಯದ ಮೊರೆ ಹೋಗಿದ್ದರು. ಈ ವೇಳೆ ಸರ್ಕಾರ ನ್ಯಾಯಾಲಯಕ್ಕೆ ಸಲ್ಲಿಸಿರುವ ಆಕ್ಷೇಪಣೆಯಲ್ಲಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಿಗೆ ಆರ್ಥಿಕ ಇಲಾಖೆಯಿಂದ ಹಣ ಬಿಡುಗಡೆ ಮಾಡಲಾಗಿಲ್ಲ ಎಂದು ತಿಳಿಸಲಾಗಿದೆ ಎಂದು ನಿಖಿಲ್ ಕುಮಾರಸ್ವಾಮಿ ಆರೋಪಿಸಿದರು. ಆ ಎರಡು ತಿಂಗಳ ಹಣಕ್ಕೆ ಲಭ್ಯತೆ ಇರಲಿಲ್ಲ ಹಾಗೂ ಆರ್ಥಿಕ ಹೊರೆಯ ಕಾರಣದಿಂದ ಹಣ ಬಿಡುಗಡೆ ಮಾಡಿಲ್ಲ ಎಂಬ ಅಂಶವನ್ನು ಸರ್ಕಾರ ನ್ಯಾಯಾಲಯದ ಮುಂದೆ ತಿಳಿಸಿದೆ ಎಂದು ಅವರು ಹೇಳಿದರು. ಸರ್ಕಾರದ ಈ ನಿಲುವು ರಾಜ್ಯದ ಹಣಕಾಸಿನ ಸ್ಥಿತಿಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ನಿಖಿಲ್ ಟೀಕಿಸಿದರು. ಫೆ. ಮತ್ತು ಮಾರ್ಚ್ ತಿಂಗಳ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಬೇರೆ ಉದ್ದೇಶಗಳಿಗೆ ವರ್ಗಾವಣೆ ಮಾಡಲಾಗಿದೆ ಎಂದು ನಿಖಿಲ್ ಕುಮಾರಸ್ವಾಮಿ ಆರೋಪಿಸಿದರು. 2025ರ ಮಾರ್ಚ್ 31ರಂದು ಸುಮಾರು 2,600 ಕೋಟಿ ರೂ. ವರ್ಗಾವಣೆ ಮಾಡಲಾಗಿದೆ ಎಂದು ಅವರು ಹೇಳಿದರು.

ಮಧ್ಯಂತರ ಚುನಾವಣೆಯಲ್ಲಿ ಅಮೆರಿಕಾದ ಅಧ್ಯಕ್ಷ ಟ್ರಂಪ್ ಆಡಳಿತಾರೂಢ ರಿಪಬ್ಲಿಕನ್ ಪಕ್ಷವು ಹೀನಾಯ ಸೋಲು ಕಂಡಿದೆ. ಸಂಸತ್ತಿನ ಎರಡೂ ಸದನಗಳಲ್ಲಿ (ಹೌಸ್ ಆಫ್ ರೆಪ್ರೆಸೆಂಟೆ ಮತ್ತು ಸೆನೆಟ್ ವಿರೋಧ ಪಕ್ಷವಾದ ಡೆಮಾಕ್ರೆಟಿಕ್ ಪಕ್ಷವು ಸ್ಪಷ್ಟ ಬಹುಮತದತ್ತ ಸಾಗಿದೆ. ಇನ್ನೂ ಎರಡು ವರ್ಷ ಆಡಳಿತಾವಧಿ ಬಾಕಿ ಇರುವ ಅಧ್ಯಕ್ಷ ಟ್ರಂಪ್ ಇನ್ನು ಮುಂದೆ 'ಲೇಮ್ ಡಕ್ ಪ್ರೆಸಿಡೆಂಟ್' (ಅಕ್ಷರಶಃ ಅನುವಾದ 'ಕುಂಟ ಬಾತುಕೋಳಿ') ಆಗಿ ಕಳೆಯಬೇಕಾದ ಸ್ಥಿತಿ ಎದುರಿಸಬೇಕಾಗಿದೆ. ಅಂದರೆ, ಇನ್ನು ಮುಂದೆ ಟ್ರಂಪ್ ಏಕರೀತಿಯಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಂಸತ್ತಿನಲ್ಲಿ ವಿರೋಧ ಪಕ್ಷದ ಬಹುಮತವು ಅಡ್ಡಿಬರಲಿದೆ. ಅದೇ ರೀತಿ ಎರಡೂ ಸದನಗಳು ಟ್ರಂಪ್ ಮತ್ತು ಅವರ ಸಹಚರರ ಭ್ರಷ್ಟಾಚಾರ ಹಾಗೂ ಅಕ್ರಮಗಳನ್ನು ತನಿಖೆ ನಡೆಸುವ ಸಾಧ್ಯತೆ ಹೆಚ್ಚಾಗಿದೆ. ಮತ ಎಣಿಕೆ ಮುಗಿಯುತ್ತಿದ್ದು, ಎಲ್ಲಾ ಸುದ್ದಿ ಮಾಧ್ಯಮಗಳು ಡೆಮಾಕ್ರೆಟಿಕ್ ಪಕ್ಷವು ಸಂಸತ್ತಿನ ಎರಡೂ ಸದನಗಳಲ್ಲಿ ಬಹುಮತ ಪಡೆದಿದೆ. ಒಟ್ಟು 100 ಸೀಟುಗಳ ಸಂಖ್ಯಾ ಬಲವಿರುವ ಸೆನೆಟ್‌ನಲ್ಲಿ ಬಹುಮತ ಪಡೆಯಲು ಡೆಮಾಕ್ರೆಟಿಕ್ ಪಕ್ಷವು ರಿಪಬ್ಲಿಕನ್ ಪಕ್ಷದ 4 ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಬೇಕಿತ್ತು. ಆದರೆ, ಇದೀಗ ಬರುತ್ತಿರುವ ಮತ ಎಣಿಕೆಯ ಪ್ರಕಾರ 54 ರಿಂದ 55 ಸೀಟು ಗೆದ್ದು ಬಹುಮತ ಪಡೆಯಲಿದೆ. ಈ ಮೂಲಕ ಜನವರಿ 2027 ರಲ್ಲಿ ಚಕ್ ಶೂಮರ್ ಅವರು ಸೆನೆಟ್ ನಲ್ಲಿ ಸದನದ ನಾಯಕರಾಗಲಿದ್ದಾರೆ. ಅದೇ ರೀತಿ ಒಟ್ಟು 435 ಸೀಟುಗಳ ಹೌಸ್ ಆಫ್ ರೆಪ್ರೆಸೆಂಟೆನಲ್ಲಿ 218 ಸೀಟುಗಳ ಸರಳ ಬಹುಮತ ಪಡೆಯಲು ಡೆಮಾಕ್ರೆಟಿಕ್ ಪಕ್ಷವು ರಿಪಬ್ಲಿಕನ್ ಹಿಡಿತದಿಂದ ಕೇವಲ 3 ಸೀಟುಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಬೇಕಿತ್ತು. ಆದರೆ, ಟ್ರಂಪ್ ವಿರುದ್ಧದ ಆಕ್ರೋಶದ ಅಲೆ ಸುನಾಮಿ ರೀತಿಯಲ್ಲಿ ಅಪ್ಪಳಿಸಿ ಡೆಮಾಕ್ರೆಟಿಕ್ ಪಕ್ಷವು 260 ರಿಂದ 265 ಸೀಟು ಪಡೆಯಲಿದೆ. ಈ ಬಹುಮತದಿಂದ ಜನವರಿ 2027 ರಲ್ಲಿ ವಿರೋಧ ಪಕ್ಷದ ಹಕೀಮ್ ಜೆಫ್ರಿಸ್ ಅವರು 'ಹೌಸ್ ಆಫ್ ರೆಪ್ರೆಸೆಂಟೆ' ಸದನದ ನೂತನ ಸ್ಪೀಕರ್ ಆಗಿ ಅಧಿಕಾರಗ್ರಹಣ ಮಾಡಲಿದ್ದಾರೆ. ಹಕೀಮ್ ಜೆಫ್ರಿಸ್ ಅವರು ಅಮೆರಿಕದ 250 ವರ್ಷಗಳ ಇತಿಹಾಸದಲ್ಲಿ ಪ್ರಥಮ ಆಫ್ರಿಕನ್ ಅಮೆರಿಕನ್ ಸ್ಪೀಕರ್ ಆಗಿ ಇತಿಹಾಸ ಸೃಷ್ಟಿಸಲಿದ್ದಾರೆ.

ಟ್ರಂಪ್‌ಗೆ ಡಬಲ್ ಶಾಕ್



ಕೈ ತಪ್ಪಿದ ಸೆನೆಟ್

ವೀಟೋ ಪವರ್ ಗುಮ್ಮ ತೋರಿಸಿದ ಟ್ರಂಪ್

ಇದೇ ವೇಳೆ ತಮಗಿರುವ ವೀಟೋ ಪವರ್ ಅನ್ನು ಪ್ರಸ್ತಾಪಿಸಿ ತಮ್ಮ ಸೋಷಿಯಲ್ ಮೀಡಿಯಾ ಟ್ರುಥ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಡೊನಾಲ್ಡ್ ಟ್ರಂಪ್, ನನಗೆ ಹಲವಾರು ಡೆಮೋಕ್ರಾಟ್‌ಗಳು ಗೊತ್ತು. ನನ್ನ ಬಳಿ ವೀಟೋ (ವಿಶೇಷಾಧಿಕಾರ) ಪವರ್ ಇದೆ. ಹೀಗಾಗಿ, ನಾವು ಒಟ್ಟಾಗಿ ಎಲ್ಲವನ್ನೂ ಬಗೆಹರಿಸಿಕೊಳ್ಳಲಿದ್ದೇವೆ ಎಂಬ ನಂಬಿಕೆ ಇದೆ ಎಂದಿದ್ದಾರೆ. ಕೆಂಪು ಬಣ್ಣದ ಶೈಲಿಯ ಬೇಸ್‌ಬಾಲ್‌ಟೋಪಿಯ ಚಿತ್ರವನ್ನೂ ಹಂಚಿಕೊಂಡಿದ್ದಾರೆ. ಅವರು (ಡೆಮೋಕ್ರಾಟ್‌ಗಳು) ನನ್ನೊಂದಿಗೆ ಕೆಲಸ ಮಾಡಲು ಬಯಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಇಲ್ಲದಿದ್ದರೆ ನಾನು ಅವರ ಪ್ರತಿಯೊಂದು ನಿರ್ಧಾರಕ್ಕೂ ವೀಟೋ ಚಲಾಯಿಸಬೇಕಾಗುತ್ತದೆ. ಅವರು ಅದನ್ನು ಬಯಸಲಿಕ್ಕಿಲ್ಲ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಚುನಾವಣೆಗೂ ಮೊದಲು ಟ್ರಂಪ್ ಕಠಿಣ ಪ್ರಚಾರ ನಡೆಸಿದ್ದರು. ನಾನೇ ಕಣದಲ್ಲಿದ್ದೇನೆ ಎಂದು ಭಾವಿಸಿ ಮತ ಹಾಕಿ ಎಂದು ಪರಿಪರಿಯಾಗಿ ಮನವಿ ಮಾಡಿದ್ದರು. ಆದರೆ, ರಿಪಬ್ಲಿಕನ್ ಬಾಹುಳ್ಯದ ಟೆಕ್ಸಾಸ್, ಉತ್ತರ ಕೆರೊಲಿನಾ, ದಕ್ಷಿಣ ಕೆರೊಲಿನಾ, ಓಹಿಯೋ ರಾಜ್ಯಗಳ ಸೆನೆಟ್ ಸ್ಥಾನಗಳನ್ನು ಡೆಮೋಕ್ರಾಟ್‌ಗಳು ವಶಪಡಿಸಿಕೊಂಡಿದ್ದಾರೆ.

ಸೋತರೂ ಜಂಭ ಕೊಚ್ಚಿಕೊಂಡ ಟ್ರಂಪ್

ಈ ಕುರಿತು ಫಾಕ್ಸ್ ನ್ಯೂಸ್ ಜೊತೆ ಮಾತನಾಡಿರುವ ಅಧ್ಯಕ್ಷ ಟ್ರಂಪ್, ಜನರಿಗೆ ಅಲ್ಲಿನ ಅಭ್ಯರ್ಥಿಗಳು ಇಷ್ಟವಾಗಲಿಲ್ಲ ಅಷ್ಟೆ' ಎಂದು ಹೇಳಿ ನುಣುಚಿಕೊಂಡಿದ್ದಾರೆ. 'ಡೆಮೋಕ್ರಾಟ್‌ಗಳು ಉತ್ತಮ ಕೆಲಸ ಮಾಡಿದ್ದಾರೆ. ಅವರು ಕಠಿಣ ಹೋರಾಟ ನಡೆಸಿದ್ದಾರೆ ಮತ್ತು ದೀರ್ಘಕಾಲದಿಂದ ಹೋರಾಡುತ್ತಿದ್ದಾರೆ. ಹಲವು ವಿಷಯಗಳಲ್ಲಿ ನಾವು ಅವರೊಂದಿಗೆ ಒಟ್ಟಾಗಿ ಕೆಲಸ ಮಾಡಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ. ಟ್ರುಥ್ ಸೋಷಿಯಲ್ ಮೀಡಿಯಾದಲ್ಲಿ ಮತ್ತೊಂದು ಪೋಸ್ಟ್ ಹಂಚಿಕೊಂಡಿರುವ ಟ್ರಂಪ್, ಚುನಾವಣಾ ಕಣದಲ್ಲಿ ನಾನಿಲ್ಲದ ಕಾರಣ ರಿಪಬ್ಲಿಕನ್ನರು ಸೋತಿದ್ದಾರೆ. ಒಂದು ವೇಳೆ, ನಾನೇ ಸ್ಪರ್ಧಾ ಕಣದಲ್ಲಿ ಇದ್ದಿದ್ದರೆ ನಾವು ಅಭೂತಪೂರ್ವ ವಿಜಯ ಸಾಧಿಸುತ್ತಿದ್ದೆವು ಎಂದು ಬರೆದುಕೊಂಡಿದ್ದಾರೆ

ಕಾನ್ಸಾಸ್‌ನಲ್ಲಿ 1932ರ ಬಳಿಕ ಡೆಮಾಕ್ರಟಿಕ್ ಗೆಲುವು

ಅಮೆರಿಕದ ಕಾನ್ಸಾಸ್ ರಾಜ್ಯದಲ್ಲಿ 1932ರ ಬಳಿಕ ಮೊದಲ ಬಾರಿಗೆ ಡೆಮಾಕ್ರಟಿಕ್ ಪಕ್ಷ ಸೆನೆಟ್ ಸ್ಥಾನ ಗೆದ್ದಿದೆ ಎಂಬುದು ಈ ಚುನಾವಣೆಯ ಪ್ರಮುಖ ಬೆಳವಣಿಗೆಯಾಗಿದೆ. ಆಡಂ ಹ್ಯಾಮಿಲ್ಟನ್ ಅವರು ರಿಪಬ್ಲಿಕನ್ ಪಕ್ಷದ ಹಾಲಿ ಸದಸ್ಯ ರೋಜರ್ ಮಾರ್ಷಲ್ ಅವರನ್ನು ಸೋಲಿಸಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದೇ ವೇಳೆ ಟೆಕ್ಸಾಸ್ ಮತ್ತು ಅಯೋವಾ ಸೇರಿದಂತೆ ಹಲವು ರಾಜ್ಯಗಳಲ್ಲೂ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ ಎಂದು ವರದಿ ತಿಳಿಸಿದೆ. ಈ ಚುನಾವಣೆಯಲ್ಲಿ ಸೆನೆಟ್ ಮತ್ತು ರಾಜ್ಯಪಾಲರ ಸ್ಥಾನಗಳ ಸ್ಪರ್ಧೆಗಳಲ್ಲೂ ಡೆಮಾಕ್ರಟಿಕ್ ಪಕ್ಷ ಮುನ್ನಡೆ ಸಾಧಿಸಿದ್ದು, ರಿಪಬ್ಲಿಕನ್ ಪಕ್ಷದ ಭದ್ರಕೋಟೆ ಎಂದೇ ಪರಿಗಣಿಸಲಾಗಿದ್ದ ಕೆಲವು ರಾಜ್ಯಗಳಲ್ಲೂ ಗೆಲುವು ದಾಖಲಿಸಿದೆ.

ಡೆಮಾಕ್ರಟಿಕ್ ಗಮನಾರ್ಹ ಮುನ್ನಡೆ

ಅಮೆರಿಕದಲ್ಲಿ ನಡೆದ ಮಧ್ಯಂತರ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷ ಗೆಲುವು ಕಂಡ ಬೆನ್ನಲ್ಲೇ ಇದೇ ವಿಚಾರವಾಗಿ ಮೋದಿ ಸರ್ಕಾರಕ್ಕೆ ತಿವಿದಿರುವ ಕಾಂಗ್ರೆಸ್ ನಾಯಕಿ ಶಮಾ ಮೊಹಮದ್, ಭಾರತದಲ್ಲೂ ಇದೇ ಮರುಕಳಿಸುತ್ತದೆ ಎಂದು ಹೇಳಿದ್ದಾರೆ.

ಅಮೆರಿಕದ ಮಧ್ಯಂತರ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷ ಸಾಧಿಸಿರುವ ಗೆಲುವನ್ನು ಉಲ್ಲೇಖಿಸಿ ಕಾಂಗ್ರೆಸ್ ವಕ್ತಾರೆ ಶಮಾ ಮೊಹಮ್ಮದ್, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ರಾಜಕೀಯ ವ್ಯವಸ್ಥೆಯನ್ನು ಪರೋಕ್ಷವಾಗಿ ಟೀಕಿಸಿದ್ದಾರೆ. ಅಮೆರಿಕದಲ್ಲಿ ನಡೆದಿರುವ ರಾಜಕೀಯ ಬದಲಾವಣೆ ಭಾರತದಲ್ಲೂ ಶೀಘ್ರದಲ್ಲೇ ಸಂಭವಿಸಲಿದೆ ಎಂದು ಅವರು ಹೇಳಿದ್ದಾರೆ.

ನವೆಂಬರ್ 3ರಂದು ನಡೆದ ಅಮೆರಿಕದ ಮಧ್ಯಂತರ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷ ಹಲವು ಕ್ಷೇತ್ರಗಳಲ್ಲಿ ಗಮನಾರ್ಹ ಮುನ್ನಡೆ ಸಾಧಿಸಿರುವ ಹಿನ್ನೆಲೆಯಲ್ಲಿ ಶಮಾ ಮೊಹಮ್ಮದ್ ಈ ಪ್ರತಿಕ್ರಿಯೆ ನೀಡಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಅಮೆರಿಕದ ಮಧ್ಯಂತರ ಚುನಾವಣೆ ನಮಗೆ ಒಂದು ಸಂದೇಶ ನೀಡಿದೆ. ಭ್ರಷ್ಟಾಚಾರದಲ್ಲಿ ತೊಡಗಿರುವವರು, ಆರ್ಥಿಕತೆಯ ಬಗ್ಗೆ ಸುಳ್ಳು ಹೇಳುವವರು ಮತ್ತು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವವರನ್ನು ಜನರು ಅಧಿಕಾರದಿಂದ ಹೊರಹಾಕುತ್ತಾರೆ.

• ಉದಯವಾಹಿನಿ, ವಾಷಿಂಗ್ಟನ್, ಅಮೆರಿಕ





ಭಾರತೀಯ - ಅಮೆರಿಕನ್ ಡೆಮೋಕ್ರಾಟ್‌ಗಳಾದ ಸುಹಾಸ್ ಸುಬ್ರಮಣ್ಯಂ, ಅರುಣಾ ಮಿಲ್ಲರ್ ಮರು ಆಯ್ಕೆ ಖಚಿತಪಡಿಸಿದ್ದಾರೆ ಮತ್ತು ಪಿಯಾ ದಾಂಡಿಯಾ 2026ರ ಯುಎಸ್ ಮಧ್ಯಂತರ ಚುನಾವಣೆಯಲ್ಲಿ ಜಯಗಳಿಸಿದ್ದಾರೆ.

40 ವರ್ಷದ ಸುಬ್ರಮಣ್ಯಂ ವರ್ಜೀನಿಯಾದಿಂದ ಯುಎಸ್ ಕಾಂಗ್ರೆಸ್‌ಮನ್ ಆಗಿ ಮರು ಆಯ್ಕೆಯಾಗಿದ್ದಾರೆ. 61 ವರ್ಷದ ಮಿಲ್ಲರ್ ಮೇರಿಲ್ಯಾಂಡ್‌ನ ಲೆಫ್ಟಿನೆಂಟ್ ಗವರ್ನರ್ ಆಗಿ ತಮ್ಮ ಸ್ಥಾನ ಉಳಿಸಿಕೊಂಡರು. ಇನ್ನು 39 ವರ್ಷದ ದಾಂಡಿಯಾ ಫ್ಲೋರಿಡಾದಲ್ಲಿ ಗೆಲುವು ಸಾಧಿಸಿದ್ದಾರೆ. ಏತನ್ಮಧ್ಯೆ, ಓಹಿಯೋದ ಗವರ್ನರ್ ರೇಸ್ ನಲ್ಲಿ ರಿಪಬ್ಲಿಕನ್ ವಿವೇಕ್ ರಾಮಸ್ವಾಮಿ ಹಿಂದುಳಿದ್ದಾರೆ. ಭಾರಿ ಮಹತ್ವ ಪಡೆದುಕೊಂಡಿದ್ದ ಚುನಾವಣೆಯಲ್ಲಿ ಅಮೆರಿಕನ್ನರು ಮತ ಚಲಾಯಿಸಿದರು. ಈ ಚುನಾವಣೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಛೀಮಾರಿ ಹಾಕಿದೆ ಎಂದು ಆರಂಭಿಕ ಸಮೀಕ್ಷೆಗಳು ಊಹಿಸಿವೆ.

ಇದು ಬದಲಾವಣೆಯ ಮನಸ್ಥಿತಿಯನ್ನು ಸೂಚಿಸುತ್ತದೆ ಎಂಬುದು ಆರಂಭಿಕ ಫಲಿತಾಂಶಗಳು ತೋರಿಸುತ್ತಿವೆ. ಇತರ ಭಾರತೀಯ - ಅಮೆರಿಕನ್ ಅಭ್ಯರ್ಥಿಗಳು ತಮ್ಮ ಫಲಿತಾಂಶಗಳಿಗಾಗಿ ಕಾಯುತ್ತಿದ್ದಾರೆ.

ಮತ ಎಣಿಕೆ ಇನ್ನೂ ಮುಂದುವರೆದಿದೆ. ಪಶ್ಚಿಮ ವರ್ಜೀನಿಯಾದ ರಿಪಬ್ಲಿಕನ್ ಶೆಲ್ಲಿ ಕ್ಯಾಪಿಟೊ ಮತ್ತು ಮಿಸೌರಿಯ 1ನೇ ಕಾಂಗ್ರೆಸ್ ಜಿಲ್ಲೆಯ ಡೆಮೋಕ್ರಾಟ್ ವೆಸ್ಲಿ ಬೆಲ್ ಮರುಚುನಾವಣೆಯಲ್ಲಿ ಗೆದ್ದಿದ್ದಾರೆ. ಜಾರ್ಜಿಯಾ ಮತ್ತು ನ್ಯೂ ಹ್ಯಾಂಪ್‌ಶೈರ್‌ನಲ್ಲಿ ಡೆಮಾಕ್ರಟ್‌ಗಳು ಗೆದ್ದಿದ್ದಾರೆ. ಉತ್ತರ ಕೆರೊಲಿನಾ ಮಾಜಿ ಗವರ್ನರ್ ರಾಯ್ ಕೂಪರ್ ರಿಪಬ್ಲಿಕನ್ ಮೈಕೆಲ್ ವಾಟ್ಲಿ ವಿರುದ್ಧ ಗೆಲುವು ಸಾಧಿಸಿದ್ದಾರೆ. ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನ 435 ಸ್ಥಾನಗಳು, ಅಮೆರಿಕದ ಸೆನೆಟ್‌ನ 37 ಸ್ಥಾನ ಹಾಗೂ ರಾಜ್ಯ ಗವರ್ನರ್‌ಗಳ 36 ಹುದ್ದೆಗಳು ಮತ್ತು ಹಲವಾರು ಸ್ಥಳೀಯ ಸಾರ್ವಜನಿಕ ಕಚೇರಿಗಳಿಗೆ ನಡೆದ ಚುನಾವಣೆಯಲ್ಲಿ 210 ಮಿಲಿಯನ್ ಅಮೆರಿಕನ್ನರು ಮತ ಚಲಾಯಿಸಲು ಅರ್ಹತೆ ಪಡೆದುಕೊಂಡಿದ್ದರು.

ಸಿಎನ್‌ಎನ್‌ನ ಮತದಾರರ ಸಮೀಕ್ಷೆಯ ಕೆಲವು ಪ್ರಾಥಮಿಕ ರಾಷ್ಟ್ರೀಯ ಫಲಿತಾಂಶಗಳ ಪ್ರಕಾರ, ಮತದಾರರು ರಾಷ್ಟ್ರದ ಸ್ಥಿತಿ, ಆರ್ಥಿಕತೆಯ ಸ್ಥಿತಿ ಮತ್ತು ಟ್ರಂಪ್ ಅವರ ಕೆಲಸದ ಕಾರ್ಯಕ್ಷಮತೆಯ ಬಗ್ಗೆ ಹೆಚ್ಚಾಗಿ ಅತೃಪ್ತರಾಗಿದ್ದರು ಎಂಬುದನ್ನು ಎತ್ತಿ ತೋರಿಸಿತ್ತು. ಆರಂಭಿಕ ಫಲಿತಾಂಶಗಳು ಹೊರ ಬೀಳಲು ಶುರುವಾಗುತ್ತಿದ್ದಂತೆ ಅತ್ತ ಟ್ರಂಪ್ ದಿನವಿಡೀ ತಮ್ಮ ಸಲಹೆಗಾರರೊಂದಿಗೆ ಶ್ವೇತಭವನದ ಕಚೇರಿಯಲ್ಲಿಯೇ ವಾಸ್ತವ್ಯ ಹೂಡಿದ್ದರು.

ಟ್ರಂಪ್, ರಿಪಬ್ಲಿಕನ್ ಅಭ್ಯರ್ಥಿಗಳಿಗೆ ಬೆಂಬಲ ಸೂಚಿಸುತ್ತಿದ್ದರು. ವಾಷಿಂಗ್ಟನ್‌ನ ಫೋನ್ ಬ್ಯಾಂಕ್‌ನಲ್ಲಿ ಸಿಬ್ಬಂದಿ ಮತ್ತು ಸ್ವಯಂ ಸೇವಕರೊಂದಿಗೆ ಮಾತನಾಡಿದ ಹೌಸ್ ಡೆಮಾಕ್ರಟಿಕ್ ನಾಯಕ ಹಕೀಮ್ ಜೆಫ್ರಿಸ್, ಅಮೆರಿಕನ್ನರನ್ನು ಮೊದಲು ಇರಿಸುವ ಕಾಂಗ್ರೆಸ್ ಅನ್ನು ನಾವು ನೀಡಲಿದ್ದೇವೆ ಎಂದು ಹೇಳಿದ್ದಾರೆ.

ಟ್ರಂಪ್ ನೀತಿಗಳಿಂದ ಬೆಲೆ ಹೆಚ್ಚಳ

ಟ್ರಂಪ್ ನೀತಿಗಳಿಂದ ಬೆಲೆ ಹೆಚ್ಚಳ, ವ್ಯಾಪಕ ಭ್ರಷ್ಟಾಚಾರ, ಸುಂಕದ ದುರ್ಬಳಕೆ, ಅಪ್ರಚೋದಿತ ಇರಾನ್ ಯುದ್ಧದಲ್ಲಿ ವ್ಯರ್ಥವಾಗಿ ವ್ಯಯಿಸುತ್ತಿರುವ ಹಣ ಹಾಗೂ ಅದರ ಪರಿಣಾಮದಿಂದ ಪೆಟ್ರೋಲ್ / ಡೀಸಲ್ ಬೆಲೆಯಲ್ಲಿ ಏರಿಕೆ, ವಲಸಿಗರ ಮೇಲೆ ಕ್ರೂರ ಕ್ರಮಗಳು, ಎಪ್ಸನ್ ಫೈಲ್ಸ್ ಪೂರ್ಣ ಬಿಡುಗಡೆ ಮಾಡದಿರುವುದು, ಎ ಐ ಡೇಟಾ ಸೆಂಟರ್ ನಿರ್ಮಾಣಗಳಿಂದ ಪರಿಸರ ಹಾನಿ, ವಿರೋಧಿಗಳ ವಿರುದ್ಧ ದ್ವೇಷ ಅವಹೇಳನೆಗಳು, ಮಿತ್ರ ರಾಷ್ಟ್ರಗಳೊಂದಿಗೆ ಅನಾವಶ್ಯಕವಾದ ತಿಕ್ಕಾಟ, ರಷ್ಯಾ ಮತ್ತು ಚೀನಾ ದೇಶದ ಅಧ್ಯಕ್ಷರುಗಳೊಂದಿಗೆ ಮೃದು ನಿಲವು, ಅಮೆರಿಕದ ಯುದ್ಧನೀತಿ ಮೇಲೆ ಇಸ್ರೇಲ್ ನ ನೆತನ್ಯಾಹು ಹಿಡಿತ, ಇವು ಈ ಮಧ್ಯಂತರ ಚುನಾವಣೆಯಲ್ಲಿ ಪ್ರಜೆಗಳ ಆಕ್ರೋಶಕ್ಕೆ ಕಾರಣಗಳಾಗಿವೆ. ಅಮೆರಿಕಾದ ಮಧ್ಯಭಾಗದಲ್ಲಿರುವ ರಾಜ್ಯಗಳು ಅಯೋವಾ, ಕೆಂಟಕಿ, ನೆಬ್ರಾಸ್ಕ ಕ್ಯಾನ್ಸಸ್ ರಿಪಬ್ಲಿಕನ್ ಪಕ್ಷದ ಭದ್ರಕೋಟೆಗಳಾಗಿದ್ದವು. ಈ ರಾಜ್ಯಗಳಲ್ಲಿ ಹೆಚ್ಚು ಪ್ರಜೆಗಳು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಡೀಸಲ್ ಬೆಲೆ ಹೆಚ್ಚಳವು ರೈತರ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರಿದೆ.

ಗ್ರಾಮೀಣ ಭಾಗದ ಪ್ರಜೆಗಳು ಟ್ರಂಪ್ ಪಕ್ಷದ ವಿರುದ್ಧ ಮತ ಚಲಾಯಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಟ್ರಂಪ್ ಬೆಂಬಲಿಸಿದ್ದ ಹಿಸ್ಪಾನಿಕ್ ಸ್ಪಾನಿಷ್ ಭಾಷೆ ಮಾತನಾಡುವ ದಕ್ಷಿಣ ಅಮೆರಿಕ ಖಂಡದ ದೇಶಗಳ ಮೂಲದ ಪ್ರಜೆಗಳು ವಲಸಿಗರ ಮೇಲೆ ಜರುಗುತ್ತಿರುವ ಕ್ರೂರ ಕ್ರಮದ ವಿರುದ್ಧ ಮತ ನೀಡಿದ್ದಾರೆ. ಪಕ್ಷದ ನಿಷ್ಠಾವಂತ ಉತ್ತಮ ಅಭ್ಯರ್ಥಿಗಳ ಬದಲಿಗೆ ಟ್ರಂಪ್ ತನ್ನ ದುರ್ಬಲ ಹಿಂಬಾಲಕರನ್ನು ಹೆಚ್ಚಿನ ಸೀಟುಗಳಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಗಳನ್ನಾಗಿ ನಿಲ್ಲಿಸಿದ್ದು ಸಹ ಪಕ್ಷದ ಸೋಲಿಗೆ ಕಾರಣವಾಗಿದೆ.

ಸ್ವ ಉದ್ಯೋಗಗಳಿಗೆ ವರವಾದ ಪಿಎಂಇಜಿಪಿ ಕೆಲವು ದಿನಗಳಿಂದ ಸ್ಟಾಪ್ !!


• ಉದಯವಾಹಿನಿ, ಬೆಂಗಳೂರು

ವರದಿ ಉಮೇಶ್ ಬಾಣಾವರ

ಹಲವಾರು ವರ್ಷಗಳಿಂದಲೂ ಕೇಂದ್ರ ಸರ್ಕಾರದ ವತಿಯಿಂದ ನಿರುದ್ಯೋಗಿಗಳ ಪಾಲಿಗೆ ವರವಾಗಿರುವ ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಅಡಿಯಲ್ಲಿ ಬರುವ ಪಿಎಂಇಜಿಪಿ ಯೋಜನೆ ಅಡಿಯಲ್ಲಿ ದೇಶಾದ್ಯಂತ ಕೋಟ್ಯಾಂತರ ನಿರುದ್ಯೋಗಿ ಯುವಕ ಯುವತಿಯರು ಸಾಲಕ್ಕಾಗಿ ಅರ್ಜಿ ಸಲ್ಲಿಸಿ ಈ ಯೋಜನೆಯಡಿಯಲ್ಲಿ ಸಹಾಯಧನ . ಯೋಜನೆಯ ಬಗ್ಗೆ ನುರಿತ ತರಬೇತಿ ಸಂಸ್ಥೆಗಳ ವತಿಯಿಂದ ಸಾಲ ಮಂಜೂರಾದ ಅಭ್ಯರ್ಥಿಗಳಿಗೆ ತರಬೇತಿಯನ್ನು ಸಹ ನೀಡಿ ಸಾಲ ಪಡೆದ ಅಭ್ಯರ್ಥಿಗಳು ಶೇಕಡಾ 90ರಷ್ಟು ತಮ್ಮ ಜೀವನವನ್ನು ನಿರೂಪಿಸಿಕೊಂಡು ಬ್ಯಾಂಕಿಗೂ ಸಹ ಸಾಲವನ್ನು ಮರುಪಾವತಿ ಮಾಡುತ್ತಾ ಒಂದು ತಮ್ಮ ಜೀವನ ರೂಪಿಸಿಕೊಳ್ಳುವಲ್ಲಿ ಈ ಯೋಜನೆಯಿಂದ ಬಹುತೇಕ ಯಶಸ್ವಿಯಾಗಿದ್ದಾರೆ.

ಕೇಂದ್ರ ಸರ್ಕಾರದ ಈ ಯೋಜನೆ ತುಂಬಾ ಯಶಸ್ವಿ ಯೋಜನೆಯಾಗಿದ್ದು ದೇಶದ ನಿರುದ್ಯೋಗ ನಿರ್ಮೂಲನೆ ಮಾಡಿ ಸ್ವಉದ್ಯೋಗ ಕಲ್ಪಿಸಿಕೊಳ್ಳುವ ಯುವಜನತೆಯಲ್ಲಿ ಯಶಸ್ವಿ ದಾಪುಗಾಲು ಇಡುತ್ತಿದೆ .

ಇಂತಹ ಯೋಜನೆ ಕಳೆದ ಹಲವಾರು ತಿಂಗಳುಗಳಿಂದ ನಿಂತು ಹೋಗಿದ್ದು ನಿರುದ್ಯೋಗಿಗಳು ತಮ್ಮ ಅರ್ಜಿಯನ್ನು ಸಾಲಕ್ಕಾಗಿ ಆನ್ಲೈನ್ ಮುಖಾಂತರ ಸಲ್ಲಿಕೆ ಯಾಗದೆ ಅಲ್ಲದೆ ಕೆಲವು ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿ



ಅರ್ಜಿಗಳು ಬ್ಯಾಂಕಿಗೂ ಬರದೇ ಜಿಲ್ಲಾ ಮಟ್ಟದ ಪಿಎಮ್‌ಇಜಿಪಿ ಅಧಿಕಾರಿಗಳು ಸಿಬ್ಬಂದಿಗಳು ಮತ್ತು ಅರ್ಜಿ ಸಲ್ಲಿಸಿರುವ ಅರ್ಜಿದಾರರ ಮಧ್ಯೆ ದಿನೇ ದಿನೇ ಸಂಘರ್ಷಕ್ಕೆ ಕಾರಣವಾಗುತ್ತಿದೆ ಈ ಬಗ್ಗೆ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಇಲಾಖೆ ಆಗಿರುವುದರಿಂದ ಸ್ಪಷ್ಟ ಮಾಹಿತಿಯು ಸಹ ತಿಳಿಯದಂತಾಗಿದೆ ಆದ್ದರಿಂದ ಕೂಡಲೇ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಜಿ ಅವರು ಈ ಬಗ್ಗೆ ಸೂಕ್ತ ಗಮನಹರಿಸಿ ದೇಶಾದ್ಯಂತ ಕೋಟ್ಯಂತರ ನಿರುದ್ಯೋಗಿಗಳ ಪಾಲಿನ ಆಶಾಕಿರಣ ವಾಗಿರುವ ಈ ಯೋಜನೆಯ ಅರ್ಜಿಗಳು ಬೇಗನೆ ಬ್ಯಾಂಕುಗಳಿಗೆ ತಲುಪುವಲ್ಲಿ

ಸ್ವಉದ್ಯೋಗ ಕಲ್ಪಿಸಿಕೊಳ್ಳುವ ಯುವಜನತೆಯಲ್ಲಿ ಯಶಸ್ವಿ ದಾಪುಗಾಲು


ಅರ್ಜಿ ಸಲ್ಲಿಸಿರುವ ಫಲಾನುಭವಿಗಳಿಗೆ ಸಾಲ ಮಂಜೂರಾಗುವಲ್ಲಿಯೂ ಸಹ ಸೂಕ್ತ ನಿರ್ದೇಶನ ನೀಡಬೇಕಾಗಿದೆ ಎಂದು ಅರ್ಜಿ ಸಲ್ಲಿಸಿರುವ ಫಲಾನುಭವಿಗಳು ಉದಯವಾಹಿನಿ ಪತ್ರಿಕೆಗೆ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಪಿಎಂಇಜಿಪಿ ಬಗ್ಗೆ ನಕಲಿ ಪ್ರಚಾರ ನಿಲ್ಲಿಸುವಂತೆ ಒತ್ತಾಯ

ಸಾಮಾಜಿಕ ಜಾಲತಾಣಗಳ ಮುಖಾಂತರ ಕೆಲವು ವ್ಯಕ್ತಿಗಳು ಹಾಗೂ ನಕಲಿ ಸಂಸ್ಥೆಗಳು ನಕಲಿ ಪ್ರಚಾರ ನಡೆಸುತ್ತಾ ನಿರುದ್ಯೋಗಿಗಳಿಗೆ ಹಾಗೂ ಸಾಲಕ್ಕಾಗಿ ಸ್ವ ಉದ್ಯೋಗ ಕಲ್ಪಿಸಿಕೊಳ್ಳಲು ಯುವಕ ಯುವತಿಯರು ರಾಜ್ಯಾದ್ಯಂತ ಮೋಸ ಹೋಗುತ್ತಿದ್ದಾರೆ ಆದ್ದರಿಂದ ಸೈಬರ್ ಸಂಸ್ಥೆ ಇಂತಹ ನಕಲಿ ಪ್ರಚಾರ ನೀಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ವಿರುದ್ಧ ಸೂಕ್ತ ಕ್ರಮವನ್ನು ಸಹ ಕೈಗೊಳ್ಳಬೇಕಾಗಿದೆ ಎಂದು ಕೇಂದ್ರ ಸರ್ಕಾರವನ್ನು ಕೆಲವು ಸಂಘ ಸಂಸ್ಥೆಯ ಮುಖಂಡರು ಒತ್ತಾಯಿಸಿದ್ದಾರೆ

ಆನ್ಲೈನ್ ಮುಖಾಂತರ ಈ ಡಿ ಪಿ ತರಬೇತಿಯು ಸಹ ಗೊಂದಲದ ಗೂಡು

ಆನ್ಲೈನ್ ಮುಖಾಂತರ ಸ್ವ-ಉದ್ಯೋಗ ನಡೆಸುವ ಯುವಕ ಯುವತಿಯರು ಸಾಲಕ್ಕಾಗಿ ಅರ್ಜಿ ಸಲ್ಲಿಸಿ ಬ್ಯಾಂಕ್ ನಲ್ಲಿ ಮಂಜೂರು ಆಗಿರುವ ಅರ್ಜಿದಾರರು ಆನ್ಲೈನ್ ಮುಖಾಂತರ ಈ ಹಿಂದೆ ಇಡಿಪಿ ತರಬೇತಿಯನ್ನು ಪಡೆಯುತ್ತಿದ್ದರು ಇದು ಸಹ ಸಮಸ್ಯೆಯಾಗಿದ್ದು ಗೊಂದಲದ ಗೂಡಾಗಿದೆ ಇದಕ್ಕೆ ಅರ್ಜಿ ಸಲ್ಲಿಸಲು ಹೋದರೆ ಆನ್ಲೈನ್ ಮುಖಾಂತರ ತೀವ್ರ ಸಮಸ್ಯೆಯಾಗುತ್ತಿದೆ ಇದನ್ನು ಸಹ ಬಗೆಹರಿಸಿ ಕೊಡಬೇಕೆಂದು ಪಿಎಂಇಜಿಪಿ ಫಲಾನುಭವಿ ಯುವಕ ಯುವತಿಯರು ಮನವಿ ಮಾಡಿದ್ದಾರೆ.



ಈ ದಿನದ ದರ ಪೆಟ್ರೋಲ್: 111.68 ₹/L ಡೀಸೆಲ್ : 99.56 ₹/L ಬಂಗಾರ: ₹14,280/Gram24ct ₹13,090/Gram22ct ಬೆಳ್ಳಿ: ₹200.00/Gram

ಬಿ.ಎಚ್.ಇ.ಎಲ್. ಸಂಸ್ಥೆಯಲ್ಲಿ 71ನೇ ಕನ್ನಡ ರಾಜ್ಯೋತ್ಸವ ಆಚರಣೆ

• **ಉದಯವಾಹಿನಿ, ಬೆಂಗಳೂರು**

ಮಲ್ಲೇಶ್ವರಂ ಬಿ.ಎಚ್.ಇ.ಎಲ್. ಸಂಸ್ಥೆಯಲ್ಲಿ 71ನೇ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು. ಬಿ.ಎಚ್.ಇ.ಎಲ್. ಎಸ್‌ಬಿಡಿ ವಿಭಾಗದ ಪ್ರಧಾನ ವ್ಯವಸ್ಥಾಪಕರು ಹಾಗೂ ಮುಖ್ಯಸ್ಥರಾದ ಶ್ರೀಮತಿ ಅರುಣಾ ಗುಲಾಟಿ, ಐಎಸ್‌ಜಿ ವಿಭಾಗದ ಪ್ರಧಾನ ವ್ಯವಸ್ಥಾಪಕರಾದ ಎಂ.ವಿ. ಗೌತಮ್ ಹಾಗೂ ಮಾನವ ಸಂಪನ್ಮೂಲ ವಿಭಾಗದ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕರಾದ ಸಿ.ಎಚ್. ಅಮರ್ ಕುಮಾರ್ ರವರು ಕನ್ನಡ ಧ್ವಜರೋಹಣ ಮಾಡಿ, ರಾಜ್ಯೋತ್ಸವ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ

ಉದಯವಾಹಿನಿ ಚಿತ್ರ



ಹಾಗೂ ಉಪಾಧ್ಯಕ್ಷರಾದ ಶ್ರೀ ಎನ್. ರಾಮರಾಜು ಉಪಸ್ಥಿತರಿದ್ದರು. ವಿವಿಧ ಕಾರ್ಮಿಕ ಸಂಘಟನೆಗಳು ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಬಿ.ಎಚ್.ಇ.ಎಲ್. ಅಧಿಕಾರಿಗಳು, ಸಿಬ್ಬಂದಿ ವರ್ಗದವರು ತಮ್ಮ ಕುಟುಂಬ ಸದಸ್ಯರೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕನ್ನಡ ಭಾಷೆಯ ಶ್ರೀಮಂತಿಕೆ, ಕರ್ನಾಟಕದ ಐತಿಹಾಸಿಕ ಪರಂಪರೆ ಕನ್ನಡಿಗರ ಸ್ವಾಭಿಮಾನದ ಮಹತ್ವವನ್ನು ಒತ್ತಿಹೇಳಿದರು. ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆಗೆ ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವುದು ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿಯಾಗಿದೆ.

ಬಿಹೆಚ್.ಇ.ಎಲ್.ಸಂಸ್ಥೆಯ ಅಧಿಕಾರಿ, ನೌಕಕರಿಂದ ಕನ್ನಡ ಚಲನಚಿತ್ರಗೀತೆ ಮತ್ತು ನೃತ್ಯ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬಿ.ಎಚ್.ಇ.ಎಲ್. ಮಲ್ಲೇಶ್ವರಂ ಸಂಕೀರ್ಣದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಆಚರಣೆಯು ಕನ್ನಡ ನಾಡು-ನುಡಿಯ ಮೇಲಿನ ಅಭಿಮಾನ, ಭಾಷಾ ಪ್ರೀತಿ ಹಾಗೂ ಸಾಂಸ್ಕೃತಿಕ ಏಕತೆಯನ್ನು ಪ್ರತಿಬಿಂಬಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು.

ಸರ್ಕಾರದ ಹಿಂಬಾಗಿಲ ನೇಮಕಕ್ಕೆ ಹೈಕೋರ್ಟ್ ತಡೆ..!

• **ಉದಯವಾಹಿನಿ, ಬೆಂಗಳೂರು**

ಸೋತವರಿಗೆ ಅಭ್ಯರ್ಥಿಗೆ ಹಿಂಬಾಗಿಲ ಪ್ರವೇಶಕ್ಕೆ ಅವಕಾಶವಿಲ್ಲ, ರಾಜಕೀಯ ನಿಷ್ಠೆಗೆ ಸಾರ್ವಜನಿಕ ಹುದ್ದೆಗಳ ಬಹುಮಾನವಾಗಿ ನೀಡಬೇಡಿ ಸರ್ಕಾರಕ್ಕೆ ಹೈಕೋರ್ಟ್ ಖಡಕ್ ಎಚ್ಚರಿಕೆ ಚುನಾವಣೆಯಲ್ಲಿ ಸಾರ್ವಜನಿಕರಿಂದ ತಿರಸ್ಕೃತರಾದ ರಾಜಕಾರಣಿಗಳಿಗೆ ಹಿಂಬಾಗಿಲಿನಿಂದ ಅಧಿಕಾರ ನೀಡುವ ರಾಜ್ಯ ಸರ್ಕಾರದ ತಂತ್ರಕ್ಕೆ ಹಿನ್ನಡೆಯಾಗಿದೆ. ಸಾರ್ವಜನಿಕ ಹುದ್ದೆಗಳು ಜನಸೇವೆಗಾಗಿ ಇವೆಯೇ ಹೊರತು, ಚುನಾವಣೆಯಲ್ಲಿ ಸೋತವರಿಗೆ ನೀಡುವ ಸಾಂತ್ವನ ಬಹುಮಾನಗಳಲ್ಲ ಎಂದು ನ್ಯಾಯಾಲಯ ತೀಕ್ಷ್ಣವಾಗಿ ಹೇಳಿದೆ. ಆಡಳಿತಾತ್ಮಕ ಮತ್ತು ಸಾರ್ವಜನಿಕ ಹುದ್ದೆಗಳನ್ನು ರಾಜಕೀಯ ನಿಷ್ಠೆ ಅಥವಾ ವೈಯಕ್ತಿಕ ಮಹತ್ವಾಕಾಂಕ್ಷೆಗಳಿಗೆ ತೃಪ್ತಿಪಡಿಸುವ ಬಹುಮಾನವಾಗಿ ಬಳಸಿಕೊಳ್ಳಬಾರದು. ಚುನಾವಣೆಯಲ್ಲಿ ಜನರಿಂದ ತಿರಸ್ಕೃತರಾದವರನ್ನು ಮತ್ತೆ ಅದೇ ಕ್ಷೇತ್ರದ ಸಮಿತಿಗಳಿಗೆ ಅಧ್ಯಕ್ಷರನ್ನಾಗಿ ಕೂರಿಸುವುದು ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾದುದು ಎಂದು ಹೇಳಿದೆ. ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ

ಭೂಸಕ್ರಮ (ಫಾರಂ 50, 53, 57) ಹೆಚ್ಚುವರಿ ಸಮಿತಿಗೆ ಅಧ್ಯಕ್ಷರನ್ನಾಗಿ ಸೋತ ಅಭ್ಯರ್ಥಿಯನ್ನು ನೇಮಿಸಿದ್ದ ಸರ್ಕಾರದ ಆದೇಶವನ್ನು ಹೈಕೋರ್ಟ್‌ನ ವಿಭಾಗೀಯ ಪೀಠ ಸಂಪೂರ್ಣವಾಗಿ ರದ್ದುಗೊಳಿಸಿದೆ. ಮುಂದುವರಿದ ಭಾಗವಾಗಿ 2023ರ ಡಿಸೆಂಬರ್ 26ರಂದು ಹೊರಡಿಸಲಾಗಿದ್ದ ಅಧಿಸೂಚನೆಯನ್ನೂ ರದ್ದುಗೊಳಿಸಿದೆ.

ಗ್ಯಾಸ್ ಸಿಲಿಂಡರ್ ಡೆಲಿವರಿ ವೇಳೆ ಭಾರಿ ಅಗ್ನಿ ಅವಘಡ,

• **ಉದಯವಾಹಿನಿ, ಬೆಂಗಳೂರು**

ಮನೆಗೆ ಗ್ಯಾಸ್ ಸಿಲಿಂಡರ್ ಪೂರೈಸಲು ಬಂದಿದ್ದ ಡೆಲಿವರಿ ಬಾಯ್, ಸಿಲಿಂಡರ್ ಅನ್ನು ಹೊತ್ತು ತಂದು ಕೆಳಗಿಡುತ್ತಿದ್ದಂತೆಯೇ ಏಕಾಏಕಿ ಬೆಂಕಿ ಹೊತ್ತಿಕೊಂಡು ಸ್ಫೋಟ ಸಂಭವಿಸಿದ ಘಟನೆ ಬೆಂಗಳೂರಿನ ಮಲ್ಲೇಶ್ವರಂನಲ್ಲಿ ನಡೆದಿದೆ. ಈ ದುರ್ಘಟನೆಯಲ್ಲಿ ಡೆಲಿವರಿ ಬಾಯ್ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ರಾಜಧಾನಿಯ ಮಲ್ಲೇಶ್ವರಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ಸಂಭವಿಸಿದೆ.

ಈ ಘಟನೆಯ ವಿಡಿಯೋ ಮನೆಗೆ ಅಳವಡಿಸಲಾಗಿದ್ದ ಸಿಸಿಟಿವಿಯಲ್ಲಿ ಈ ಭೀಕರ ದೃಶ್ಯ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗುತ್ತಿದೆ. ಮನೆಯ ಮಹಿಳೆಯೊಬ್ಬರು ಆಗತಾನೇ ಮನೆಯ ಮುಂಭಾಗದ ಹೊಸ್ತಿಲನ್ನು ತೊಳೆದು, ಪೂಜೆ ಮಾಡಿ ಹಣತೆ ದೀಪವನ್ನು ಹಚ್ಚಿಟ್ಟಿದ್ದರು.

ಅದೇ ಸಮಯಕ್ಕೆ ಸರಿಯಾಗಿ ಆ ಮನೆಗೆ ಗ್ಯಾಸ್ ಸಿಲಿಂಡರ್ ಡೆಲಿವರಿ ಮಾಡಲು ಡೆಲಿವರಿ ಬಾಯ್ ಆಗಮಿಸಿದ್ದರು. ಮನೆಯ ಹೊಸ್ತಿಲ ಮುಂದೆ ಉರಿಯುತ್ತಿದ್ದ ದೀಪವನ್ನು ಗಮನಿಸದ ಡೆಲಿವರಿ ಬಾಯ್, ತಾವು ಹೆಗಲ ಮೇಲೆ ಹೊತ್ತು ತಂದಿದ್ದ ಸಿಲಿಂಡರ್ ಅನ್ನು ತಂದು ಬಾಗಿಲ ಬಳಿ ಇಟ್ಟಿದ್ದಾರೆ. ಬಳಿಕ ಸಿಲಿಂಡರ್‌ಗೆ ಅಳವಡಿಸಿದ್ದ ಸೀಲ್ ತೆಗೆಯುತ್ತಲೇ ಗ್ಯಾಸ್ ಸೋರಿಕೆಯಾಗಿದೆ. ಇದೇ ಸಂದರ್ಭದಲ್ಲೇ ಸಿಲಿಂಡರ್ ಕೆಳಗಿಡುತ್ತಿದ್ದಂತೆಯೇ ಲೀಕ್ ಆಗಿದ್ದ ಅನಿಲವು ಹೊಸ್ತಿಲ ಮೇಲಿದ್ದ ದೀಪದ ಬೆಂಕಿಯ ಸ್ಪರ್ಶಕ್ಕೆ ಸಿಲುಕಿ, ಏಕಾಏಕಿ ಭಾರಿ ಪ್ರಮಾಣದ ಬೆಂಕಿ ಭುಗಿಲೆದ್ದು ಸ್ಫೋಟಗೊಂಡಿದೆ.

ವಯಕ್ತಿಕ ಸುಖ, ಸ್ವಾರ್ಥ ಬದಿಗಿಟ್ಟು ದೇಶ ಸೇವೆ ಮಾಡುತ್ತಿರುವ ಮೋದಿ'

ವಿದೇಶಿ ಸಂಪರ್ಕಗಳ ಬಗ್ಗೆ ಮಾತನಾಡುವುದಾದರೆ, ಪದೇಪದೇ ವಿದೇಶ ಪ್ರವಾಸ ಕೈಗೊಳ್ಳುವ ರಾಹುಲ್ ಗಾಂಧಿಯವರೇ ತಮ್ಮ ವಿದೇಶಿ ಸಂಪರ್ಕಗಳ ಬಗ್ಗೆ ಸ್ಪಷ್ಟನೆ ನೀಡಬೇಕು

• **ಉದಯವಾಹಿನಿ, ಬೆಂಗಳೂರು**

1 ವಿದೇಶಿ ಸಂಪರ್ಕಗಳ ಬಗ್ಗೆ ಸ್ಪಷ್ಟನೆ ನೀಡಬೇಕು
2 ಭಾರತದ ಪ್ರಜಾಪ್ರಭುತ್ವದ ಟೀಕೆ ಮಾಡುವುದು
3 ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಚರ್ಚಿಸುವುದು

ಜಾರ್ಜ್ ಸೋರೋಸ್‌ನಿಂದ ಹಣ ಪಡೆದು ಭಾರತದ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಲು ರಾಹುಲ್ ಗಾಂಧಿ ಹೋರಾಟ ಮಾಡುತ್ತಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಅವರು, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಒಬ್ಬ ಹತಾಶ ರಾಜಕಾರಣಿಯಂತೆ ವರ್ತಿಸುತ್ತಿದ್ದಾರೆ. ತಮ್ಮ ಮೇಲಿರುವ ಆರೋಪಗಳನ್ನು ಇತರರ ಮೇಲೆ ಹೊರಿಸುವ ಪ್ರವೃತ್ತಿಯನ್ನು ಅವರು ಬೆಳೆಸಿಕೊಂಡಿದ್ದಾರೆ. ಜಾರ್ಜ್ ಸೋರೋಸ್‌ನಂತಹ ವಿದೇಶಿ ಶಕ್ತಿಗಳೊಂದಿಗೆ ಸಂಪರ್ಕ ಹೊಂದಿರುವವರ ಮೂಲಕ ಭಾರತದ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂಬ ಗಂಭೀರ ಪ್ರಶ್ನೆಗಳು ಇಂದು ದೇಶದ ಮುಂದೆ ಇವೆ.

ವಿದೇಶಿ ಸಂಪರ್ಕಗಳ ಬಗ್ಗೆ ಮಾತನಾಡುವುದಾದರೆ, ಪದೇಪದೇ ವಿದೇಶ ಪ್ರವಾಸ ಕೈಗೊಳ್ಳುವ ರಾಹುಲ್ ಗಾಂಧಿಯವರೇ ತಮ್ಮ ವಿದೇಶಿ ಸಂಪರ್ಕಗಳ ಬಗ್ಗೆ ಸ್ಪಷ್ಟನೆ ನೀಡಬೇಕು. ವಿದೇಶಿ ನೆಲದಲ್ಲಿ ಭಾರತದ ಪ್ರಜಾಪ್ರಭುತ್ವದ ಬಗ್ಗೆ ಟೀಕೆ ಮಾಡುವುದು, ದೇಶದ ಆಂತರಿಕ ವಿಚಾರಗಳನ್ನು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಚರ್ಚಿಸುವುದು ಮತ್ತು ಭಾರತದ ಘನತೆಗೆ ಧಕ್ಕೆ ತರುವಂತಹ ಹೇಳಿಕೆಗಳನ್ನು ನೀಡುವುದು ಅವರ ರಾಜಕೀಯ ನಡವಳಿಕೆಯಾಗಿದೆ ಎಂದು ಟೀಕಿಸಿದ್ದಾರೆ. ಜಾರ್ಜ್ ಸೋರೋಸ್ ಹಾಗೂ ಅವರೊಂದಿಗೆ ಸಂಬಂಧ ಹೊಂದಿರುವ ಸಂಸ್ಥೆಗಳ ವಿಚಾರವಾಗಿ ಹಲವು ಪ್ರಶ್ನೆಗಳು ಸಾರ್ವಜನಿಕ

ಉದಯವಾಹಿನಿ ಚಿತ್ರ



ವಲಯದಲ್ಲಿ ಚರ್ಚೆಯಾಗುತ್ತಿವೆ. ಇಂತಹ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ನಿಲುವು ಮತ್ತು ಅದರ ಚಟುವಟಿಕೆಗಳ ಬಗ್ಗೆ ದೇಶದ ಜನತೆಗೆ ಸ್ಪಷ್ಟನೆ ನೀಡುವ ಜವಾಬ್ದಾರಿ ಕಾಂಗ್ರೆಸ್ ನಾಯಕರ ಮೇಲಿದೆ, ವಿದೇಶಿ ಹಣದ ಪ್ರಭಾವದಿಂದ ಭಾರತದ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ, ದೇಶದ ಏಕತೆ, ಅಖಂಡತೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಯಾವುದೇ ಪ್ರಯತ್ನಗಳು ನಡೆದರೂ ಅವುಗಳನ್ನು ಸಹಿಸಲು ಸಾಧ್ಯವಿಲ್ಲ. ಇಂತಹ ಪ್ರಯತ್ನಗಳ ಬಗ್ಗೆ ದೇಶದ ಜನತೆ ಜಾಗೃತರಾಗಿರಬೇಕು ಎಂದಿದ್ದಾರೆ. ಅಂತಹ ಪ್ರಧಾನಮಂತ್ರಿ, ನರೇಂದ್ರ, ಮೋದಿ ಅವರ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡುವುದು ಕೇವಲ ಒಬ್ಬ ವ್ಯಕ್ತಿಗೆ ಮಾಡುವ ಅವಮಾನವಲ್ಲ, ದೇಶದ ಅಭಿವೃದ್ಧಿಯನ್ನು ಬಯಸುವ ಕೋಟ್ಯಂತರ ಭಾರತೀಯರ ಭಾವನೆಗಳಿಗೆ ಮಾಡುವ ಅವಮಾನವಾಗಿದೆ.

ಸೂರ್ಯನ ತೇಜಸ್ಸಿನ ಮುಂದೆ ಇತರ ಬೆಳಕುಗಳು ಮಂಕಾಗುವಂತೆ, ಪ್ರಧಾನಮಂತ್ರಿ, ನರೇಂದ್ರ, ಮೋದಿ ಅವರ ದೇಶಸೇವೆ, ದೂರದೃಷ್ಟಿ ಮತ್ತು ನಾಯಕತ್ವದ ಮುಂದೆ ಇಂತಹ ಕ್ಷುಲ್ಲಕ ಟೀಕೆಗಳಿಗೆ ಯಾವುದೇ ಮಹತ್ವವಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಇಂತಹ ವ್ಯರ್ಥ ಆರೋಪಗಳಿಗೆ ಹೆಚ್ಚು ಮಹತ್ವ ನೀಡುವ ಅಗತ್ಯವಿಲ್ಲ.

ಪ್ರಧಾನಮಂತ್ರಿ, ನರೇಂದ್ರ, ಮೋದಿ ಅವರು 2047ರ ವೇಳೆಗೆ ಭಾರತವನ್ನು ವಿಕಸಿತ ರಾಷ್ಟ್ರವನ್ನಾಗಿ ರೂಪಿಸುವ ಸಂಕಲ್ಪ ಮಾಡಿದ್ದಾರೆ.

ಆತ್ಮನಿರ್ಭರ ಭಾರತ ನಿರ್ಮಾಣದ ಮೂಲಕ ಭಾರತವನ್ನು ಜಾಗತಿಕ ಮಟ್ಟದಲ್ಲಿ ಬಲಿಷ್ಠ ರಾಷ್ಟ್ರವನ್ನಾಗಿ ಮಾಡುವ ಗುರಿ ಹೊಂದಿದ್ದಾರೆ.


ಈ ಮಹತ್ವದ ಸಂಕಲ್ಪಕ್ಕೆ ನಾವೆಲ್ಲರೂ ಸಂಪೂರ್ಣ ಬೆಂಬಲವಾಗಿ ನಿಲ್ಲಬೇಕು. ಭಾರತದ ಸಂವಿಧಾನ, ಪ್ರಜಾಪ್ರಭುತ್ವದ ಮೌಲ್ಯಗಳು, ದೇಶದ ಏಕತೆ ಮತ್ತು ಅಖಂಡತೆಯನ್ನು ಕಾಪಾಡುವ ಜೊತೆಗೆ ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣಕ್ಕೆ ಕೈಜೋಡಿಸಬೇಕು.

> **ವಿಶ್ವದ ಮುಂಚೂಣಿ ರಾಷ್ಟ್ರವಾಗಿ ಭಾರತ ಹೊರಹೊಮ್ಮಬೇಕು, ಜಾಗತಿಕ ನಾಯಕತ್ವದಲ್ಲಿ ಭಾರತಕ್ಕೆ ಗೌರವಯುತ ಸ್ಥಾನ ದೊರೆಯಬೇಕು ಎಂಬ ಪ್ರಧಾನಮಂತ್ರಿ, ನರೇಂದ್ರ, ಮೋದಿ ಅವರ ಸಂಕಲ್ಪವನ್ನು ನನಸಾಗಿಸಲು ನಾವೆಲ್ಲರೂ ಒಗ್ಗಟ್ಟಿನಿಂದ ಶ್ರಮಿಸೋಣ ಎಂದು ಕರೆ ನೀಡಿದ್ದಾರೆ.-ಸಂಸದ ಬಸವರಾಜ ಬೊಮ್ಮಾಯಿ**

> **ನಮ್ಮ ಪ್ರಧಾನಮಂತ್ರಿ, ನರೇಂದ್ರ, ಮೋದಿ ಅವರು ಮೊದಲು ದೇಶವನ್ನು ಪ್ರೀತಿಸುವ, ದೇಶದ ಹಿತವನ್ನೇ ಉಸಿರಾಗಿಸಿಕೊಂಡಿರುವ ನಾಯಕರು. ವೈಯಕ್ತಿಕ ಸುಖ, ಸ್ವಾರ್ಥ ಮತ್ತು ಅಧಿಕಾರದ ಆಸೆಗಳನ್ನು ಬದಿಗಿಟ್ಟು ತಮ್ಮ ಇಡೀ ಜೀವನವನ್ನು ದೇಶಸೇವೆಗೆ ಮುಡಿಪಾಗಿಟ್ಟಿರುವ ಮಹಾನ್ ನಾಯಕರು.-ಸಂಸದ ಬಸವರಾಜ ಬೊಮ್ಮಾಯಿ**

13ಕ್ಕೆ ಬೆಂಗಳೂರಿಗೆ ಪ್ರಧಾನಿ ಮೋದಿ

ಉದಯವಾಹಿನಿ ಚಿತ್ರ



• **ಉದಯವಾಹಿನಿ, ಬೆಂಗಳೂರು**

ಪ್ರಧಾನಿ ನರೇಂದ್ರ ಮೋದಿ ನವೆಂಬರ್ 13ರಂದು ಬೆಂಗಳೂರಿನಲ್ಲಿ ನಮ್ಮ ಮೆಟ್ರೋದ ಪಿಂಕ್ ಲೈನ್ ಹಾಗೂ ಮೈಸೂರಿನಲ್ಲಿ ವಿಶ್ವದ ಮೊದಲ ಒರೆಯಾದ ಎಲ್‌ಇಡಿ ಡೋಮ್ ತಾರಾಲಯವನ್ನು ಉದ್ಘಾಟಿಸಲಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ, ಪ್ರಧಾನಿ ಮೋದಿ ಅವರು ತಾವರೆಕೆರೆ ನಿಲ್ದಾಣದಿಂದ ಐಐಎಂಬಿ-ಬಿಳೇಕಹಳ್ಳಿ ನಿಲ್ದಾಣದವರೆಗೆ ಮೆಟ್ರೋದಲ್ಲಿ ಪ್ರಯಾಣಿಸಿ, ಪಿಂಕ್ ಲೈನ್ ಸಂಚಾರಕ್ಕೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು. ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ 7.5 ಕಿ.ಮೀ. ಉದ್ದದ ಎಲಿವೇಟೆಡ್ ಮಾರ್ಗ ಸೇರ್ಪಡೆಯೊಂದಿಗೆ, ಬೆಂಗಳೂರಿನ ಮೆಟ್ರೋ ಜಾಲವು ಈಗಿನ 96.1 ಕಿ.ಮೀ.ನಿಂದ 103.6 ಕಿ.ಮೀ.ಗೆ ವಿಸ್ತರಣೆಯಾಗಲಿದೆ. ಈ ಮೂಲಕ ಬೆಂಗಳೂರಿನ ಕಾರ್ಯಾಚರಣೆಯಲ್ಲಿರುವ ಮೆಟ್ರೋ ಜಾಲವು 100 ಕಿ.ಮೀ. ಗಡಿ ದಾಟಲಿದ್ದು, ದೆಹಲಿ ಬಳಿಕ ದೇಶದ ಎರಡನೇ ಅತಿದೊಡ್ಡ ಮೆಟ್ರೋ ಜಾಲ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ ಎಂದು ಸೂರ್ಯ ಹೇಳಿದರು. ನಾಲ್ಕು ತಿಂಗಳ ಅವಧಿಯಲ್ಲಿ ಮೋದಿ ಅವರು ಎರಡನೇ ಬಾರಿಗೆ ಮೈಸೂರಿಗೆ ಭೇಟಿ ನೀಡಲಿದ್ದಾರೆ.

ಆಗಸ್ಟ್1ರಂದು ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರವಾದ ವಿವೇಕ ಸ್ಮಾರಕವನ್ನು ಉದ್ಘಾಟಿಸಲು ಮೈಸೂರಿಗೆ ಭೇಟಿ ನೀಡಿದ್ದರು. ಅ.24ರಂದು ನಿಗದಿಯಾಗಿದ್ದ ಅವರ ಮೈಸೂರು ಭೇಟಿ ಮುಂದೂಡಿಕೆಯಾಗಿತ್ತು.

ವೀರಯೋಧ ಎ.ಪಿ. ಪ್ರಶಾಂತ್ ಪಾರ್ಕ್ ಸಮೀಪದ ಕೆಂಪು ಚೆಲುವಜಮ್ಮಣ್ಣಿ ನಗರದಲ್ಲಿ ಸ್ವಚ್ಛ ಭಾರತ್ ಮಿಷನ್‌ನ ಲಾಂಛನದ ಆಕಾರದಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಮಿಯಾವಾಕಿ ಕಿರು ಅರಣ್ಯವನ್ನೂ ಮೋದಿ ಉದ್ಘಾಟಿಸುವ ನಿರೀಕ್ಷೆಯಿದೆ.

ತನ್ನ ಚಾಳಿ ಮುಂದುವರೆಸಿದ್ರೆ, ತಕ್ಕ ಪಾಠ ಕಲಿಸ್ತೇವೆ; ಟಿ.ಎ ನಾರಾಯಣಗೌಡ

• **ಉದಯವಾಹಿನಿ, ಬೆಂಗಳೂರು**

ಕನ್ನಡಿಗರಿಗೆ ಉದ್ಯೋಗ ಸಂಬಂಧ ಕರ್ನಾಟಕ ರಕ್ಷಣಾ ವೇದಿಕೆ ಆರಂಭಿಸಿರುವ ಅಭಿಯಾನವನ್ನ ಟೀಕಿಸಿದ್ದ ತಮಿಳುನಾಡಿನ ಐಪಿಎಸ್ ಅಧಿಕಾರಿ ಧನುಷ್ ಕುಮಾರ ವಿರುದ್ದ ಗರಂ ಆದ ಕರವೇ ಅಧ್ಯಕ್ಷ ಟಿ.ಎ ನಾರಾಯಣಗೌಡರು, ತನ್ನ ಚಾಳಿ ಮುಂದುವರೆಸಿದರೇ ತಕ್ಕ ಪಾಠ ಕಲಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾರಾಯಣಗೌಡ, ಕರ್ನಾಟಕದ ಐಟಿ-ಬಿಟಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗದ ಹಕ್ಕನ್ನು ಪ್ರತಿಪಾದಿಸಿ

ಉದಯವಾಹಿನಿ ಚಿತ್ರ





ಮಾಹಿತಿ ಸಂಗ್ರಹಿಸುತ್ತಿರುವ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಾಚರಣೆಯನ್ನು ವಿರೋಧಿಸಿದ್ದ ಉದ್ಯಮಿ ಮೋಹನದಾಸ ಪೈ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕರ್ನಾಟಕದಲ್ಲಿದ್ದುಕೊಂಡು ಕನ್ನಡಿಗರ ಹಿತಾಸಕ್ತಿಯನ್ನು ಹಾಳುಮಾಡಲು ಯತ್ನಿಸುತ್ತಿರುವ ಮೋಹನದಾಸ ಪೈ ಈ ರಾಜ್ಯದಲ್ಲಿದ್ದ ಶಕುನಿಯಂತಿದ್ದಾರೆ.

ಕನ್ನಡಿಗರ ಉದ್ಯೋಗದ ವಿಚಾರ ಪ್ರಸ್ತಾಪಿಸಿದರೆ ಕ್ಯಾತೆ ತೆಗೆಯುವ ಅವರಿಗೆ ಕರ್ನಾಟಕದಲ್ಲಿ ಇರಲು ಯೋಗ್ಯತೆಯಿಲ್ಲ, ಅವರು ತಕ್ಷಣವೇ ರಾಜ್ಯ ತೊರೆಯಬೇಕು ಎಂದು ನಾರಾಯಣಗೌಡ ವಾಗ್ದಾಳಿ ನಡೆಸಿದ್ದಾರೆ. ಇತ್ತೀಚೆಗೆ ವಿವಾದಾತ್ಮಕ ಹೇಳಿಕೆ ನೀಡಿದ್ದ ತಮಿಳುನಾಡಿನ ಐಪಿಎಸ್ ಅಧಿಕಾರಿ ಧನುಷ್‌ಕುಮಾರ್ ಗರಂ ಆದ ಅವರು, ತಮ್ಮ ಹಳೆಯ ಚಾಳಿಯನ್ನು ಮುಂದುವರಿಸಿದರೆ ಸೂಕ್ತ ರೀತಿಯಲ್ಲೇ ತಕ್ಕ ಪಾಠ ಕಲಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಕನ್ನಡ ಉಳಿವಿಗಾಗಿ ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಹಲವು ವರ್ಷಗಳಿಂದ ಕನ್ನಡಿಗರಿಗೆ ಉದ್ಯೋಗ ಸಿಗುತ್ತಿಲ್ಲವೆಂಬ ಕೂಗು ಇದೆ. 1984ರಲ್ಲಿ ಅಂದಿನ ಸಿಎಂ ರಾಮಕೃಷ್ಣ ಹೆಗಡೆ ಸಮಿತಿ ರಚಿಸಿದ್ದರು. ಡಾ. ಸರೋಜಿನಿ ಮಹಿಷಿ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದ್ದರು.

ಜನರಿಗಲ್ಲ, ಹೈಕಮಾಂಡ್ ಮೆಚ್ಚಿಸಲು ಡಿಕೆಶಿ ಕೆಲಸ ಮಾಡ್ತಿದ್ದಾರೆ

• **ಉದಯವಾಹಿನಿ, ಬೆಂಗಳೂರು**

ಕಾಂಗ್ರೆಸ್ ಪಕ್ಷವನ್ನು ಸೋಲಿಸಲು ಜನರು ಈಗಾಗಲೇ ನಿರ್ಧರಿಸಿದ್ದಾರೆ. ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 150ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ. ಇದಕ್ಕಾಗಿ ಉತ್ತಮ ಯುವ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರೆ ಸಾಕು ಎಂದು ಬಿಜೆಪಿ ಹಿರಿಯ ನಾಯಕ ಹಾಗೂ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ. 2028ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಜನರು ಮತ ಹಾಕುವುದಿಲ್ಲ, ಬಿಜೆಪಿ 150ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದರು. ರಾಜ್ಯ ಸರ್ಕಾರ ನಡೆಯುತ್ತಿರುವ ಯೋಜನೆಗಳನ್ನು ಪೂರ್ಣಗೊಳಿಸುವತ್ತ ಗಮನಹರಿಸುತ್ತಿಲ್ಲ.

ಬದಲಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಪಕ್ಷದ ಹೈಕಮಾಂಡ್ ಹಾಗೂ ಗಾಂಧಿ ಕುಟುಂಬವನ್ನು ಮೆಚ್ಚಿಸಲು ಮುಂದಾಗಿದ್ದಾರೆ. ಪಕ್ಷದ ವರಿಷ್ಠರಿಗೆ ಹಣ ಸಂಗ್ರಹಿಸಲು ಅನುಕೂಲವಾಗುವ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ.

ಅವರು ರಾಜ್ಯದ ಜನರಿಗಾಗಿ ಕೆಲಸ ಮಾಡುತ್ತಿಲ್ಲ, ಪಕ್ಷದ ಹೈಕಮಾಂಡ್‌ಗಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಸ್ಟಿಂಗ್ ಆಪರೇಷನ್ ವಿವಾದದ ಕುರಿತು ಪ್ರತಿಕ್ರಿಯಿಸಿ, ಈ ಬೆಳವಣಿಗೆಗಳಿಂದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲಿಗರು ಅಸಮಾಧಾನಗೊಂಡಿದ್ದಾರೆ. ಕಾಂಗ್ರೆಸ್ ಸರ್ಕಾರದ ವಿರುದ್ಧವೇ ತಿರುಗಿಬೀಳುವ ಸಾಧ್ಯತೆಯಿದೆ ಎಂದರು. ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿ ಮೂರು ಸ್ಥಾನಗಳನ್ನು ಗೆದ್ದಿದ್ದರೆ, ಜೆಡಿಎಸ್ ಒಂದು ಸ್ಥಾನವನ್ನು ಗೆದ್ದಿದೆ.

ವಕೀಲರ ಸರಣಿ ಹತ್ಯೆ ಕೃತ್ಯಕ್ಕೆ ತೀವ್ರ ಆಕ್ರೋಶ

ವಿಧಾನಸೌಧದ ಎದುರು ಕರಪತ್ರಗಳನ್ನು ಎಸೆದು ಆಕ್ರೋಶ

• **ಉದಯವಾಹಿನಿ, ಬೆಂಗಳೂರು**

ಉದಯವಾಹಿನಿ ಚಿತ್ರ



ಸಹ ವಕೀಲರ ಹತ್ಯೆಗಳನ್ನು ಖಂಡಿಸಿ, ವಕೀಲರಿಗೆ ಸೂಕ್ತ ಭದ್ರತೆ ಹಾಗೂ ಬಲವಾದ ಕಾನೂನು ರಕ್ಷಣೆ ಒದಗಿಸುವಂತೆ ಆಗ್ರಹಿಸಿ ಹೈಕೋರ್ಟ್ ಎದುರು 1,000ಕ್ಕೂ ಹೆಚ್ಚು ವಕೀಲರು ಪ್ರತಿಭಟನೆ ನಡೆಸಿದರು.

ನೂರಾರು ವಕೀಲರು ವಿಧಾನಸೌಧದತ್ತ ಮೆರವಣಿಗೆ ನಡೆಸಲು ಪ್ರಯತ್ನಿಸಿದರಾದರೂ, ಪಶ್ಚಿಮ ದ್ವಾರದ ಬಳಿ ಪೊಲೀಸರು ಅವರನ್ನು ತಡೆದರು.

ಪ್ರತಿಭಟನಾಕಾರರು ಫಲಕಗಳನ್ನು ಪ್ರದರ್ಶಿಸಿ, ವಿಧಾನಸೌಧದ ಎದುರು ಕರಪತ್ರಗಳನ್ನು ಎಸೆದು ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಆ ಮಾರ್ಗದಲ್ಲಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ವೈಟ್‌ಫೀಲ್ಡ್‌ನಲ್ಲಿ ಮಂಜುನಾಥ್ ಮತ್ತು ಅನ್ನಪೂರ್ಣೇಶ್ವರಿ ನಗರದಲ್ಲಿ ಶ್ರೀರಾಮ್ ಎಂಬ ಇಬ್ಬರು ವಕೀಲರ ಹತ್ಯೆ, ಹಾಗೂ ಗೌರಿಬಿದನೂರಿನಲ್ಲಿ ವಕೀಲ ವೆಂಕಟರಮಣ ಸನ್ನಕ್ಕಿ ಅವರ ಕೊಲೆಗೆ ಯತ್ನಿಸಿದ ಘಟನೆಗಳು ನಡೆದಿದ್ದು, ಇದರ ಬೆನ್ನಲ್ಲೇ ಕರ್ನಾಟಕ

ವ್ಯಾಜ್ಯಗಳನ್ನು ಇತ್ಯರ್ಥ

> **ಪೊಲೀಸರು ಪರ್ಯಾಯ ನ್ಯಾಯಾಲಯಗಳಂತೆ ಕಾರ್ಯನಿರ್ವಹಿಸುತ್ತಿದ್ದು, ಆಫ್ರಿಕಾದ ಪೊಲೀಸ್ ನ್ಯಾಯಮಂಡಳಿಗಳನ್ನು ನೆನಪಿಸುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಪೊಲೀಸ್ ಠಾಣೆಗಳು ಸಿವಿಲ್ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವ ಕೇಂದ್ರಗಳಾಗಿ ಬದಲಾಗುತ್ತಿವೆ ಎಂದು ಟೀಕಿಸಿದರು.**

ರಾಜ್ಯ ವಕೀಲರ ಪರಿಷತ್ತು ಮತ್ತು ಬೆಂಗಳೂರು ವಕೀಲರ ಸಂಘ (ಬಿಬಿಎ) ಜಂಟಿಯಾಗಿ ಪ್ರತಿಭಟನೆಗೆ ಕರೆ ನೀಡಿದ್ದವು.

ಹೈಕೋರ್ಟ್ ಸೇರಿದಂತೆ ವಿವಿಧ ನ್ಯಾಯಾಲಯಗಳ ವಕೀಲರು ಪ್ರತಿಭಟನೆಯಲ್ಲಿ ಪಾಲ್ಗೊಂಡು, ಹತ್ಯೆ ಪ್ರಕರಣಗಳ ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಇದೇ ವೇಳೆ ವಕೀಲರ ರಕ್ಷಣಾ ಕಾಯ್ದೆಯಲ್ಲಿ ಜಾಮೀನು ರಹಿತ ಕಠಿಣ ಸೆಕ್ಷನ್‌ಗಳನ್ನು ಸೇರಿಸಬೇಕು ಹಾಗೂ ಕನಿಷ್ಠ 10 ವರ್ಷಗಳ ಶಿಕ್ಷೆಗೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಮಾತನಾಡಿ, ಅಪರಾಧ ನ್ಯಾಯ ವ್ಯವಸ್ಥೆಯ ಆಡಳಿತದಲ್ಲಿ ಪೊಲೀಸ್ ಠಾಣೆಗಳು ಹಸ್ತಕ್ಷೇಪ ಮಾಡುತ್ತಿವೆ ಎಂದು ಆರೋಪಿಸಿದರು.

ಪತ್ನಿ ಸ್ವತಂತ್ರಳಾಗಿದ್ದರೆ ಪತಿ ಜೀವನಾಂಶ ನೀಡಬೇಕಾದ ಅಗತ್ಯವಿಲ್ಲ

• **ಉದಯವಾಹಿನಿ, ಬೆಂಗಳೂರು**

ಪತ್ನಿಯು ಆರ್ಥಿಕವಾಗಿ ಸ್ವಾವಲಂಬಿಯಾಗಿದ್ದು, ಗೌರವಯುತ ಜೀವನ ನಡೆಸಲು ಸಾಕಾಗುವಷ್ಟು ಗಳಿಸುತ್ತಿದ್ದರೆ, ಅಂತಹ ಸಂದರ್ಭದಲ್ಲಿ ಆಕೆಗೆ ಜೀವನಾಂಶ ನೀಡಬೇಕಾದ ಅಗತ್ಯವಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಸೆಕ್ಷನ್ 144 ಅನ್ನು ಉಲ್ಲೇಖಿಸಿ ತೀರ್ಪು ನೀಡಿರುವ ನ್ಯಾಯಮೂರ್ತಿ ಚಿಲ್ಲಾಕೂರ್ ಸುಮಲತಾ ಅವರ ಪೀಠವು, ತನ್ನನ್ನು ತಾನು ಸಾಕಿಕೊಳ್ಳಲು ಅಸಮರ್ಥಳಾಗಿರುವುದು ಪತ್ನಿಯು ಜೀವನಾಂಶ ಪಡೆಯಲು ಕಾನೂನಿನಲ್ಲಿ ಇರುವ ಅತ್ಯಗತ್ಯವಾದ ಮೊದಲ ಶರತ್ತಾಗಿದೆ.

ಎಲ್ಲಾ ಸಂದರ್ಭಗಳಲ್ಲೂ ಪತಿಯಾದವನು ಪತ್ನಿಯನ್ನು ಪೋಷಿಸಲೇಬೇಕು ಎಂದು ಕಾನೂನು ಹೇಳುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಪತ್ನಿ ಉತ್ತಮ ಶಿಕ್ಷಣ ಪಡೆದಿದ್ದು, ಉದ್ಯೋಗದಲ್ಲಿದ್ದು, ತನ್ನ ಜೀವನ ನಿರ್ವಹಣೆಗೆ ಸಾಕಾಗುವಷ್ಟು ಆದಾಯ ಗಳಿಸುತ್ತಿದ್ದರೆ ಆಕೆಯನ್ನು ಪತಿಯ ಮೇಲೆ ಅವಲಂಬಿತಳು ಎಂದು ಪರಿಗಣಿಸಲಾಗದು.

ಉದ್ಯೋಗ, ಆರ್ಥಿಕ ಸ್ವಾವಲಂಬನೆ ಮತ್ತು ಸ್ವತಂತ್ರವಾಗಿ ಜೀವನ ನಡೆಸುವ ಸಾಮರ್ಥ್ಯವು ಪತ್ನಿಯ ಜೀವನಾಂಶದ ಬೇಡಿಕೆಯನ್ನು ತಿರಸ್ಕರಿಸಲು ಸೂಕ್ತ ಆಧಾರಗಳಾಗಿವೆ ಎಂದು ಅಭಿಪ್ರಾಯಪಟ್ಟಿದೆ. ಇದೇ ವೇಳೆ ಪತ್ನಿಗೆ ಮಾಸಿಕ 20 ಸಾವಿರ ರೂಪಾಯಿ ಜೀವನಾಂಶ ನೀಡುವಂತೆ ಕೌಟುಂಬಿಕ ನ್ಯಾಯಾಲಯ ನೀಡಿದ್ದ ಆದೇಶವನ್ನು ರದ್ದುಗೊಳಿಸಿದೆ. ಪತಿಯ ಆದಾಯ ಪತ್ನಿಗಿಂತ ಹೆಚ್ಚಿದೆ ಎಂಬುದು ನಿಜ. ಆದರೆ, ಪತ್ನಿಯ ಆದಾಯ ಆಕೆಯ ಜೀವನ ನಿರ್ವಹಣೆಗೆ ಸಾಕಾಗದಷ್ಟು ಕಡಿಮೆ ಇದ್ದರೆ ಅಂತಹ ಪತ್ನಿಗೆ ಪತಿ ಜೀವನಾಂಶ ನೀಡುವುದು ಅನಿವಾರ್ಯವಾಗುತ್ತದೆ.

ದತ್ತಾಂಶ ಹಂಚಿಕೊಳ್ಳದ ಕೇಂದ್ರ ಚುನಾವಣಾ ಆಯೋಗ

• **ಉದಯವಾಹಿನಿ, ಬೆಂಗಳೂರು**

ಸ್ಥಳೀಯ ಸಂಸ್ಥೆಗಳ (ನಗರ ಪಾಲಿಕೆ) ಚುನಾವಣೆಗಳನ್ನು ನಡೆಸುವುದು ಕರ್ನಾಟಕ ರಾಜ್ಯ ಚುನಾವಣಾ ಆಯೋಗಕ್ಕೆ ಸವಾಲಾಗಿ ಮುಂದುವರಿದಿದೆ. ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಇದೆ ಪರಿಸ್ಥಿತಿ ಭಿನ್ನವಾಗಿಲ್ಲ, ಭಾರತೀಯ ಚುನಾವಣಾ ಆಯೋಗವು ನಮಗೆ ಇನ್ನೂ ದತ್ತಾಂಶವನ್ನು ನೀಡಿಲ್ಲ, ಅದನ್ನು ವಾರ್ಡ್‌ವಾರು ವಿಂಗಡಿಸಬೇಕಾಗುತ್ತದೆ. ದತ್ತಾಂಶ ಪಡೆಯುವಲ್ಲಿನ ವಿಳಂಬವು ಮುಂದಿನ ಕಾರ್ಯಕ್ರಮಗಳ ಮೇಲೆ ಪರಿಣಾಮ ಬೀರುತ್ತದೆ. ಸುಪ್ರೀಂ ಕೋರ್ಟ್ ಆದೇಶದಂತೆ, 2026ರ ಡಿಸೆಂಬರ್ ಅಂತ್ಯದೊಳಗೆ ನಗರ ಪಾಲಿಕೆ ಚುನಾವಣೆಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವುದು ಕಷ್ಟಕರವಾಗಬಹುದು ಎಂದು ರಾಜ್ಯ ಚುನಾವಣಾ ಆಯೋಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಗರ ಪಾಲಿಕೆ ಚುನಾವಣೆಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮುಂದೆ ಸಲ್ಲಿಸಲು, ಈಗಾಗಲೇ ನಡೆದಿರುವ ಘಟನೆಗಳು ಮತ್ತು ಮುಂದಿನ ದಿನಗಳಲ್ಲಿ ನಡೆಯಲಿರುವ ಕಾರ್ಯಕ್ರಮಗಳ ವಿವರವಾದ ಕಾಲಾನುಕ್ರಮಣಿಕೆಯನ್ನು ಸಿದ್ಧಪಡಿಸುತ್ತಿರುವುದಾಗಿ ಇತರ ಅಧಿಕಾರಿಗಳು ತಿಳಿಸಿದ್ದಾರೆ.

ಸೋಲುವ ನಾಯಕರ ಕಚ್ಚಾಟ- ಆಡಳಿತದಲ್ಲಿ ಹುಚ್ಚಾಟ

• **ಉದಯವಾಹಿನಿ, ಬೆಂಗಳೂರು**

ಸಿದ್ದರಾಮಯ್ಯ ಅವರ ಸ್ಟಿಂಗ್ ಆಪರೇಷನ್ ಮಾಡಿಸಿದ್ದು ಕಾಂಗ್ರೆಸ್ ನಾಯಕರೇ ಎಂಬುದು ಸಾಬೀತಾಗಿದೆ. 2028ರ ವಿಧಾನಸಭಾ ಚುನಾವಣೆಯಲ್ಲಿ ಜನರೇ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಲಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್ ಭವಿಷ್ಯ ನುಡಿದಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಆರ್. ಅಶೋಕ್, ಸ್ಟಿಂಗ್ ಆಪರೇಷನ್ ವಿವಾದದ ಪರಿಣಾಮ ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ನೆಲಕಚ್ಚಿದೆ. ಹಿರಿಯ ನಾಯಕ ಕೆ.ಎನ್. ರಾಜಣ್ಣ ಅವರೂ ಈ ಬಗ್ಗೆ ಭವಿಷ್ಯ ನುಡಿದಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಸಿದ್ದರಾಮಯ್ಯ ಅವರ ಬೆಂಬಲಿಗರು ಮತ್ತು ಮತದಾರರು ಕೂಡ ಕಾಂಗ್ರೆಸ್ ವಿರುದ್ಧ ನಿಂತಿದ್ದಾರೆ. ಇದರ ಪರಿಣಾಮ 2028ರ ವಿಧಾನಸಭಾ ಚುನಾವಣೆಯಲ್ಲೂ ಕಾಣಿಸಿಕೊಳ್ಳಲಿದೆ ಎಂದು ಅಶೋಕ್ ಹೇಳಿದ್ದಾರೆ. ಸಿಎಂ ಡಿ. ಕೆ ಶಿವಕುಮಾರ್ ಸರ್ಕಾರದ ವಿರುದ್ಧ ಹಲವು ಆರೋಪಗಳನ್ನು ಮಾಡಿರುವ ಅಶೋಕ್, ಆಂತರಿಕ ಕಚ್ಚಾಟ, ರೈತರಿಗೆ ಪರಿಹಾರ ನೀಡುವಲ್ಲಿ ವಿಳಂಬ, ಹಿರಿಯ ನಾಗರಿಕರು ಮತ್ತು ವಿಕಲಚೇತನರ ಪಿಂಚಣಿ ಸಮಸ್ಯೆ ಹಾಗೂ ಇಲಾಖೆಗಳ ಅನುದಾನದ ಕೊರತೆಯನ್ನು ಪ್ರಸ್ತಾಪಿಸಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಬಣ ರಾಜಕೀಯ ಎಲ್ಲೆ ಮೀರಿ ಹೋಗಿದೆ. ಈಗ ಸಚಿವ ಬಾಲಕೃಷ್ಣ ನೇರವಾಗಿ ಮಾಜಿ ಸಚಿವ ಕೆ.ಎನ್.ರಾಜಣ್ಣ ವಿರುದ್ಧ ಪಕ್ಷ ವಿರೋಧಿ ಚಟುವಟಿಕೆಯ ಆರೋಪ ಮಾಡಿದ್ದಾರೆ. ಸ್ಟಿಂಗ್ ಆಪರೇಷನ್, ವಿಧಾನಪರಿಷತ್ ಚುನಾವಣೆಯಲ್ಲಿ ಹೀನಾಯ ಸೋಲು, ಬಣ ರಾಜಕೀಯ, ಎಸ್ ಐಆರ್ ಹೋರಾಟಕ್ಕಾಗಿ ದೆಹಲಿಗೆ ಓಟ - ಇವೆಲ್ಲದರಿಂದಾಗಿ ಇಡೀ ಆಡಳಿತ ಮಕಾಡೆ ಮಲಗಿದೆ.

ಬಸ್ ದರ ಹೆಚ್ಚಳ ಮಾಡಿದ್ದೇಕೆ, ಎಷ್ಟು ಮಾಡಲಾಗಿದೆ?

ಸರ್ಕಾರ ಬಿಎಂಟಿಸಿಗೆ ಸರಾಸರಿ ಶೇ. 33ರಿಂದ 35ರಷ್ಟು ಹಾಗೂ ಇತರೆ ಮೂರು ನಿಗಮಗಳಿಗೆ ಶೇ. 23ರಷ್ಟು ದರ ಹೆಚ್ಚಳ ಮಾಡಲು ನಿರ್ಧರಿಸಿದೆ

• **ಉದಯವಾಹಿನಿ, ಬೆಂಗಳೂರು**

1 ಯೋಜನೆಗೂ ದರ ಏರಿಕೆಗೂ ಸಂಬಂಧವಿಲ್ಲ
2 80ರಷ್ಟು ಹಣ ಡೀಸೆಲ್ ಸಿಬ್ಬಂದಿ ವೆಚ್ಚಕ್ಕೆ
3 90ರಷ್ಟು ಹೆಚ್ಚಿಸುವಂತೆ ಪ್ರಸ್ತಾವನೆ ಸಲ್ಲಿಸಿತ್ತು

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬಸ್ ಪ್ರಯಾಣ ದರವನ್ನು ಸರಾಸರಿ ಶೇ. 33ರಿಂದ 35ರಷ್ಟು ಹೆಚ್ಚಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್‌ಟಿಕೆಟ್ ದರವನ್ನು ಸರಾಸರಿ ಶೇ. 23ರಷ್ಟು ಹೆಚ್ಚಿಸಲಾಗುವುದು. ಇಂದು ಬುಧವಾರ ಮಧ್ಯರಾತ್ರಿ ಈ ಪರಿಷ್ಕೃತ ದರ ಜಾರಿಗೆ ಬರಲಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ಇಂದು ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ಡೀಸೆಲ್ ಬೆಲೆ ಏರಿಕೆ, ನೌಕರರ ವೇತನ ಮತ್ತು ತುಟ್ಟಿಭತ್ಯೆ, ವಾಹನದ ಬಿಡಿಭಾಗಗಳ ಬೆಲೆ ಹೆಚ್ಚಳ ಹಾಗೂ ನಾಲ್ಕು ಸಾರಿಗೆ ನಿಗಮಗಳ ಮೇಲಿನ ಆರ್ಥಿಕ ಹೊರೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಪ್ರಯಾಣ ದರ ಪರಿಷ್ಕರಣೆ ಅನಿವಾರ್ಯವಾಗಿದೆ ಎಂದು ಹೇಳಿದರು. ನಿಗಮಗಳ ಒಟ್ಟು ವೆಚ್ಚದಲ್ಲಿ ಸುಮಾರು ಶೇ. 80ರಷ್ಟು ಹಣ ಡೀಸೆಲ್ ಮತ್ತು ಸಿಬ್ಬಂದಿ ವೆಚ್ಚಕ್ಕೆ ವಿನಿಯೋಗವಾಗುತ್ತದೆ ಎಂದು ತಿಳಿಸಿದರು. ಸರ್ಕಾರ ರಚಿಸಿದ್ದ ಸಾರ್ವಜನಿಕ ಸಾರಿಗೆ ಪ್ರಯಾಣ ದರ ನಿಯಂತ್ರಣ ಸಮಿತಿಯು ನಾಲ್ಕು ನಿಗಮಗಳು ಸಲ್ಲಿಸಿದ್ದ ಪ್ರಸ್ತಾವನೆಗಳನ್ನು ಪರಿಶೀಲಿಸಿತ್ತು. ಇಂಧನ ಮತ್ತು ಸಿಬ್ಬಂದಿ ವೆಚ್ಚ,



ಉದಯವಾಹಿನಿ ಚಿತ್ರ

ಬಿಡಿಭಾಗಗಳ ಖರ್ಚು ಹಾಗೂ ಬಾಕಿ ಹೊಣೆಗಾರಿಕೆಗಳನ್ನು ಪರಿಗಣಿಸಿ ಸಮಿತಿ ಅಕ್ಟೋಬರ್ 6ರಂದು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಬಿಎಂಟಿಸಿಗೆ ಶೇ. 45ರಷ್ಟು ಹಾಗೂ ಇತರೆ ಮೂರು ಸಾರಿಗೆ ನಿಗಮಗಳಿಗೆ ಶೇ. 28ರಷ್ಟು ವೆಚ್ಚ ಹೆಚ್ಚಳಕ್ಕೆ ಅನುಗುಣವಾಗಿ ದರ ಏರಿಕೆ ಮಾಡುವಂತೆ ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು. ನಾಲ್ಕು ಸಾರಿಗೆ ನಿಗಮಗಳು ಒಟ್ಟಾರೆಯಾಗಿ ಸುಮಾರು 10,200 ಕೋಟಿ ರೂಪಾಯಿ ನಷ್ಟ ಅನುಭವಿಸಿವೆ. ಸೆಪ್ಟೆಂಬರ್ 30ರ ವೇಳೆಗೆ ಅವುಗಳ ಒಟ್ಟು ಬಾಕಿ ಹೊಣೆಗಾರಿಕೆ ಮತ್ತು ಸಾಲದ ಮೊತ್ತ 9,912.10 ಕೋಟಿ ರೂಪಾಯಿಗಳಷ್ಟಾಗಿದೆ ಎಂದು ಸಚಿವರು ತಿಳಿಸಿದರು. ಇದರಲ್ಲಿ ನೌಕರರ ಭವಿಷ್ಯ ಪಾವತಿಸಬೇಕಿರುವ 2,916.80 ಕೋಟಿ ರೂ, ನಿವೃತ್ತಿ ಸೌಲಭ್ಯಗಳಿಗಾಗಿ 603.88 ಕೋಟಿ ರೂ, ವೇತನ ಪರಿಷ್ಕರಣೆಯ ಬಾಕಿ 664.17 ಕೋಟಿ ರೂ ಹಾಗೂ ಇತರೆ ಸಿಬ್ಬಂದಿ ಪಾವತಿಗಳಿಗಾಗಿ 356.76 ಕೋಟಿ ರೂ ಸೇರಿವೆ. ಹಂತವಾರು ಪರಿಷ್ಕೃತ ಪ್ರಯಾಣ ದರಗಳ ಪಟ್ಟಿ ಇನ್ನೂ ಬಿಡುಗಡೆಯಾಗಿಲ್ಲ, ಆದರೆ, ಪತ್ರಿಕಾ ಪ್ರಕಟಣೆಯ ಪ್ರಕಾರ, ಬಿಎಂಟಿಸಿಯ ಸಾಮಾನ್ಯ ಬಸ್‌ಗಳಲ್ಲಿ 2 ಕಿ.ಮೀ.ವರೆಗಿನ ಪ್ರಯಾಣಕ್ಕೆ 4 ರೂ ಹಾಗೂ 2ರಿಂದ 4 ಕಿ.ಮೀ.ವರೆಗಿನ ಪ್ರಯಾಣಕ್ಕೆ 6 ರೂ ಹೆಚ್ಚುವರಿ ದರ ವಿಧಿಸಲಾಗುತ್ತದೆ. ಇದಕ್ಕಿಂತ ಹೆಚ್ಚಿನ ದೂರದ ಪ್ರಯಾಣಕ್ಕೆ ಗರಿಷ್ಠ 12ರೂಗಳಷ್ಟು ದರ ಹೆಚ್ಚಳವಾಗಲಿದೆ. ಬಸ್ ಪ್ರಯಾಣ ದರ ಹೆಚ್ಚಳಕ್ಕೂ ಶಕ್ತಿ ಯೋಜನೆಗೂ ಯಾವುದೇ ಸಂಬಂಧವಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

> **ಕೆಎಸ್‌ಆರ್‌ಟಿಸಿ ಸೇರಿದಂತೆ ಇತರೆ ಮೂರು ನಿಗಮಗಳು ಶೇ. 32ರಿಂದ 34ರಷ್ಟು ದರ ಏರಿಕೆಗೆ ಮನವಿ ಮಾಡಿದ್ದವು. ಆದರೆ, ಸರ್ಕಾರ ಬಿಎಂಟಿಸಿಗೆ ಸರಾಸರಿ ಶೇ. 33ರಿಂದ 35ರಷ್ಟು ಹಾಗೂ ಇತರೆ ಮೂರು ನಿಗಮಗಳಿಗೆ ಶೇ. 23ರಷ್ಟು ದರ ಹೆಚ್ಚಳ ಮಾಡಲು ನಿರ್ಧರಿಸಿದೆ ಎಂದು ಹೇಳಿದರು.- ಸಚಿವ ಬೈರತಿ ಸುರೇಶ್**

ದರ ಏರಿಕೆ

ಹಾಲು ಮತ್ತು ಹಾಲಿನ ಉತ್ಪನ್ನಗಳ ದರವನ್ನು ಒಟ್ಟು ಘನಾಂಶದ ಆಧಾರದಲ್ಲಿ ರಾಜ್ಯ ಸರ್ಕಾರ ಹೆಚ್ಚಿಸಿದ ಬೆನ್ನಲ್ಲೇ ಬಸ್ ಪ್ರಯಾಣ ದರ ಏರಿಕೆಯನ್ನೂ ಘೋಷಿಸಲಾಗಿದೆ. ನವೆಂಬರ್ 1ರಿಂದ ಪ್ರತಿ ಲೀಟರ್ ಹಾಲಿನ ಮೂಲ ಬೆಲೆಯನ್ನು 8ರೂಪಾಯಿ ಹೆಚ್ಚಿಸುವ ನಿರ್ಧಾರವನ್ನು ಸರ್ಕಾರ ಪ್ರಕಟಿಸಿತ್ತು.

ಉದಯ ವಾಹಿನಿ

ಪ್ರಾದೇಶಿಕ

ಗುರುವಾರ
05 ನವೆಂಬರ್ 2026

03

ಮತದಾರರ ಪಟ್ಟಿಯನ್ನು ತಿರಸ್ಕರಿಸಲು ನ.5ರಂದು ಪ್ರತಿಭಟನೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರದಲ್ಲಿ ಮತ ಕಾವಲು ಸಮಿತಿಯ ಜಿಲ್ಲಾಧ್ಯಕ್ಷ ನೂರುಲ್ಲಾ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇಂದ್ರ ಚುನಾವಣಾ ಆಯೋಗ ಪ್ರಕಟಿಸಿರುವ ಎಸ್‌ಐಆರ್ ಅಂತಿಮ ಮತದಾರರ ಪಟ್ಟಿಯನ್ನು ತಿರಸ್ಕರಿಸುವಂತೆ ಆಗ್ರಹಿಸಿ ನವೆಂಬರ್ 5ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಎಸ್‌ಐಆರ್ ಪ್ರಕ್ರಿಯೆಯಿಂದ ದೇಶಾದ್ಯಂತ ಕೋಟ್ಯಂತರ ಅರ್ಹ ಮತದಾರರ ಹೆಸರುಗಳು ಕೈಬಿಡಲ್ಪಟ್ಟಿದ್ದು, ಕರ್ನಾಟಕದಲ್ಲಿಯೂ ಸುಮಾರು


ಉದಯವಾಹಿನಿ ಚಿತ್ರ

ಒಂದು ಕೋಟಿ ಮತದಾರರು ಮತದಾನದ ಹಕ್ಕು ಕಳೆದುಕೊಳ್ಳುವ ಆತಂಕ ಎದುರಾಗಿದೆ ಎಂದ ಅವರು, ನವೆಂಬರ್ 1ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿದ್ದವು ಮತ್ತು ಇದರ ಮುಂದುವರಿದ ಭಾಗವಾಗಿ ಬೆಂಗಳೂರಿನಲ್ಲಿ ಕಾಂಗ್ರೆಸ್ ಸೇರಿದಂತೆ ವಿವಿಧ ಜಾತ್ಯತೀತ ಪಕ್ಷಗಳು ಜನಪರ ಸಂಘಟನೆಗಳ ಬೆಂಬಲದೊಂದಿಗೆ ಈ ಹೋರಾಟ ನಡೆಯಲಿದೆ ಎಂದು ವಿವರಿಸಿದರು.

ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಎಸ್‌ಐಆರ್ ಅಂತಿಮ ಪಟ್ಟಿಯ ಬದಲಿಗೆ 2025ರ ಮತದಾರರ ಪಟ್ಟಿಯ ಆಧಾರದಲ್ಲಿ ನಡೆಸಬೇಕು, ಚುನಾವಣಾ ಆಯೋಗದ ಅಂತಿಮ ಪಟ್ಟಿಯನ್ನು ತಿರಸ್ಕರಿಸಬೇಕು ಮತ್ತು ಮುಖ್ಯ ಚುನಾವಣಾ ಆಯುಕ್ತರು ರಾಜೀನಾಮೆ ನೀಡಬೇಕು ಎಂಬುದು ಒಕ್ಕೂಟದ ಪ್ರಮುಖ ಬೇಡಿಕೆಗಳಾಗಿವೆ ಎಂದು ಅವರು ಸ್ಪಷ್ಟಪಡಿಸಿದರು

ಎಂಗೇಜ್‌ಮೆಂಟ್ ಬೆನ್ನಲ್ಲೇ ಮದುವೆಗೆ ಸಜ್ಜಾದ ಶಾಸಕ ದರ್ಶನ್ ಧ್ರುವನಾರಾಯಣ್

• ಉದಯವಾಹಿನಿ, ಚಾಮರಾಜನಗರ

ಎರಡು ದಿನಗಳ ಹಿಂದಷ್ಟೇ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ಮೂಲದ ವೈದ್ಯೆ ಡಾ. ಶ್ರೀನಿಧಿ ಅವರೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡ ಕಾಂಗ್ರೆಸ್ ನಾಯಕ ದಿ. ಆರ್. ಧ್ರುವನಾರಾಯಣ್ ಅವರ ಪುತ್ರ ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಇದೀಗ ಹಸೆಮಣೆ ಏರಲು ಸಜ್ಜಾಗಿದ್ದಾರೆ.

ಎಂಗೇಜ್‌ಮೆಂಟ್ ಕಾರ್ಯಕ್ರಮದ ಬೆನ್ನಲ್ಲೇ ಮದುವಗೆ ಸಿದ್ಧತೆ ನಡೆಸುತ್ತಿರುವ ದರ್ಶನ್ ಧ್ರುವನಾರಾಯಣ್ ಅವರು ಎಲ್ಲೋ ಕುಳಿತು ಯಾರನ್ನೋ ಕಳುಹಿಸಿ ಆಮಂತ್ರಣ ಪತ್ರಿಕೆ ನೀಡುವ ಬದಲು ಖುದ್ದು ತಾವೇ ಜನರನ್ನು ಭೇಟಿ ಮಾಡಿ, ಆಹ್ವಾನ ಪತ್ರಿಕೆ ನೀಡುತ್ತಿದ್ದಾರೆ. ಶಾಸಕ ದರ್ಶನ್ ಧ್ರುವನಾರಾಯಣ್ ಖುದ್ದು ತಾವೇ ಪ್ರತಿ ಊರಿಗೂ ಹೋಗಿ ಬೀಗರೂಟಕ್ಕೆ ಜನರನ್ನು ಕರೆಯುತ್ತಿರುವ ವಿಡಿಯೋ ಇದೀಗ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ಈ ಕುರಿತು ತಮ್ಮ ಫೇಸ್ ಬುಕ್ ನಲ್ಲಿ ಪೋಸ್ಟ್ ಹಾಕಿರುವ ದರ್ಶನ್ ಧ್ರುವನಾರಾಯಣ್ ಅವರು, ನ. 29ರಂದು ಚಾಮರಾಜನಗರ ತಾಲ್ಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ನಡೆಯಲಿರುವ ನನ್ನ ಆರತಕ್ಷತೆ ಮತ್ತು ಬೀಗರ ಔತಣಕೂಟಕ್ಕೆ ಆತ್ಮೀಯವಾಗಿ ಆಹ್ವಾನಿಸುವ ಸಲುವಾಗಿ ಇಂದು ನಂಜನಗೂಡು ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದೆ ಎಂದು ಹೇಳಿದ್ದಾರೆ.

ಅಂಬಾರಿ, ಸಿಂಹಾಸನ ನಮ್ಮ ಖಾಸಗಿ ಸ್ವತ್ತು, ಅಂಬಾರಿಗೆ ಬಾಡಿಗೆ ಕೊಡುವುದಿಲ್ಲ

ದಸರಾಗೆ ಅರಮನೆಯಿಂದ ಅಂಬಾರಿ ತೆಗೆದುಕೊಳ್ಳುವುದಕ್ಕೆ ಹಣ ಕೊಡುತ್ತೇವೆ ಎನ್ನುವುದು ಸರಿಯಲ್ಲ, ಅದು ಗೌರವಧನವಷ್ಟೇ

• ಉದಯವಾಹಿನಿ, ಮೈಸೂರು

1 ಸರ್ಕಾರ ನಮಗೆ ಜಾಗ ಕೊಟ್ಟಿಲ್ಲ
2 ಮೂರ್ತಿ ಸರ್ಕಾರದ ಬಳಿ ಇದೆ
3 ಆಸ್ತಿ ನಮ್ಮ ಸ್ವಾಧೀನದಲ್ಲಿದೆ

ಮೈಸೂರು ದಸರಾ ಅಂಬಾರಿ ಹಾಗೂ ಸಿಂಹಾಸನ ಅರಮನೆಯ ಸ್ವಾಧೀನ ಕಾಯ್ದೆಗೆ ಒಳಪಟ್ಟಿಲ್ಲ. ಇವು ಹಿಂದೆಯೂ ನಮ್ಮದೇ, ಮುಂದೆಯೂ ನಮ್ಮ ವಶದಲ್ಲೇ ಇರಲಿವೆ ಎಂದು ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಸ್ಪಷ್ಟಪಡಿಸಿದರು. ಬುಧವಾರ ಅರಮನೆಯ ತಮ್ಮ ನಿವಾಸದಲ್ಲಿ ಮಾಧ್ಯಮಗೋಷ್ಠಿ ನಡೆಸಿದ ಅವರು, ದಸರಾ ನಂತರದ ಬೆಳವಣಿಗೆಗಳ ಕುರಿತು ಮಾತನಾಡಿ, ಈ ವಿಚಾರಗಳು ಸ್ಪಷ್ಟವಾಗಿ ಸಾರ್ವಜನಿಕರಿಗೆ ತಲುಪಬೇಕು.

ಈಗಾಗಲೇ ನಾನು ಮಾಧ್ಯಮಗಳಿಗೆ ನಾಲ್ಕು ಪುಟಗಳ ಪತ್ರ ಬರೆದಿದ್ದೇನೆ. ಸರ್ಕಾರಿ ಇಲಾಖೆಗಳ ನಡುವಿನ ಸಮನ್ವಯದ ಕೊರತೆಯಿಂದ ಕೆಲವು ತೊಂದರೆಗಳಾಗಿವೆ ಎಂದು ತಿಳಿಸಿದ್ದೇನೆ. ಅಲ್ಲದೆ, ಸಿಎಂ ಡಿ.ಕೆ.ಶಿವಕುಮಾರ್ ಅವರು ತೊಂದರೆಯಾಗಿದ್ದರೆ ಮಾತುಕತೆ ಮೂಲಕ ಪರಿಶೀಲಿಸಿ ಬಗೆಹರಿಸಿಕೊಳ್ಳುವುದಾಗಿ ಹೇಳಿದ್ದಾರೆ. ಅದನ್ನು ಸ್ವಾಗತಿಸುತ್ತೇನೆ ಎಂದರು.

ಅಂಬಾರಿ, ಸಿಂಹಾಸನ ಅರಮನೆ ಆಸ್ತಿ: ಅಂಬಾರಿ ಮತ್ತು ಸಿಂಹಾಸನ ಎರಡೂ ನಮ್ಮ ಸ್ವತ್ತು. ಅಂಬಾರಿಗೆ ಬಾಡಿಗೆ ಕೊಡುವುದಿಲ್ಲ, ಬದಲಾಗಿ ಗೌರವಧನ ಎಂದು ನೀಡುತ್ತಾರೆ. ಮೊದಲು ಅಂಬಾರಿ ಬೇಕೆಂದು ಪತ್ರ ಬರೆಯುತ್ತಾರೆ, ಆನಂತರ ಪಬ್ಲಿಸಿಟಿ ಕೊಡುತ್ತಾರೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದ ಪದ್ಧತಿ.


ಉದಯವಾಹಿನಿ ಚಿತ್ರ

ಇದನ್ನು ಬಿಡಿಸಿ ಹೇಳಬೇಕಾಗಿಲ್ಲ. ಅಂಬಾರಿ ಹೊರುವ ಆನೆ ಯಾವುದು ಎಂಬುದನ್ನು ನಾವು ಕೇಳುವುದು ವಾಡಿಕೆ. ಜೊತೆಗೆ ಅದು ನಮ್ಮ ಹಕ್ಕು ಸಹ ಆಗಿದೆ. ಆದರೆ ಅಂಬಾರಿ, ಅರಮನೆ ಮತ್ತು ಸಿಂಹಾಸನ ನಮ್ಮ ಖಾಸಗಿ ಸ್ವತ್ತು. ಅವು ಯಾವಾಗಲೂ ಅರಮನೆ ಬಿಟ್ಟು ಹೋಗಿಲ್ಲ. ಅಲ್ಲದೇ ಅವು ಅರಮನೆ ಸ್ವಾಧೀನ ಕಾಯ್ದೆಗೆ ಒಳಪಡುವುದಿಲ್ಲ ಎಂದು ಪ್ರಮೋದಾ ದೇವಿ ಒಡೆಯರ್ ಸ್ಪಷ್ಟನೆ ನೀಡಿದರು.

ಅರಮನೆ ಸರ್ಕಾರದ್ದಲ್ಲ, ಅದನ್ನು ಸರ್ಕಾರ ನಿರ್ಮಿಸಿದ್ದಲ್ಲ. ಅರಮನೆಯು ಖಾಸಗಿ ಸ್ವತ್ತು. ನಮಗೆ ಸರ್ಕಾರದಿಂದ ಅರಮನೆ ಭಾಗದಲ್ಲಿ ಉಳಿದುಕೊಳ್ಳಲು ಜಾಗ ಕೊಟ್ಟಿಲ್ಲ. ನಾವು ವಾಸಿಸುವ ಭಾಗ ನಮ್ಮ ಬಳಿಯೇ ಇದೆ. ಅದನ್ನು ಸರ್ಕಾರ ತೆಗೆದುಕೊಳ್ಳಲು ಸಾಧ್ಯವಿಲ್ಲ. ನಾವು ವಾಸಮಾಡುವ ಜಾಗದ ಯಥಾಸ್ಥಿತಿ ಕಾಪಾಡಬೇಕು ಎಂದು ನ್ಯಾಯಾಲಯವೇ ಹೇಳಿದೆ. ಪ್ರಕರಣ ನ್ಯಾಯಾಲಯದಲ್ಲಿದೆ. ಅರಮನೆಯ ಸರ್ಕಾರಿ ಸ್ವಾಧೀನದಲ್ಲಿರುವ ಜಾಗದಲ್ಲಿ ನಾವು ಧಾರ್ಮಿಕ ಆಚರಣೆ ಮಾಡಬಹುದು ಎಂದು ತಿಳಿಸಿದರು.

ಸರ್ಕಾರದ ಕಡೆಯಿಂದ ದಸರಾ ಆಯುಧ ಪೂಜೆ ಸಂದರ್ಭದಲ್ಲಿ ನಮಗೆ ತೊಂದರೆ ಆಗುತ್ತದೆ. ಈ ಬಾರಿಯೂ ಸಹ ಪೊಲೀಸರು ಬ್ಯಾರಿಕೇಡ್ ಹಾಕಿ ತೊಂದರೆ ಕೊಟ್ಟಿದ್ದಾರೆ. ಈ ಸಲ ವಿಜಯದಶಮಿ ಸಂದರ್ಭದಲ್ಲಿ ನಡೆಯುವ ಜಟ್ಟಿ ಕಾಳಗದ ಧಾರ್ಮಿಕ ಆಚರಣೆಗೆ ಜಟ್ಟಿಗಳನ್ನು ಪೊಲೀಸರು ಒಳಗೆ ಬಿಟ್ಟಿಲ್ಲ. ಆದ್ದರಿಂದ ಜಟ್ಟಿ ಕಾಳಗ ನಡೆಯಲಿಲ್ಲ. ಈ ಸಂದರ್ಭದಲ್ಲಿ ಕೆಲವು ಪೊಲೀಸರು ತೊಂದರೆ ಮಾಡಿದ್ದಾರೆ ಎಂದು ಪ್ರಮೋದಾ ದೇವಿ ಹೇಳಿದರು. ಬೆಂಗಳೂರಿನ ಅರಮನೆ ಆಸ್ತಿ ಮತ್ತು ಅದರ ಸುತ್ತಮುತ್ತಲಿನ ಭೂಮಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ 1996ರಲ್ಲಿ ಬೆಂಗಳೂರು ಅರಮನೆ ಸ್ವಾಧೀನ ಮತ್ತು ವರ್ಗಾವಣೆ ಕಾಯ್ದೆ ಎಂಬ ಕಾಯ್ದೆಯನ್ನು ಜಾರಿಗೆ ತಂದಿತ್ತು. ಸಂಪೂರ್ಣ ಆಸ್ತಿ, ಭೂಮಿ ನಮ್ಮ ಸ್ವಾಧೀನದಲ್ಲೇ ಇದೆ. ಈ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಇದೆ. ಬೆಂಗಳೂರಿನ ಅರಮನೆಯ ಆಸ್ತಿಗಳು ಸರ್ಕಾರಕ್ಕೆ ಸೇರಿಲ್ಲ. ಅವು ಖಾಸಗಿ ಆಸ್ತಿಗಳು ಎಂದು ಸಾಬೀತಾಗಿದೆ ಎಂದು ಪ್ರಮೋದಾ ದೇವಿ ಒಡೆಯರ್ ಇದೇ ವೇಳೆ ಮಾಹಿತಿ ನೀಡಿದರು.

ಅಂಬಾರಿಯನ್ನು ತೆಗೆದುಕೊಳ್ಳುವುದು ಹಾಗೂ ವಾಪಸ್ ಕೊಡುವುದು ಎಸಿಪಿಯ ಸಂಪರ್ಕದಲ್ಲಿ ನಡೆಯುವ ಕೆಲಸ ಎಂದ ಅವರು, ಅಂಬಾರಿ ಕೊಡಲು ದುಡ್ಡು ನೀಡುತ್ತೇವೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ, ನಾವು ದುಡ್ಡು ಕೇಳಿಲ್ಲ, ನೀವೇ ಬೇಕಾದರೆ ಅಂಬಾರಿ ಮಾಡಿಸಿಕೊಳ್ಳಿ ಎಂದು ಸಲಹೆ ನೀಡಿದರು.-ರಾಜಮಾತೆ ಪ್ರಮೋದಾ ದೇವಿ

ಸಚಿವರ ಜೊತೆ ಮಾತನಾಡಲು ಸಿದ್ಧ

ಅಂದು ಶ್ರೀಕಂಠದತ್ತ ಒಡೆಯರ್ ಅವರು ಅದಕ್ಕೆ ಒಪ್ಪಲಿಲ್ಲ. ಒಂದು ಕೋಟಿ ರೂ.ಗೆ ಅರಮನೆಯ ಒಂದು ಕಂಬವನ್ನೂ ಸಹ ತೆಗೆದುಕೊಳ್ಳಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ಮುಖ್ಯಮಂತ್ರಿ ಹಾಗೂ ಸಚಿವರ ಜೊತೆ ಮಾತನಾಡಲು ನಾನು ಸಿದ್ಧ ಎಂದರು.

ಸಂವಿಧಾನ ರಕ್ಷಣೆಯ ಹೆಸರಿನಲ್ಲಿ ಕಾಂಗ್ರೆಸ್‌ನಿಂದ ಅರಾಜಕತೆ ಸೃಷ್ಟಿ

• ಉದಯವಾಹಿನಿ, ಕೋಲಾರ

ಕೋಲಾರದಲ್ಲಿ ನಡೆದ ಬಿಜೆಪಿ ಜಾಗೃತ ಜಾಥಾ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಾತನಾಡಿ, ಪ್ರಜಾಪ್ರಭುತ್ವ ಮತ್ತು ಸಂವಿಧಾನ ರಕ್ಷಣೆಯ ಹೆಸರಿನಲ್ಲಿ ಕಾಂಗ್ರೆಸ್ ಪಕ್ಷವು ದೇಶದಲ್ಲಿ ಅರಾಜಕತೆ ಸೃಷ್ಟಿಸುತ್ತಿದ್ದು, ಸಾರ್ವಜನಿಕರ ಶಾಂತಿಗೆ ಭಂಗ ತರುವ ಮೂಲಕ ಜನರಲ್ಲಿ ಗೊಂದಲ ಮೂಡಿಸುವ ರಾಜಕೀಯ ನಾಟಕವಾಡುತ್ತಿದೆ ಎಂದು ತೀವ್ರವಾಗಿ ಆರೋಪಿಸಿದರು. ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಎನ್.ಡಿ.ಎ. ಸರ್ಕಾರ ಅಧಿಕಾರಕ್ಕೆ ಬರುವುದು ಸೂರ್ಯ-ಚಂದ್ರರಷ್ಟೇ ಸತ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದಲ್ಲಿ ವ್ಯಾಪಕ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಗ್ಯಾರೆಂಟಿಗಳ ನೆಪದಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಹಾಗೂ ಅಗತ್ಯ ವಸ್ತುಗಳ


ಉದಯವಾಹಿನಿ ಚಿತ್ರ

ಬೆಲೆ ಗಗನಕ್ಕೇರಿ ಬಡಜನರ ಬದುಕು ದುಸ್ತರವಾಗಿದೆ ಎಂದು ದೂರಿದರು. ಪ್ರಧಾನಿ ನರೇಂದ್ರ ಮೋದಿಯವರ ಕೈಬಲಪಡಿಸಲು ಎನ್.ಡಿ.ಎ. ಪಕ್ಷವನ್ನು ಬೆಂಬಲಿಸುವಂತೆ ಅವರು ಜನತೆಯಲ್ಲಿ ಮನವಿ ಮಾಡಿದರು. ಇದೇ ವೇಳೆ ಮಾತನಾಡಿದ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರಜಾಪ್ರಭುತ್ವ ಉಳಿಸಿ ಅರಾಜಕತೆ ಅಳಿಸಿ ಎಂಬ ಘೋಷಣೆಯೊಂದಿಗೆ ಕೋಲಾರದಿಂದ ಜನಜಾಗೃತಿ ಜಾಥಾಗೆ ಚಾಲನೆ ನೀಡಲಾಗಿದೆ ಎಂದರು. ಕಾಂಗ್ರೆಸ್ ಪಕ್ಷಕ್ಕೆ ದೇಶದ ಚುನಾವಣಾ ವ್ಯವಸ್ಥೆ, ಇ.ವಿ.ಎಂ., ಸುಪ್ರೀಂ ಕೋರ್ಟ್ ಹಾಗೂ ಇತರ ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲೆಯೇ ವಿಶ್ವಾಸವಿಲ್ಲದಂತಾಗಿದ್ದು, ಮೋದಿಯವರ ಜನಪ್ರಿಯತೆಯನ್ನು ಸಹಿಸದೆ ನಡೆಸುತ್ತಿರುವ ಷಡ್ಯಂತ್ರಗಳ ವಿರುದ್ಧ ಜನತೆ ಎಚ್ಚೆತ್ತುಕೊಂಡು ಕಾಂಗ್ರೆಸ್ ಅನ್ನು ಬುಡಸಮೇತ ಕಿತ್ತೊಗೆಯಲು ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು

ನರೇಂದ್ರ ಮೋದಿಯವರ ಜನಪರ ಆಡಳಿತ ಹಾಗೂ ಪ್ರಧಾನ ಸೇವಕರಾಗಿ ಪಡೆದ ಜನಪ್ರಿಯತೆಯನ್ನು ಸಹಿಸದ ಕಾಂಗ್ರೆಸ್ ಪಕ್ಷವು, ರಾಹುಲ್ ಗಾಂಧಿ ನೇತೃತ್ವದಲ್ಲಿ ದೇಶದಲ್ಲಿ ಅರಾಜಕತೆ ಸೃಷ್ಟಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಲು ವಿಫಲ ಪ್ರಯತ್ನ ನಡೆಸುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಹಾಲಿನ ಖರೀದಿ ದರ ಲೀಟರ್‌ಗೆ 8 ರೂ. ಹೆಚಳ

• ಉದಯವಾಹಿನಿ, ಚಿಕ್ಕಬಳ್ಳಾಪುರ

ರಾಜ್ಯ ಸರ್ಕಾರವು ನಂದಿನಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 8 ರೂ. ಹೆಚ್ಚಳ ಮಾಡಲು ನಿರ್ಧಾರ ಕೈಗೊಂಡಿದೆ. ಈ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ಚಿಮುಲ್) ನಿರ್ದೇಶಕರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ ಪರಮೇಶ್ವರ್, ಸಚಿವ ಭೈರತಿ ಸುರೇಶ್ ಅವರ ಭಾವಚಿತ್ರಕ್ಕೆ ಹಾಲಿನ ಅಭಿಷೇಕವನ್ನು ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಎಂ.ಎಫ್. ನಿರ್ದೇಶಕರಾದ ಭರಣಿ ವೆಂಕಟೇಶ್, ಹೈನುಗಾರಿಕೆಯನ್ನು ನಂಬಿಕೊಂಡಿರುವ ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದ್ದಾರೆ.

ಹಾಲಿನ ಖರೀದಿ ದರದಲ್ಲಿ ಮಾಡಿರುವ ಹೆಚ್ಚಳದಿಂದ ಹಾಲು ಉತ್ಪಾದಕರಿಗೆ ಹೆಚ್ಚಿನ ಆದಾಯ ದೊರೆಯಲಿದೆ ಮತ್ತು ಹೈನುಗಾರಿಕೆಯನ್ನು ಮತ್ತಷ್ಟು ಉತ್ತೇಜಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ. ನವೆಂಬರ್ 1 ರಿಂದ ಜಾರಿಗೆ ಬಂದಿರುವ ಪರಿಷ್ಕೃತ ದರದಂತೆ ಪ್ರತಿ ಲೀಟರ್ ಹಾಲಿನ ಬೆಲೆಯಲ್ಲಿ 8 ರೂ. ಹೆಚ್ಚಳ ಮಾಡಲಾಗಿದೆ. ಈ ಪೈಕಿ 7 ರೂ. ನೇರವಾಗಿ ಹಾಲು ಉತ್ಪಾದಕ ರೈತರಿಗೆ ದೊರೆಯಲಿದ್ದು, ಉಳಿದ 1 ರೂ. ಹಾಲು ಒಕ್ಕೂಟಗಳ ನಿರ್ವಹಣಾ ವೆಚ್ಚಕ್ಕೆ ಮೀಸಲಿಡಲಾಗಿದೆ.

ಶ್ರೀ ಸಪ್ತಮಾತೃಕಾ ದೇವಿರಮ್ಮನವರ ನ.13ರಿಂದ ಜಾತ್ರಾ ಮಹೋತ್ಸವ

• ಉದಯವಾಹಿನಿ, ಕೆ.ಆರ್.ನಗರ

ಕಳೆದ ವರ್ಷ ಶ್ರೀ ಸಪ್ತಮಾತೃಕಾ ದೇವಿರಮ್ಮನವರ ಸನ್ನಿಧಾನದಲ್ಲಿ ಮಾತು ಕೊಟ್ಟಂತೆ, ಈ ವರ್ಷ ದೇಗುಲದ ಸುತ್ತ ಸಿಮೆಂಟ್ ರಸ್ತೆ ಮಾಡಿಸಲಾಗಿದ್ದು. ಅದ್ದೂರಿಯಾಗಿ ಜಾತ್ರೆ ಆಚರಿಸಲು ಗ್ರಾಮಸ್ಥರು, ಸುತ್ತಮುತ್ತಲಿನ ಗ್ರಾಮದ ಜನತೆ ಜತೆಗೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಎಲ್ಲ ಇಲಾಖೆಯವರು ಸಹಕರಿಸುವಂತೆ ಶಾಸಕ ಡಿ.ರವಿಶಂಕರ್ ಮನವಿ ಮಾಡಿದರು.

ತಾಲ್ಲೂಕಿನ ದೇವಿತಂದ್ರೆ ಗ್ರಾಮದಲ್ಲಿನ ದೇವಿರಮ್ಮನ ದೇಗುಲದ ಆವರಣದಲ್ಲಿ ಕರೆಯಲಾಗಿದ್ದ ಅಧಿಕಾರಿಗಳ ಹಾಗೂ ಸಾರ್ವಜನಿಕರ ಜಾತ್ರಾ ಮಹೋತ್ಸವದ ಪೂರ್ವಬಾವಿ ಸಭೆಯಲ್ಲಿ ಮಾತನಾಡಿದ ಅವರು. ನ. 13 ರಿಂದ ಜಾತ್ರಾ ಮಹೋತ್ಸವ ಆರಂಭವಾಗಿ ನ.14 ರಂದು ಜಾತ್ರಾ ಮಹೋತ್ಸವ ಸಂಪನ್ನಗೊಳ್ಳುವುದು.

ಜಾತ್ರೆಯ ಪ್ರಮುಖ ಕೇಂದ್ರ ಬಿಂದಾಗಿರುವ ಸಿಡಿ ಉತ್ಸವ ನ.13 ರಂದು ನಡೆಯಲಿದ್ದು.

ನ.14 ರಂದು ಶ್ರೀ ಸಪ್ತಮಾತೃಕಾ ದೇವಿರಮ್ಮನವರ ರಥೋತ್ಸವ ಆವರಣದಲ್ಲಿ ನಡೆಯಲಿದೆ. ಇನ್ನ ಜಾತ್ರಾ ಮಹೋತ್ಸವಕ್ಕೆ ಅಗತ್ಯತಾ ಸಿದ್ಧತೆಗೆ ಹೆಚ್ಚಿನ ರೀತಿಯಲ್ಲಿ ಸಹಕಾರ ಕೊಡುತ್ತೇನೆ ಅಧಿಕಾರಿಗಳ ವರ್ಗ ಜಾತ್ರಾ ಮಹೋತ್ಸವವನ್ನು ಯಶಸ್ವಿಯಾಗಿ


ಉದಯವಾಹಿನಿ ಚಿತ್ರ

ನಡೆಯಲು ಶ್ರಮಿಸ ಬೇಕು ಎಂದು ಹೇಳಿದರು. **ಅಗತ್ಯ ಸಿದ್ಧತೆಗೆ ಸೂಚನೆ:** ಸ್ಥಳೀಯ ಗ್ರಾ.ಪಂ. ವತಿಯಿಂದ ಜಾತ್ರೆ ನಡೆಯುವ ಸ್ಥಳದಲ್ಲಿ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಸೇರಿದಂತೆ ಅಗತ್ಯವಾಗಿ ಬೇಕಾಗುವ ಮುಂತಾದ ಮೂಲ ಸೌಲಭ್ಯವನ್ನು ಕುಂದುಕೊರತೆ ಬಾರದಂತೆ ನೋಡಿಕೊಳ್ಳ ಬೇಕು ಎಂದು ಸೂಚನೆ ನೀಡಿದ ಡಿ.ರವಿಶಂಕರ್, ಪ್ರತಿಬಾರಿಯಂತೆ ದೇಗುಲ ಹಾಗೂ ರಸ್ತೆಗಳಿಗೆ ವಿದ್ಯುತ್ ದೀಪಾಲಂಕಾರದ ವ್ಯವಸ್ಥೆ

ದೇಗುಲದ ರಾಜ ಗೋಪುರ ಮತ್ತು ವಿಮಾನ ಗೋಪುರ ಹಾಗೂ ಕಲ್ಯಾಣಿ ಸ್ವಚ್ಛತೆ, ದೇಗುಲದ ಕಂಪೌಂಡಿಗೆ ಸುಣ್ಣ ಬಣ್ಣ, ವೀರಗಾಸೆ, ಊಟದ ವ್ಯವಸ್ಥೆ, ಸೆಸ್ಕಾಂ ಇಲಾಖೆ ವಿದ್ಯುತ್ ವ್ಯತ್ಯಾಸ ಆಗದಂತೆ ಸ್ಥಳದಲ್ಲಿ ಸಿಬ್ಬಂದಿ ನಿಯೋಜಿಸ ಬೇಕು ಎಂದರು.-ಶಾಸಕ ಡಿ.ರವಿಶಂಕರ್

ಮಾನ್ಯತೆಯ ಗೌರವ: ವಿ. ಕೃಷ್ಣಪ್ಪರಿಗೆ ಶಾಸಕರಿಂದ ಅಭಿನಂದನೆ

• ಉದಯವಾಹಿನಿ, ಮಾಲೂರು

ಮಾಲೂರಿನ ಮಹಾಸ್ತಿ ವೆಂಕಟೇಶ್ ಅಯ್ಯಂಗಾರ್ ರಂಗಮಂದಿರದಲ್ಲಿ ನಮ್ಮ ಕರ್ನಾಟಕ ಸೇನೆ, ಕನ್ನಡಪರ ಸಂಘಟನೆಗಳ ಒಕ್ಕೂಟ ಹಾಗೂ ತಾಲ್ಲೂಕು ಆಡಳಿತದ ಸಹಯೋಗದಲ್ಲಿ ಜರುಗಿದ 71ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ, ತಾಲ್ಲೂಕು ಪಂಚಾಯಿತಿ ನಿರ್ಗಮಿತ ಕಾರ್ಯನಿರ್ವಹಣಾಧಿಕಾರಿ ವಿ. ಕೃಷ್ಣಪ್ಪ ಅವರ ಸೇವೆಯನ್ನು ಶಾಸಕ ಕೆ.ವೈ. ನಂಜೇಗೌಡ ಅವರು ವಿಶೇಷವಾಗಿ ಅಭಿನಂದಿಸಿ ಶ್ಲಾಘಿಸಿದರು. ವಿ. ಕೃಷ್ಣಪ್ಪ ಅವರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಹಾಯಕ ನಿರ್ದೇಶಕ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಯಾಗಿ ಸುಮಾರು ಎಂಟು ವರ್ಷಗಳ ಕಾಲ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಸಲ್ಲಿಸಿದ ಕೊಡುಗೆ ಸ್ಮರಣೀಯವಾಗಿದ್ದು, ಅವರ ಅವಧಿಯಲ್ಲಿ ಕುಡಿಯುವ ನೀರಿನ ಸರಬರಾಜು, ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ, ಸ್ವಚ್ಛತೆ, ಬೀದಿ ದೀಪಗಳ ನಿರ್ವಹಣೆ ಮತ್ತು ಸರ್ಕಾರದ ವಿವಿಧ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿತ್ತು ಎಂದು ಶಾಸಕರು ತಿಳಿಸಿದರು.

ವಿಶೇಷವಾಗಿ ಎಂಜಿಎನ್‌ಆರ್‌ಇಜಿಎ ಸೇರಿದಂತೆ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳನ್ನು ಗ್ರಾಮ ಪಂಚಾಯಿತಿಗಳ ಮೂಲಕ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅವರು ನಿರಂತರ ಮಾರ್ಗದರ್ಶನ ನೀಡಿ ಅಭಿವೃದ್ಧಿಗೆ ಉತ್ತೇಜನ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಿನಲ್ಲೂ ಜಿಲ್ಲಾಧಿಕಾರಿ ಕಚೇರಿಗೆ ರೈತರ ಮುತ್ತಿಗೆ

ಮುಖ್ಯ ರಸ್ತೆಯಿಂದ ಜಿಲ್ಲಾಧಿಕಾರಿ ಕಚೇರಿ ಪ್ರವೇಶಕ್ಕೆ ಮುಂದಾದ ರೈತರನ್ನು ಪೊಲೀಸರು ತಡೆದರು. ಈ ವೇಳೆ ನೂಕಾಟ, ತಳ್ಳಾಟವಾಯಿತು

• ಉದಯವಾಹಿನಿ, ಮೈಸೂರು

1 ಬೇಧಿಸಿ ಒಳನುಗ್ಗಲು ರೈತರು ಯತ್ನಿಸಿದರೂ
2 ಡಿಸಿ ಕಚೇರಿ ಆವರಣಕ್ಕೆ ನಮ್ಮನ್ನು ಬಿಡಬೇಕು
3 ವಾಹನ ಬದಲಿ ಮಾರ್ಗದಲ್ಲಿ ಕಳುಹಿಸಲಾಯಿತು

ಪ್ರತಿ ಟನ್ ಕಬ್ಬಿಗೆ 4500 ರೂ ಹಾಗೂ ಸರ್ಕಾರ 1 ಸಾವಿರ ರೂ ಎಫ್ ಆರ್‌ಪಿ ದರ ನಿಗದಿಪಡಿಸುವಂತೆ ಕಬ್ಬು ಬೆಳೆಗಾರರು ನಡೆಸುತ್ತಿರುವ ಹೋರಾಟದ ಕಾವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಮೈಸೂರಿನಲ್ಲೂ ನೂರಾರು ರೈತರು ಜಿಲ್ಲಾಧಿಕಾಶರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ, ಕರ್ನಾಟಕ ಪ್ರಾಂತ್ಯ ರೈತ ಸಂಘ, ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘಗಳ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಮನ್ವಯ ಸಮಿತಿ ನೇತೃತ್ವದಲ್ಲಿ ನಗರದ ಹಳೆಯ ಡೇರಿ ಎದುರಿನ ಬುದ್ಧ ಸರ್ಕಲ್‌ನಿಂದ ಹೊರಟ ರೈತರು, ಕಬ್ಬು ಬೆಳೆಗಾರರು ರೈತ ವಿರೋಧಿ ರಾಜ್ಯ, ಕೇಂದ್ರ ಸರ್ಕಾರಗಳಿಗೆ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರ ಫೋಟೋಗಳಿಗೆ ಮೂರು ನಾಮ ಬಳಿದು ಗೋವಿಂದ


ಉದಯವಾಹಿನಿ ಚಿತ್ರ

ಗೋವಿಂದ ಸಿಎಂ ಗೋವಿಂದ, ಗೋವಿಂದ ಗೋವಿಂದ ಪ್ರಹ್ಲಾದ್ ಜೋಶಿ ಗೋವಿಂದ ಎನ್ನುವ ಘೋಷಣೆಗಳನ್ನು ಮೊಳಗಿಸಿ ಗಮನ ಸೆಳೆದರು. ಕಬ್ಬು ಹೊತ್ತಿದ್ದ ರೈತರು ಅಲ್ಲಲ್ಲಿ ಉರುಳುಸೇವೆ ಮಾಡಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಮುಖ್ಯ ರಸ್ತೆಯಿಂದ ಜಿಲ್ಲಾಧಿಕಾರಿ ಕಚೇರಿ ಪ್ರವೇಶಕ್ಕೆ ಮುಂದಾದ ರೈತರನ್ನು ಪೊಲೀಸರು ತಡೆದರು. ಈ ವೇಳೆ ನೂಕಾಟ, ತಳ್ಳಾಟವಾಯಿತು. ಗೇಟ್ ಬಳಿ ರೈತರನ್ನು ತಡೆಯಲು ಹಾಕಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿದ ರೈತರು ಡಿವೈಡರ್ ಬಳಿಗೆ ಎಸೆದರು. ಪೊಲೀಸರನ್ನು ಬೇಧಿಸಿ ಒಳನುಗ್ಗಲು ರೈತರು ಯತ್ನಿಸಿದರೂ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರು ಸುತ್ತುವರಿದು ಪ್ರತಿಭಟನಾಕಾರರನ್ನು ತಡೆಯುವಲ್ಲಿ ಸಫಲವಾದರು. ಇದರಿಂದಾಗಿ ರೈತರು ಮತ್ತಷ್ಟು ಆಕ್ರೋಶಗೊಂಡು ಮಹದೇಶ್ವರ ರಸ್ತೆಯಲ್ಲಿ ರಸ್ತೆತಡೆ ಮಾಡಿದ್ದರಿಂದ ಸಂಚಾರ ಅಸ್ತವ್ಯಸ್ತಗೊಂಡು ಸವಾರರು ಪರದಾಡಿದರು. ಬನ್ನೂರು, ತಿ.ನರಸೀಪುರ ಮಾರ್ಗದಿಂದ ಬರುವ ಬಸ್‌ಗಳು, ವಾಹನಗಳನ್ನು ಬದಲಿ ಮಾರ್ಗದಲ್ಲಿ ಕಳುಹಿಸಲಾಯಿತು. ರಸ್ತೆತಡೆ ಕೈಬಿಡುವಂತೆ ಡಿಸಿಪಿಗಳಾದ ಡಾ.ಹರ್ಷ ಪ್ರಿಯಂವದಾ, ಕೆ.ಎಸ್.ಸುಂದರರಾಜ್ ನಡೆಸಿದ ಮಾತುಕತೆ ವಿಫಲವಾಯಿತು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಸರ್ಕಾರಗಳು ರೈತರಿಗೆ ವ್ಯವಸ್ಥಿತವಾಗಿ ಮೋಸ ಮಾಡುತ್ತಿದೆ. ನೌಕರರ ವೇತನ ಹೆಚ್ಚು ಮಾಡಬೇಕೆಂದು ಮಾಡಿದ ಮನವಿಗೆ ಶೇ.3ರಷ್ಟು ಮಾಡಿದರೆ, ಕಬ್ಬು ದರವನ್ನು 50 ರೂಪಾಯಿ ಹೆಚ್ಚು ಮಾಡಲು ನಿರ್ಲಕ್ಷ್ಯ ಮಾಡಲಾಗುತ್ತಿದೆ ಎಂದು ದೂರಿದರು. ಕರ್ನಾಟಕದಲ್ಲಿ ಒಂದು ಸಾವಿರ ಎಸ್‌ಎಪಿ ನಿಗದಿಪಡಿಸಲು ಕಾನೂನಿನಲ್ಲಿ ಅವಕಾಶ ಇಲ್ಲವೆಂದು ರಾಜ್ಯ ಸರ್ಕಾರ ಹೇಳುತ್ತಿರುವುದು ಖಂಡನೀಯ. ಬಸವರಾಜು, ಅತ್ತಹಳ್ಳಿ ದೇವರಾಜ್, ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಮಂಜುಕಿರಣ್ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.

ಕೇಂದ್ರ, ನಾಟಕೀಯ ಸಭೆ ಮಾಡಿ ಮೊಸಳೆ ಕಣ್ಣೀರು ಸುರಿಸುವ ಬದಲಿಗೆ ರೈತರ ಶ್ರಮಕ್ಕೆ ತಕ್ಕಂತೆ ಬೆಲೆ ಕೊಡಬೇಕು. ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯಲ್ಲಿ ಬೆಲೆ, ತೂಕ ಕಡಿಮೆ ಮಾಡಿ ದೊಡ್ಡ ವಂಚನೆ ಮಾಡಲಾಗಿದೆ ಎಂದರು.

-ಅಧ್ಯಕ್ಷ ಕುರುಬೂರು ಶಾಂತಕುಮಾರ್

ಸರ್ಕಾರಕ್ಕೆ ಬಿಸಿ

ಪೊಲೀಸರು ಡಿಸಿ ಕಚೇರಿ ಆವರಣಕ್ಕೆ ನಮ್ಮನ್ನು ಬಿಡಬೇಕು. ಇಲ್ಲದಿದ್ದರೆ ರಸ್ತೆಯಲ್ಲೇ ಅಡುಗೆ ಮಾಡುತ್ತೇವೆಂದು ಹೇಳಿ ರಸ್ತೆಯಲ್ಲಿ ಗ್ಯಾಸ್ ಸ್ಟೌವ್ ಹಚ್ಚಿ ಬಾತ್ ತಯಾರಿಸಿದರು. ರೈತರುಗಳೇ ತರಕಾರಿ ಹಚ್ಚಿಕೊಂಡು ಘೋಷಣೆಗಳನ್ನು ಕೂಗುತ್ತಲೇ ಬಾತ್ ತಯಾರಿಸಿ ಸರ್ಕಾರಕ್ಕೆ ಬಿಸಿಮುಟ್ಟಿಸಿದರು.

ಮಿನಿ ನ್ಯೂಸ್

ಎಸ್.ಜಾನಕಿ ಭಾರತೀಯರ ಹೃದಯದಲ್ಲಿ ಶಾಶ್ವತವಾಗಿ ನೆಲೆಯಾಗಿದ್ದಾರೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪೇಟೆ

ತಮ್ಮ ಗಾಯನದ ಮೂಲಕ ಗಾನ ಸರಸ್ವತಿ ಎಸ್.ಜಾನಕಿ ಭಾರತೀಯರ ಹೃದಯದಲ್ಲಿ ಶಾಶ್ವತವಾಗಿ ನೆಲೆಯಾಗಿದ್ದಾರೆಂದು ಶಾಸಕ ಹೆಚ್.ಟಿ.ಮಂಜು ಅಭಿಪ್ರಾಯಪಟ್ಟರು. ಅವರು ತಾಲ್ಲೂಕಿನ ಮಾರ್ಗೋನಹಳ್ಳಿಯ ಮೊರಾರ್ಜಿ ವಸತಿ ಶಾಲೆಯ ಆವರಣದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ 38ನೇ ವರ್ಷದ ಶಾಲೆಗೊಂದು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಕಳೆದ 38 ವರ್ಷಗಳಿಂದ ನವೆಂಬರ್ ತಿಂಗಳಿನಲ್ಲಿ ಶಾಲೆಗೊಂದು ಕಾರ್ಯಕ್ರಮದ ಹೆಸರಿನಲ್ಲಿ ತಾಲ್ಲೂಕಿನ ಪ್ರೌಢಶಾಲೆಗಳಲ್ಲೂ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

ಡಾ.ಎಸ್.ಜಾನಕಿ ಅವರ ಪರಿಚಯ ಕಾರ್ಯಕ್ರಮವನ್ನು ಯೋಜಿಸಿ ಮಕ್ಕಳಿಗೆ ಸಂಗೀತ ಸರಸ್ವತಿಯ ಬಗ್ಗೆ ತಿಳಿಸಿಕೊಡುತ್ತಿರುವುದು ಸ್ವಾಗತ. ನಮ್ಮ ಮಕ್ಕಳಿಗೆ ಸಾಧಕರ ಸಧನೆಯ ಹೆಜ್ಜೆ ಗುರುತುಗಳನ್ನು ಪರಿಚಯಿಸಿ ಅವರ ಸನ್ಮಾರ್ಗದಲ್ಲಿ ನಮ್ಮ ಮಕ್ಕಳು ಸಾಗುವಂತೆ ಮಾರ್ಗದರ್ಶನ ಮಾಡಬೇಕು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಶ್ಲಾಘನೀಯ ಎಂದ ಶಾಸಕ ಹೆಚ್.ಟಿ.ಮಂಜು ಸಂಗೀತ ಸರಸ್ವತಿ ಎಸ್.ಜಾನಕಿಯವರು ಕನ್ನಡಿಗರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದು, ಜನಜನಿತವಾಗಿದೆವಾಗಿದೆ ಎಂದರು.

ದ್ವಿ.ದ ಸಹಾಯಕ ಶ್ರೀಧರ್ ಅಮಾನತಿಗೆ ರೈತ ಸಂಘ ಆಗ್ರಹ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಹನೂರು

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಧರ್ ಮಹಿಳಾ ಸಿಬ್ಬಂದಿಗೆ ಕಿರುಕುಳ ನೀಡುತ್ತಿದ್ದು, ಅವರನ್ನು ಕೂಡಲೇ ಅಮಾನತ್ತು ಮಾಡಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹನೂರು ತಾಲ್ಲೂಕು ಸಮಿತಿ ಆಗ್ರಹಿಸಿದೆ. ಈ ಕುರಿತು ಹನೂರು ತಹಶೀಲ್ದಾರ್ ರವರ ಮೂಲಕ ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿರುವ ಸಂಘಟನೆಯ ಪದಾಧಿಕಾರಿಗಳು, ಶ್ರೀಧರ್ ಸಾರ್ವಜನಿಕರು ಮತ್ತು ರೈತರಿಗೆ ಧಮ್ಕಿ ಹಾಕುವುದು, ಮಹಿಳಾ ಸಿಬ್ಬಂದಿಗಳಿಗೆ ಮಾನಸಿಕ ಕಿರುಕುಳ, ಜೀವ ಬೆದರಿಕೆ, ಅಸಭ್ಯ ವರ್ತನೆ ತೋರುತ್ತಿರುವುದರಿಂದ ಮಹಿಳಾ ಸಿಬ್ಬಂದಿಗಳು ಕರ್ತವ್ಯಕ್ಕೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಇದರಿಂದ ಸಾರ್ವಜನಿಕರ ಕೆಲಸ ಕಾರ್ಯಗಳು ವಿಳಂಬವಾಗುತ್ತಿವೆ ಎಂದು ದೂರಿದ್ದಾರೆ. ಮಹಿಳಾ ಸಿಬ್ಬಂದಿಗಳು ತಹಶೀಲ್ದಾರ್ ರವರಿಗೆ ದೂರು ಸಲ್ಲಿಸಿದ್ದಾರೆ. ಆದರೂ ಯಾವುದೇ ಮೇಲಾಧಿಕಾರಿಗಳ ಅನುಮತಿ ಇಲ್ಲದೇ ಪತ್ರಿಕಾಗೋಷ್ಠಿ ನಡೆಸಿ ತಹಶೀಲ್ದಾರ್ ಹಾಗೂ ತಾಲ್ಲೂಕು ದಂಡಾಧಿಕಾರಿಗಳ ವಿರುದ್ಧವೇ ಜಾತಿ ನಿಂದನೆ ಮಾಡಿದ್ದಾರೆ.


ಸ್ಥಳೀಯ ನಿಷ್ಠಾವಂತ ಕಾರ್ಯಕರ್ತರಿಗೆ ಆದ್ಯತೆ ನೀಡಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಹುಣಸೂರು

ಮುಂಬರುವ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಹೊರಗಿನವರಿಗೆ ಆದ್ಯತೆ ನೀಡುವ ಬದಲು, ಸ್ಥಳೀಯ ನಿಷ್ಠಾವಂತ ಹಾಗೂ ಪ್ರಾಮಾಣಿಕ ಕಾಂಗ್ರೆಸ್ ಕಾರ್ಯಕರ್ತರಿಗೆ ಅವಕಾಶ ಕಲ್ಪಿಸಬೇಕು ಎಂದು ಕಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಹೊನ್ನಪ್ಪ ಒತ್ತಾಯಿಸಿದ್ದಾರೆ. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹುಣಸೂರು ತಾಲ್ಲೂಕಿನಲ್ಲಿ ಕಾಯಕ ಸಮಾಜದ ಸುಮಾರು 70 ಸಾವಿರ ಮತದಾರರಿದ್ದು, ಸಮುದಾಯದ ರಾಜಕೀಯ ಪ್ರಾತಿನಿಧ್ಯಕ್ಕೆ ಆದ್ಯತೆ ನೀಡಬೇಕೆಂದು ಆಗ್ರಹಿಸಿದರು. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಭೇಟಿ ಮಾಡಿ, ಜಿಲ್ಲಾ ಪಂಚಾಯತ್‌ನ ಒಂದು ಕ್ಷೇತ್ರದಲ್ಲಿ ಹಾಗೂ ತಾಲ್ಲೂಕು ಪಂಚಾಯತ್‌ನ ಆರು ಕ್ಷೇತ್ರಗಳಲ್ಲಿ ಕಾಯಕ ಸಮಾಜದ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವಂತೆ ಮನವಿ ಮಾಡಲಾಗಿದೆ. ನಮ್ಮ ಸಮುದಾಯದ ಜನಸಂಖ್ಯೆ ,ಸಾಮಾಜಿಕ ಕೊಡುಗೆಯನ್ನು ಪರಿಗಣಿಸಿ ರಾಜಕೀಯ ಅವಕಾಶ ಕಲ್ಪಿಸಬೇಕು ಎಂದು ತಿಳಿಸಿದರು. ತಾಲ್ಲೂಕಿನಲ್ಲಿ ಹಣಬಲ, ಜಾತಿಬಲ ಹೊಂದಿರುವವರಿಗೆ ಹಾಗೂ ಹೊರಗಿನಿಂದ ಬಂದವರಿಗೆ ರಾಜಕೀಯವಾಗಿ ಆದ್ಯತೆ ನೀಡುತ್ತಿರುವುದು ಖಂಡನೀಯ. ಮುಂದಿನ ಚುನಾವಣೆಗಳಲ್ಲಾದರೂ ಸ್ಥಳೀಯ ಪ್ರಾಮಾಣಿಕ ಕಾಂಗ್ರೆಸ್ ಕಾರ್ಯಕರ್ತರಿಗೆ ಮತ್ತು ಸಣ್ಣ ಸಮುದಾಯಗಳ ಯುವಕರಿಗೆ ಅವಕಾಶ ನೀಡಿದರೆ ಪಕ್ಷದ ಸಂಘಟನೆ ಮತ್ತಷ್ಟು ಬಲಗೊಳ್ಳಲಿದೆ ಎಂದು ಅಭಿಪ್ರಾಯಪಟ್ಟರು. ನಾಯಕ ಸಮಾಜದ ಮುಖಂಡ ಹಾಗೂ ರಕ್ಷಾ ಸಮಿತಿ ಸದಸ್ಯ ನಿಲವಾಗಿಲು ಪ್ರಭಾಕರ್ ಮಾತನಾಡಿ, ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಹುಟ್ಟೂರಿನಲ್ಲಿ ಹಣಬಲ ಹೊಂದಿರುವವರಿಗೆ ಮಾತ್ರ ಟಿಕೆಟ್ ನೀಡುವ ಬದಲು, ಸಾಮಾಜಿಕವಾಗಿ ಜನರೊಂದಿಗೆ ನಿಕಟ ಸಂಪರ್ಕ ಹೊಂದಿರುವ ಹಾಗೂ ರೈತರ ಸಮಸ್ಯೆಗಳನ್ನು ಅರಿತಿರುವ ಸ್ಥಳೀಯ ವ್ಯಕ್ತಿಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಸರ್ವ ಪಕ್ಷದ ವರಿಷ್ಠರನ್ನು ಆಗ್ರಹಿಸಿದರು.

ಸಂಘಟಿತರಾಗಿ ಕಾಂಗ್ರೆಸ್ ಪಕ್ಷದ ಬಲವರ್ಧನೆಗೆ ಶ್ರಮಿಸಬೇಕು



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೋಲಾರ

ಮಹಿಳಾ ಕಾಂಗ್ರೆಸ್ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪಕ್ಷದ ಸಂಘಟನೆಯನ್ನು ಬಲಪಡಿಸುವುದರ ಜೊತೆಗೆ ಮಹಿಳೆಯರ ಸಮಸ್ಯೆಗಳನ್ನು ಗುರುತಿಸಿ, ಸರ್ಕಾರದ ಸೌಲಭ್ಯಗಳನ್ನು ಕಟ್ಟಕಡೆಯ ಮಹಿಳೆಯ ಮನೆಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು ಎಂದು ಶಾಸಕ ಕೊತ್ತೂರು ಜಿ. ಮಂಜುನಾಥ್ ಕರೆ ನೀಡಿದರು. ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಗರ ಮತ್ತು ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ನೂತನ ಅಧ್ಯಕ್ಷರಿಗೆ ನೇಮಕಾತಿ ಪ್ರಮಾಣಪತ್ರ ವಿತರಣೆ ಹಾಗೂ ಪದಗ್ರಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಮಹಿಳೆಯರು ಸಂಘಟಿತರಾಗಿ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸಿ, ಸರ್ಕಾರದ ವಿವಿಧ ಸಾಲ ಸೌಲಭ್ಯಗಳು ಹಾಗೂ ಜನಪರ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದರು.

ಇಂದಿರಾಗಾಂಧಿ, ಮಮತಾ ಬ್ಯಾನರ್ಜಿ, ಜಯಲಲಿತಾ, ಮಾಯಾವತಿ, ಸುಷ್ಮಾ ಸ್ವರಾಜ್ ಸೇರಿದಂತೆ ಹಲವು ಮಹಿಳಾ ನಾಯಕಿಯರು ಅಧಿಕಾರದ ಚುಕ್ಕಾಣಿ ಹಿಡಿದು ಧೈರ್ಯದಿಂದ ಜನಪರ ಕೆಲಸಗಳನ್ನು ಮಾಡಿದ್ದಾರೆ. ಮಹಿಳೆಯರು ರಾಜಕೀಯದಲ್ಲಿ ಮುಂಚೂಣಿಗೆ ಬರಬೇಕು. ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಅವಕಾಶವಿದ್ದು, ಅದನ್ನು ಸಮರ್ಥವಾಗಿ ಬಳಸಿಕೊಂಡು ಚುನಾವಣೆಯಲ್ಲಿ ಸ್ಪರ್ಧಿಸಿ ಅಧಿಕಾರ ಪಡೆಯಬೇಕು. ಮಹಿಳೆಯರು ಅಧಿಕಾರಕ್ಕೆ ಬಂದಾಗ ಮಾತ್ರ ಅವರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಹೇಳಿದರು.

ಅಂತರಾಳದಿಂದ.. EDITORIAL

ಪಟಾಕಿ ಸಿಡಿಸಲು ನಿರ್ಬಂಧ ಅನಗತ್ಯ ವಿರೋಧ ಸಲ್ಲದು



ದೇಶದ ರಾಜಧಾನಿಯಲ್ಲಿ ಕಳೆದ ಎರಡು ವಾರಗಳಿಂದೀಚೆಗೆ ವಾಯುಮಾಲಿನ್ಯ ಪ್ರಮಾಣ ಹೆಚ್ಚುತ್ತಲೇ ಸಾಗಿರುವ ಹಿನ್ನೆಲೆಯಲ್ಲಿ ದಿಲ್ಲಿಯ ಆಡಳಿತ ಹಲವು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೊಳಿಸಿದೆ. ಏತನ್ಮಧ್ಯೆ ದಿಲ್ಲಿಯಲ್ಲಿ ಹಸುರು ಪಟಾಕಿಗಳನ್ನು ಹೊರತುಪಡಿಸಿ ಉಳಿದೆಲ್ಲ ತೆರನಾದ ಪಟಾಕಿಗಳ ಮಾರಾಟಕ್ಕೆ ನಿರ್ಬಂಧ ಹೇರಿ ಈ ಹಿಂದೆ ತಾನು ಹೊರಡಿಸಿದ್ದ ಆದೇಶ ಪಾಲನೆಯಾಗದ ಸಂಬಂಧ ಸುಪ್ರೀಂ ಕೋರ್ಟ್ ಕೇಂದ್ರ ಮತ್ತು ದಿಲ್ಲಿ ಸರಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ವಾಯುಮಾಲಿನ್ಯಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದ ದಿಲ್ಲಿ ಸರಕಾರ ಮತ್ತು ಕೇಂದ್ರ ಸರಕಾರ ಈಗಾಗಲೇ ಹಲವು ಬಿಗಿ ನಿಯಮಾವಳಿಗಳನ್ನು ಜಾರಿಗೆ ತಂದಿದ್ದು ಇವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಾರ್ವಜನಿಕರು ಮತ್ತು ಸಂಬಂಧಿತ ಸಂಸ್ಥೆ, ಇಲಾಖೆಗಳಿಗೆ ನಿರ್ದೇಶನ ನೀಡಿದೆ. ಈ ಎಲ್ಲಾ ಬೆಳವಣಿಗೆಗಳ ನಡುವೆ ಸುಪ್ರೀಂ ಕೋರ್ಟ್ ನಗರದ ಮಾರುಕಟ್ಟೆಯಲ್ಲಿ ಎಲ್ಲಾ ತೆರನಾದ ಪಟಾಕಿಗಳನ್ನು ಮುಕ್ತವಾಗಿ ಮಾರಾಟ ಮಾಡುತ್ತಿರುವ ಕುರಿತಂತೆ ದಿಲ್ಲಿ ಸರಕಾರ ಮತ್ತು ಕೇಂದ್ರ ಸರಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ವಾಯುಮಾಲಿನ್ಯವನ್ನು ನಿಯಂತ್ರಿಸುವ ದೃಷ್ಟಿಯಿಂದ ಸುಪ್ರೀಂ ಕೋರ್ಟ್ ದಿಲ್ಲಿಯಲ್ಲಿ ಹಸುರು ಪಟಾಕಿ ಮಾರಾಟ ಮತ್ತು ಸಿಡಿಸಲು ಹತ್ತು ಹಲವು ಷರತ್ತುಗಳೊಂದಿಗೆ ಅನುಮತಿಯನ್ನು ನೀಡಿದೆ. ಇಷ್ಟೆಲ್ಲ ಆಗಿಯೂ ನಗರದ ಮಾರುಕಟ್ಟೆಯಲ್ಲಿನ ಕೆಲವು ಪಟಾಕಿ ಮಳಿಗೆಗಳಲ್ಲಿ ಎಲ್ಲಾ ತೆರನಾದ ಪಟಾಕಿಗಳನ್ನು ಮಾರಾಟಕ್ಕಿಟ್ಟಿರುವ ಸಚಿತ್ರ ವರದಿಯೊಂದು ಪತ್ರಿಕೆಯಲ್ಲಿ ಪ್ರಕಟಗೊಂಡಿರುವುದನ್ನು ಉಲ್ಲೇಖಿಸಿ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಪಟಾಕಿ ನಿರ್ಬಂಧದ ಅನುಷ್ಠಾನದ ವಿಷಯದಲ್ಲಿ ಇಂತಹ ನಿರ್ಲಕ್ಷ್ಯ ಧೋರಣೆ ಕೇವಲ ದಿಲ್ಲಿಗೆ ಸೀಮಿತವಾಗಿರದೆ ಬಹುತೇಕ ಎಲ್ಲಾ ರಾಜ್ಯಗಳದೂ ಇದೇ ಪರಿಸ್ಥಿತಿಯಾಗಿದೆ. ನಿರ್ಬಂಧ, ಪಟಾಕಿಗಳನ್ನು ಸಿಡಿಸುವ ಕುರಿತಾಗಿನ ನಿಯಮಾವಳಿಗಳು ಎಲ್ಲೂ ಅಕ್ಷರಶಃ ಕಾರ್ಯರೂಪಕ್ಕೆ ಬಾರದಿರುವುದು ಆಡಳಿತ ವ್ಯವಸ್ಥೆಯ ಇಬ್ಬಗೆಯ ಧೋರಣೆ ಮತ್ತು ಸಮಾಜದ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯೇ ಸರಿ. ಹೊಸದಿಲ್ಲಿಯ ವಾರ್ಷಿಕ ಸಮಸ್ಯೆಯಾದ ವಾಯುಮಾಲಿನ್ಯ ಚಳಿಗಾಲದ ಋತು ಆರಂಭಗೊಳ್ಳುತ್ತಿದ್ದಂತೆಯೇ ತೀವ್ರಗೊಂಡಿದೆ. ಅಕ್ಟೋಬರ್ ತಿಂಗಳ ಕೊನೆಯ ವಾರದಿಂದೀಚೆಗೆ ದಿಲ್ಲಿಯಲ್ಲಿ ವಾಯುಮಾಲಿನ್ಯ ದಿನೇದಿನೇ ಹೆಚ್ಚುತ್ತಲೇ ಸಾಗಿದೆ. ಈಗಾಗಲೇ ನಗರದಲ್ಲಿ ವಾಯು ಗುಣಮಟ್ಟ ಸೂಚ್ಯಂಕ ಅತೀ ಕಳಪೆ ಮಟ್ಟಕ್ಕೆ ತಲುಪಿದ್ದು, ಮುಂದಿನ ದಿನಗಳಲ್ಲಿ ವಾಯುಮಾಲಿನ್ಯ ಇನ್ನಷ್ಟು ಉಲ್ಬಣಿಸುವ ಆತಂಕ ಮನೆಮಾಡಿದೆ.

ಅಲ್ಲದೆ, ತನ್ನ ಆದೇಶ ಮತ್ತು ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಹಾಗೂ ಉಲ್ಲಂ ಸಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರಕಾರಕ್ಕೆ ಕಟ್ಟಪ್ಪಣೆ ಮಾಡಿದೆ. ಸದ್ಯ ದೇಶದ ಬಹುತೇಕ ರಾಜ್ಯಗಳಲ್ಲಿ ಹಸುರು ಪಟಾಕಿ ಸಿಡಿಸಲಷ್ಟೇ ಅನುಮತಿ ನೀಡಲಾಗಿದೆಯಲ್ಲದೆ ಪಟಾಕಿಗಳನ್ನು ಸಿಡಿಸಲು ನಿರ್ದಿಷ್ಟ ಸಮಯವನ್ನು ನಿಗದಿಪಡಿಸಲಾಗಿದೆ. ಇಂತಹ ಪ್ರಕ್ರಿಯೆ ಕಳೆದ ಮೂರ್ನಾಲ್ಕು ವರ್ಷಗಳಿಂದ ನಡೆಯುತ್ತಲೇ ಬಂದಿದ್ದರೂ ಈ ನಿರ್ಬಂಧ, ಷರತ್ತುಬದ್ಧ ನಿಯಮಾವಳಿಗಳ ಪಾಲನೆ ಯಾವ ರಾಜ್ಯದಲ್ಲೂ ಕಟ್ಟುನಿಟ್ಟಾಗಿ ಆಗುತ್ತಿಲ್ಲ.

ಮಧ್ಯರಾತ್ರಿ ಹಾಗೂ ಬೆಳಗಿನ ಜಾವದಲ್ಲಿ ಭಾರೀ ಶಬ್ದದ ಪಟಾಕಿಗಳನ್ನು ಸಿಡಿಸುವುದರಿಂದ ವಾಯುಮಾಲಿನ್ಯ, ಶಬ್ದ ಮಾಲಿನ್ಯದ ಜತೆಯಲ್ಲಿ ವಿವಿಧ ಅನಾರೋಗ್ಯದಿಂದ ಬಳಲುತ್ತಿರುವವರು, ಹಿರಿಯ ನಾಗರಿಕರು, ಪುಟಾಣಿ ಮಕ್ಕಳ ಆರೋಗ್ಯದ ಮೇಲೆ ಮಾತ್ರವಲ್ಲದೆ ಪ್ರಾಣಿ-ಪಕ್ಷಿಗಳಿಗೂ ಸಂಕಷ್ಟ ತಂದೊಡ್ಡಿವೆ. ಇಂತಹ ಸ್ಥಿತಿಯಲ್ಲಿ ಪ್ರಜ್ಞಾವಂತ ನಾಗರಿಕ ಸಮಾಜ ವಾಸ್ತವವನ್ನು ಅರಿತುಕೊಂಡು ವಿವೇಕಯುತವಾಗಿ ವರ್ತಿಸಿ ಸರಕಾರದೊಂದಿಗೆ ಕೈಜೋಡಿಸಬೇಕು. ಇಂತಹ ವಿಷಯಗಳಲ್ಲಿ ಧರ್ಮ, ನಂಬಿಕೆ ವಿಷಯಗಳನ್ನು ಮುನ್ನೆಲೆಗೆ ತಂದು ದೇಶದ ನ್ಯಾಯಾಂಗ, ಆಡಳಿತ ವ್ಯವಸ್ಥೆಗೆ ಸಡ್ಡು ಹೊಡೆಯುವುದು ಸಮರ್ಥನೀಯವಾಗಲಾರದು.

ರಾಮಾಯಣ



23. ರಾವಣನೇ ಯುದ್ಧರಂಗಕ್ಕೆ ನಡೆತಂದುದು; ಅವನನ್ನು ಲಕ್ಷ್ಮಣನು ಎದುರಿಸುವು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಧುರವಿಜಯನಾದ ಸೌಮಿತ್ರಿ ಶರಚಾಪಗಳನ್ನು ಹಿಡಿದು ಪಕ್ಕದಲ್ಲಿರಲು ರಘುನಾಥನು ಅವನನ್ನು ನೋಡಿ, ಆನಂತರ ಎದುರಿಗೆ ಅಷ್ಟು ದೂರದಲ್ಲಿ ಬಿಲ್ಲುಬಾಣಗಳನ್ನು ಹಿಡಿದು ನಿಂತಿದ್ದ ದಶಾಸ್ಯನನ್ನು ಕಂಡು ಅವನ ಕಡೆಗೆ ತ್ವರಿತವಾಗಿ ಹೋಗತೊಡಗಿದ. ಅವನನ್ನು ಕಂಡ ಮಾರುತಿಯು ರಾಮನ ಚರಣದ್ವಯಗಳಿಗೆರಗಿ, ಶ್ರೀಹರಿಯು ಗರುಡವಾಹನದ ಮೇಲೆ ಕುಳಿತು ಹೋಗುವ ಹಾಗೆ ನನ್ನ ಹೆಗಲನ್ನೇರಿ ಯುದ್ಧಕ್ಕೆ ಹೊರಡಿ'' ಎಂದು ವಿನಯದಿಂದ ಬಿನ್ನವಿಸಿಕೊಂಡ. ಆಗ ಹರುಷದಿಂದ ಅವನ ಹೆಗಲನ್ನೇರಿದ ರಘುವರನು ಭೂದಿವಿಜದೇವತೆಗಳ ಶತ್ರುವಿದ್ದ ಕಡೆ ನಡೆದು ರಕ್ಕಸಬಲವು ಬೆದರುವ ಹಾಗೆ ಜಯಘೋಷ ಮಾಡುತ್ತ, ತನ್ನ ಕೋದಂಡವನ್ನು ಜೇವಡೆದು, ದಶಕಂಠನನು ಕುರಿತು, ನೀನು ಶೂರನೇ ಆದರೆ ನನ್ನ ವಿರುದ್ಧ ಸಮರದಲ್ಲಿ ನಿಂತು ನಿನ್ನ ಬಾಹುಬಲವನ್ನು ತೋರಿಸು. ಬಹುಕಾಲದಿಂದ ದೇವಸಂತತಿಯನ್ನು ದ್ವೇಷಿಸುತ್ತ. ಭೂದಿವಿಜರಿಗೆ ಅಪಚಾರವನ್ನು ಮಾಡುತ್ತ, ಅಖಿಲ ಭೂತತಿಗೆ ತೊಂದರೆಯನ್ನು ಕೊಡುತ್ತ ಬಂದಿರುವ ಕಾರಣದಿಂದ ನಿನಗೆ ಈ ಸನ್ನಿವೇಶ ಉಂಟಾಗಿದೆ. ಸ್ವಯಂಭೂನಿಂದ ಈ ಮಹಾ ಬಲವು ಬಂದಿದ್ದರೂ ಅವಿರಳವಾದ ದರ್ಪವು ತುಂಬಿಕೊಂಡು ಈಗ ನನ್ನ ದೃಷ್ಟಿಗೆ ಬಿದ್ದಿದ್ದೀಯೆ. ಶುಕ್ರಶಿಷ್ಯರ ಅಧಿನಾಥನೇ, ಈಗ ನನ್ನಿಂದ ತಪ್ಪಿಸಿಕೊಂಡು ನೀನು ಎಲ್ಲಿಗೂ ಹೋಗಲಾರೆ. ದೇವಲೋಕವನ್ನು ಹೊಕ್ಕರೂ, ಬ್ರಹ್ಮನ ತಲಯದಲ್ಲಿ ಆಸ್ಪದ ಪಡೆದರೂ, ಶಂಕರಾಲಯದಲ್ಲಿ ಬಚ್ಚಿಟ್ಟುಕೊಂಡರೂ, ಅಗ್ನೀಯೇ ಮುಂತಾದ ದಿಕ್ಪಾಲಕರ ಪಟ್ಟಣದಲ್ಲಿ ಅಡಗಿಕೊ೦ಡರೂ, ನಿನ್ನನ್ನು ಯಾರು ತಾನೇ ರಕ್ಷಿಸಬಲ್ಲರು ಹಿಂದೆ ನೀನು ಮಾಡಿದ ಪಾಪಕೃತ್ಯಗಳಿಗೆ ಈಗ ನನ್ನ ಬಾಣಗಳೇ ಪ್ರಾಯಶ್ಚಿತ್ತವನ್ನು ಮಾಡುತ್ತವೆ. ತನ್ನ ಸ್ವಸ್ವಶಕ್ತಿಯಿಂದ. ಗಟಶ್ಧಾತಿಯನ್ನಾ ಳಿದನೋ, ಯಾರು. ಜನಸ್ಥಾನದಲ್ಲಿ ನಿನ್ನ ಬತ್ತ ಪಾಲಿಗೆ ಕಾಳ್ಗಿಚ್ಚಾದನೋ ಆ ನಾನು ಬಂದಿದ್ದೇನೆ. ನನ್ನೆ ದುರುವಾ ಹೋರಾಡು, ನೀನೂ ಯಮಪುರಿಯನ್ನು ಅವರಂತೆಯೇ ಒಂದರೆಕ್ಷಣದಲ್ಲಿ ಕಾಣುವೆ'' ಎಂದು ಗಂಭೀರವಾಣಿಯಿಂದ ನುಡಿದ. ಇನವಂಶತಿಲಕನ ಈ ಮೂದಲಿಕೆಯನ್ನು ಕೇಳಿ ದನುಜವಂಶಜನಿಗೆ ಕೋಪಾತಿಶಯವುಂಟಾಗಿ ಕಿಡಿಕಿಡಿಯೋಗಿ, ತನ್ನ ಬತ್ತಳಿಕೆಯಿಂದ ಪಾವಕಾಸ್ತ್ರವನ್ನು ತೆಗೆದು ಹನುಮನನ್ನು ನೋಡುತ್ತ ಬಿಡಲು, ಆ ಶರವು ಹೆಚ್ಚಿನ ಜ್ವಾಲೆಯನ್ನು ಗುಳುತ್ತ ಬರಲು, ದಶಕಂಧರನ ಆಟೋಪವನ್ನು ನೋಡಿ ರಘುವರನೂ ಅದ್ಭುತ ಶರವೊಂದನ್ನು ಕೈಗೆ ತೆಗೆದುಕೊಂಡ. ಆ ಅಸ್ತ್ರಸ್ತವನ್ನು ಬಲ್ಲಿಗೆ ಹೂಡಿ ಬಲವಾಗಿ ಬಿಡಲು ಅದು ಹೋಗಿ ರಥಪತಾಕೆ ಸಾರಥಿಗಳನ್ನು ಕೆಡವಿ, ರಾವಣನ ಬತ್ತಳಿಕೆಯ ಬಾಣಗಳನ್ನು ನೆಲಸಮ ಮಾಡಿತು. ಆನಂತರ ಬಿಟ್ಟ ಅರ್ಧಚಂದ್ರಾಕೃತಿಯ ಬಾಣವು ಬೃಂದಾರಕಾರಿಯನ್ನು ನಡುಗಿಸಿತು, ಅವನ ಕಿರೀಟವನ್ನದು ಹಾರಿಸಿತಲ್ಲದೆ, ಕೈಯಲ್ಲಿದ್ದ ಬಿಲ್ಲುಬಾಣಗಳನ್ನು ನೆಲಕ್ಕೆ ಬೀಳಿಸಿತು. ಆಗ ರಕ್ಕಸಮಹೀಪತಿಯು ರಣಾಂಗಣದಲ್ಲಿ, ವಿಷವನ್ನು ಗುಳಿದ ಹಾವಿನಂತೆ, ಜ್ವಾಲೆಗಳನ್ನು ಕಳೆದುಕೊಂಡ ಬೆಂಕಿಯಂತೆ, ಬಿಸುಪನ್ನು ಬಿಟ್ಟ ಸೂರ್ಯನಂತೆ ಗೋಚರಿಸಿದ. ಮ್ಲಾನವದನನಾಗಿ ಖಿನ್ನತೆಯಿಂದ ಕೂಡಿದ ದನುಜೇಂದ್ರನನ್ನು ನೋಡಿ ರಘುರಾಮನು ನಗುತ್ತ ಲೇವಡಿ ಮಾಡಿದ ರಾಕ್ಷಸೇಶ್ವರನೇ, ಈ ದಿನ ನೀನು ನನ್ನ ಕಡೆಯ ಅನೇಕ ವೀರರನ್ನು ಭೀಕರ ಯುದ್ಧದಲ್ಲಿ ಕೊಂದಿದ್ದೀಯೆ. ನೀನು ಬಹಳ ಬಳಲಿರುವುದರಿಂದ ಈಗಲೇ ನಿನ್ನನ್ನು ವೈವಸ್ವತನ ಬಳಿಗೆ ಕಳಿಸದಿರಲು ನಿರ್ಧರಿಸಿದ್ದೇನೆ. ಈಗ ನಿನಗೆ ಅಪ್ಪಣೆ ಕೊಟ್ಟದ್ದೇನೆ. ನಿನ್ನ ಊರಿಗೆ ಮರಳಿ ರಾತ್ರಿಯೆಲ್ಲ ವಿಶ್ರಾಂತಿಯನ್ನು ಪಡೆದು ನಾಳೆ ಹೊಸತಾದ ಹೊಂದೇರನ್ನೇರಿ ರಣರಂಗಕ್ಕೆ ಧೈರ್ಯದಿಂದ ಬಂದು ನಿನ್ನ ಶೌರ್ಯವನ್ನು ತೋರಿಸು. ಆಗ ನನ್ನ ಕೈಗುಣವನ್ನು ನೀನು ನೋಡುವೆಯಂತೆ, ನನ್ನ ಬಾಣಗಳ ರುಚಿಯನ್ನು ಸವಿಯುವೆಯಂತೆ'' ಎಂದು ಹೇಳಿದ. ಆಗ ರಾವಣನು ಲಜ್ಜೆಯಿಂದ ಮೇಲೆದ್ದು ನಿಧಾನವಾಗಿ ನಡೆಯುತ್ತ ತನ್ನ ದಳದೊಡನೆ ಲಂಕೆಗೆ ಹಿಂದಿರುಗಿದ. ಅಭಿಮಾನವು ಸೋರಿ ಹೋಗಿ, ತನ್ನ ಕುದುರೆ ಸಾರಥಿಗಳನ್ನು ಕಳೆದುಕೊಂಡು, ಕೆಳಕ್ಕೆ ಬಿದ್ದಿದ್ದ ತನ್ನ ಕಿರೀಟವನ್ನು ಎತ್ತಿಕೊಂಡು, ಮೈಕೈಯೆಲ್ಲ ಗಾಯಗೊಂಡು ನೋವಿನಿಂದ ಕೂಡಿ ದಶಕಂಠನು ಲಂಕಾಪುರವನ್ನು ಹೊಕ್ಕ. ರಾಘವನು ಹಿಂತಿರುಗಿ ತನ್ನ ಕಡೆಯ ಗಾಯಗೊಂಡ ಸೈನಿಕರನ್ನು ಉಪಚರಿಸಿ ಲಕ್ಷ್ಮಣನನ್ನು ಸಂತಸಗೊಳಿಸಿದ. ಹೀಗೆ ಲೋಕಕಂಟಕನಾದ ದಶಾಸ್ಯನು ಮನೆಗೆ ಹೋಗಲು, ಸುರಸಮೂಹವು ಸಂತಸದಿಂದ ರಾಮನನ್ನು ಹೊಗಳಿ ಹೂಮಳಗರೆಯಿತು, ಭೇರಿಯನ್ನು ಹೊಡೆಸಿತು. ಹೀಗೆ ಶ್ರೀಕಾಂತನಾದ ರಾಮಪುರದರಸನು ತನ್ನ ಭಜಕರನ್ನು ನಾನಾ ಬಗೆಯಲ್ಲಿ ಹರುಷಗೊಳಿಸಿ, ಅವರ ಇಷ್ಟಾರ್ಥಗಳನ್ನಿತ್ತು ದೆಸೆದೆಸೆಗಳಲ್ಲಿ ತನ್ನ ಕರುಣೆಯನ್ನು ಹರಿಸಿದ.

ಮುಂದುವರೆಯುವುದು

ಅಧಿಕ ಒತ್ತಡ, ನಿದ್ರೆ ಕೊರತೆ ಜಂಕ್ ಫುಡ್ ತಿನ್ನಬೇಕೆಂಬ ಬಯಕೆಗೆ ಕಾರಣವೇ? ಈ ಅಭ್ಯಾಸ ಬಿಡುವುದು ಹೇಗೆ?

ಅನೇಕ ಜನರು ಹೊರಗಿನ ಆಹಾರದ ರುಚಿಗೆ ಒಗ್ಗಿಕೊಂಡಿದ್ದಾರೆ. ಆಗಾಗ್ಗೆ ಜಂಕ್ ಫುಡ್‌ಗಳನ್ನು ಸೇವಿಸುತ್ತಾರೆ. ಪಿಜ್ಜಾ, ಬರ್ಗರ್, ನೂಡಲ್ಸ್, ಚಿಪ್ಸ್ ಹಾಗೂ ತಂಪು ಪಾನೀಯಗಳಂತಹ ಪದಾರ್ಥಗಳು ದೈನಂದಿನ ದಿನಚರಿಯ ಭಾಗವಾಗಿವೆ. ಈ ಅಭ್ಯಾಸವು ದೀರ್ಘಕಾಲದಲ್ಲಿ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ಆರೋಗ್ಯ ತಜ್ಞರು ಎಚ್ಚರಿಕೆ ನೀಡುತ್ತಾರೆ.

ಇಂತಹ ಆಹಾರಗಳ ಸೇವನೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು ಎಂದು ತಜ್ಞರು ತಿಳಿಸುತ್ತಾರೆ. ಜಂಕ್ ಫುಡ್ ಸೇವನೆಯಿಂದ ಉಂಟಾಗುವ ಅಪಾಯಗಳೇನು? ಇಂತಹ ಆಹಾರಗಳ ಮೇಲಿನ ಬಯಕೆಗೆ ಕಾರಣಗಳೇನು? ಈ ಅಭ್ಯಾಸವನ್ನು ನಿಯಂತ್ರಿಸಲು ಸಹಾಯ ಮಾಡುವ ಕೆಲವು ಸಲಹೆಗಳ ಕುರಿತು ತಿಳಿಯೋಣ. ಕ್ಲೀವ್‌ಲ್ಯಾಂಡ್ ಕ್ಲಿನಿಕ್ ಸಂಶೋಧನೆ ತಿಳಿಸುವ ಪ್ರಕಾರ, ಜಂಕ್ ಫುಡ್ ಆರೋಗ್ಯಕ್ಕೆ ಹಾನಿಕಾರಕ. ಇಂತಹ ಆಹಾರಗಳನ್ನು ಸಾಮಾನ್ಯವಾಗಿ ಅತಿಯಾದ ಸಕ್ಕರೆ ಹಾಗೂ ಸ್ಯಾಚುರೇಟೆಡ್ ಕೊಬ್ಬುಗಳನ್ನು ಬಳಸಿ ತಯಾರಿಸಲಾಗುತ್ತದೆ.

ಇವುಗಳನ್ನು ಸೇವಿಸುವುದರಿಂದ ದೇಹದಲ್ಲಿ ಕೆಟ್ಟ ಕೊಬ್ಬುಗಳು ,ಕ್ಯಾಲೊರಿಗಳ ಪ್ರಮಾಣ ಹೆಚ್ಚಾಗುತ್ತದೆ, ಕಾಲಕ್ರಮೇಣ ಬೊಜ್ಜು ಸ್ಥೂಲಕಾಯಕ್ಕೆ ಕಾರಣವಾಗಬಹುದು. ಸ್ಯಾಚುರೇಟೆಡ್ ಕೊಬ್ಬು ಹೆಚ್ಚಿರುವ ಆಹಾರಗಳನ್ನು ಸೇವಿಸುವುದರಿಂದ ಕೆಟ್ಟ ಕೊಲೆಸ್ಟ್ರಾಲ್ ಮಟ್ಟ ಹೆಚ್ಚಾಗುತ್ತದೆ. ಇದು ರಕ್ತನಾಳಗಳ ಒಳ ಗೋಡೆಗಳ ಮೇಲೆ ಗಟ್ಟಿಯಾದ ಪದರದಂತೆ ಶೇಖರಣೆಯಾಗಬಹುದು.

ಈ ಪದರವು ಬೆಳೆದಂತೆ ರಕ್ತನಾಳಗಳು ತಮ್ಮ ಸ್ಥಿತಿಸ್ಥಾಪಕತ್ವವನ್ನು ಕಳೆದುಕೊಂಡು ಕಿರಿದಾಗುತ್ತವೆ. ಇದರಿಂದ ರಕ್ತ ಪರಿಚಲನೆ ನಿಧಾನವಾಗುತ್ತದೆ. ಒಂದು ವೇಳೆ ಈ ಅಡೆತಡೆಗಳಿಂದ ರಕ್ತದ ಹರಿವು ಸಂಪೂರ್ಣವಾಗಿ ನಿಂತುಹೋದರೆ, ಹೃದಯಾಘಾತ ಹಾಗೂ ಪಾರ್ಶ್ವವಾಯುನಂತಹ ಗಂಭೀರ ಆರೋಗ್ಯ ಸಮಸ್ಯೆಗಳು ಉಂಟಾಗುವ ಅಪಾಯ ಹೆಚ್ಚಿರುತ್ತದೆ.

ಜಂಕ್ ಫುಡ್‌ನಲ್ಲಿರುವ ಹೆಚ್ಚಿನ ಸಕ್ಕರೆಯ ಅಂಶವು ತೂಕ ಹೆಚ್ಚಳಕ್ಕೆ ಕಾರಣವಾಗುತ್ತದೆ. ಇದರ ಪರಿಣಾಮವಾಗಿ ಮಧುಮೇಹ ಪೂರ್ವ ಸ್ಥಿತಿ, ಮಧುಮೇಹ ಹಾಗೂ ಹೃದಯ ಕಾಯಿಲೆಗಳ ಅಪಾಯ ಹೆಚ್ಚಿಸುತ್ತದೆ. ಗರ್ಭಾವಸ್ಥೆಯಲ್ಲಿ ಜಂಕ್ ಫುಡ್ ಸೇವಿಸುವುದು ತಾಯಿ, ಮಗು ಇಬ್ಬರಿಗೂ ಹಾನಿಕಾರಕವೆಂದು ಪರಿಗಣಿಸಲಾಗಿದೆ ಎಂದು ತಜ್ಞರು ತಿಳಿಸುತ್ತಾರೆ.

ಜಂಕ್ ಫುಡ್ ತಿನ್ನಬೇಕೆಂಬ ಬಯಕೆ ಸಹಜವಾಗಿರುತ್ತದೆ. ಇವುಗಳಲ್ಲಿರುವ ಸಕ್ಕರೆ, ಉಪ್ಪು ಮತ್ತು ಕೊಬ್ಬಿನಂಶವು ಮೆದುಳಿನಲ್ಲಿ ಡೋಪಮೈನ್ ಎಂಬ ರಾಸಾಯನಿಕದ ಬಿಡುಗಡೆಗೆ ಪ್ರಚೋದನೆ ನೀಡುತ್ತದೆ. ಈ ಹಾರ್ಮೋನ್ ತಾತ್ಕಾಲಿಕ ಸಂತೋಷ, ತೃಪ್ತಿಯ ಭಾವನೆ ನೀಡುತ್ತದೆ. ಮೆದುಳು ಪದೇ ಪದೇ ಈ ಭಾವನೆಯನ್ನು ಬಯಸಲು ಪ್ರಾರಂಭಿಸುವುದರಿಂದ ನಮ್ಮನ್ನು ಜಂಕ್ ಫುಡ್‌ಗಳತ್ತ ಸೆಳೆಯುತ್ತದೆ.

ಜೊತೆಗೆ ಸಾಕಷ್ಟು ನಿದ್ರೆಯ ಕೊರತೆಯು ಜಂಕ್ ಫುಡ್ ಸೇವಿಸುವ ಬಯಕೆಯನ್ನು ಹೆಚ್ಚಿಸಬಹುದು ಎಂದು ತಜ್ಞರು ವಿವರಿಸುತ್ತಾರೆ. ನಿದ್ರೆಯ ಕೊರತೆಯು ಹಸಿವನ್ನು ಉಂಟುಮಾಡುವ 'ಘ್ರೆಲಿನ್' ಎಂಬ ಹಾರ್ಮೋನ್ ಮಟ್ಟವನ್ನು ಹೆಚ್ಚಿಸುವುದಲ್ಲದೆ, ಹೊಟ್ಟೆ ತುಂಬಿದೆ ಎಂದು ಸೂಚಿಸುವ 'ಲೆಪ್ಟಿನ್' ಎಂಬ ಹಾರ್ಮೋನ್ ಮಟ್ಟವನ್ನು ಕಡಿಮೆ ಮಾಡುತ್ತದೆ.

ಪರಿಣಾಮವಾಗಿ ಸ್ನ್ಯಾಕ್ಸ್, ಐಸ್ ಕ್ರೀಮ್ ಹಾಗೂ ಹೆಚ್ಚಿನ ಕ್ಯಾಲೋರಿ ,ಸಕ್ಕರೆ ಅಂಶವಿರುವ ಆಹಾರಗಳನ್ನು ಸೇವಿಸಬೇಕೆಂಬ ತೀವ್ರವಾದ, ಅಕಾಲಿಕ ಬಯಕೆ ಉಂಟಾಗುತ್ತದೆ. ಜಂಕ್ ಫುಡ್‌ಗಳನ್ನು ಅತಿಯಾಗಿ ಸೇವಿಸಲು ಒತ್ತಡ ಕೂಡ ಒಂದು ಪ್ರಮುಖ ಕಾರಣ. ನಿರಂತರ ಒತ್ತಡವು ದೇಹದಲ್ಲಿ ಕಾರ್ಟಿಸೋಲ್ ಹಾಗೂ ಹಸಿವಿಗೆ ಸಂಬಂಧಿಸಿದ ಇತರ ಹಾರ್ಮೋನುಗಳ ಮಟ್ಟವನ್ನು ಹೆಚ್ಚಿಸುತ್ತದೆ. ಸಿಹಿ ಹಾಗೂ ಕೊಬ್ಬಿನಾಂಶವಿರುವ ಆಹಾರಗಳ ಕಡೆಗೆ ಸೆಳೆತ

ಪರೀಕ್ಷಾ ಸಂಭ್ರಮ



ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

29

ತಲೆಸುತ್ತು ಬಂದಾಗ ತಕ್ಷಣದ ಜಾಗ್ರತೆ

ತಲೆಸುತ್ತು ಬಂದೊಡನೆ ಗಾಬರಿಗೊಳ್ಳಬೇಡಿ. ಮೊದಲು ಸುರಕ್ಷಿತ ಸ್ಥಳ ಹುಡುಕಿ ತಕ್ಷಣ ಕುಳಿತುಕೊಳ್ಳಿ ಅಥವಾ ಮಲಗಿಕೊಳ್ಳಿ. ಕಾಲುಗಳನ್ನು ಸ್ವಲ್ಪ ಮೇಲಕ್ಕೆ ಎತ್ತಿ ಇಡುವುದರಿಂದ ಮೆದುಳಿಗೆ ರಕ್ತಸಂಚಾರ ಸರಾಗವಾಗುತ್ತದೆ. ಕಣ್ಣು ಮುಚ್ಚಿ ಆಳವಾಗಿ ಉಸಿರಾಡಿ. ಸುತ್ತಲಿರುವವರ ಸಹಾಯ ಕೇಳಲು ಹಿಂಜರಿಯಬೇಡಿ, ಒಬ್ಬರೇ ಇದ್ದರೆ ಗೋಡೆ ಅಥವಾ ಮೇಜಿನ ಆಸರೆ ಪಡೆಯಿರಿ.

ಪರೀಕ್ಷಾ ಕೊಠಡಿಯಲ್ಲಿ ಅಥವಾ ಮನೆಯಲ್ಲಿ ಓದುತ್ತಿರುವಾಗ ಇದ್ದಕ್ಕಿದ್ದಂತೆ ತಲೆ ಸುತ್ತಿದಂತೆ, ನೆಲವೇ ತಿರುಗಿದಂತೆ ಭಾಸವಾಗುವುದು ಸಹಜ.

ಕಣ್ಣು ಮಂಜಾಗುತ್ತದೆ, ನಿಲ್ಲಲು ಕಷ್ಟವಾಗುತ್ತದೆ, ಬೀಳುತ್ತೇನಾ ಎಂಬ ಭಯ ಆವರಿಸುತ್ತದೆ. ಇದು ತೀವ್ರ ಆತಂಕ, ನಿದ್ರಾ ಕೊರತೆ, ಜಲಾಂಶದ ಕೊರತೆ ಅಥವಾ ದೀರ್ಘಕಾಲ ಆಹಾರ ಸೇವಿಸದಿರುವುದರಿಂದ ಉಂಟಾಗಬಹುದು.

ತಕ್ಷಣಕ್ಕೆ ಸಿಹಿ ಅಥವಾ ಉಪ್ಪು ಬೆರೆಸಿದ ನೀರು, ಬಾಳೆಹಣ್ಣು, ಬಿಸ್ಕತ್ ಸೇವಿಸಿ. ರಕ್ತದಲ್ಲಿ ಸಕ್ಕರೆ ಅಂಶ ಕುಸಿದಾಗಲೂ ತಲೆಸುತ್ತು ಬರಬಹುದು. ಬಿಗಿಯಾದ ಉಡುಪನ್ನು ಸಡಿಲಗೊಳಿಸಿ, ಮುಖಕ್ಕೆ ತಣ್ಣೀರು ಚಿಮುಕಿಸಿಕೊಳ್ಳಿ.

ಹತ್ತು ನಿಮಿಷ ವಿಶ್ರಾಂತಿ ಪಡೆದ ನಂತರವೇ ನಿಧಾನವಾಗಿ ಮೇಲೇಳಿ, ಒಮ್ಮೆಲೇ ಎದ್ದರೆ ಮತ್ತೆ ಸುತ್ತು ಬರುವ ಸಾಧ್ಯತೆಯಿದೆ. ನೆನಪಿಡಿ, ತಲೆಸುತ್ತು ಎಂದರೆ ದೇಹ ನಿಲ್ಲು, ವಿಶ್ರಾಂತಿ ಅಗತ್ಯ ಎಂದು ನೀಡುವ ಸಂಕೇತ. ಅದನ್ನು ನಿರ್ಲಕ್ಷಿಸಬೇಡಿ. ದಿನಕ್ಕೆ ಮೂರು ಲೀಟರ್ ನೀರು, ಸಮತೋಲಿತ ಆಹಾರ ಮತ್ತು ಏಳು ಗಂಟೆ ನಿದ್ರೆ ಇದ್ದರೆ ಇದು ಕಡಿಮೆಯಾಗುತ್ತದೆ. ದೇಹವನ್ನು ಜತನದಿಂದ ನೋಡಿಕೊಂಡರೆ ಮಾತ್ರ ಓದಿನಲ್ಲಿ ಏಕಾಗ್ರತೆ ಮೂಡುತ್ತದೆ.



ಅಭ್ಯಂಗಸ್ನಾನದ ಮಹತ್ವ ಹಾಗೂ ಲಾಭಗಳು - ದೀಪಾವಳಿ ನಿಮಿತ್ತ ಸನಾತನ ಸಂಸ್ಥೆಯ ವಿಶೇಷ ಲೇಖನ

ಶರೀರಕ್ಕೆ ಎಣ್ಣೆಯನ್ನು ಹಚ್ಚಿ ಅದನ್ನು ತಿಕ್ಕಿ ತ್ವಚೆಯಲ್ಲಿ ಇಂಗಿಸಿ ನಂತರ ಬಿಸಿ ನೀರಿನಿಂದ ಸ್ನಾನ ಮಾಡುವುದೆಂದರೆ ಅಭ್ಯಂಗಸ್ನಾನ. ವರ್ಷದಲ್ಲಿ ಯುಗಾದಿ, ವಸಂತೋತ್ಸವವು ಪ್ರಾರಂಭವಾಗುವ ದಿನ ಅಂದರೆ ಫಾಲ್ಗುಣ ಕೃಷ್ಣ ಪ್ರತಿಪದಾ ಮತ್ತು ದೀಪಾವಳಿಯ ಮೂರು ದಿನಗಳು, ಅಂದರೆ ಆಶ್ವಯುಜ ಕೃಷ್ಣ ಚತುರ್ದಶಿ, ಆಶ್ವಯುಜ ಅಮಾವಾಸ್ಯೆ ಮತ್ತು ಕಾರ್ತಿಕ ಶುಕ್ಲ ಪ್ರತಿಪದಾದಂದು ಅಭ್ಯಂಗಸ್ನಾನವನ್ನು ಮಾಡಲಾಗುತ್ತದೆ. ಅಭ್ಯಂಗಸ್ನಾನದಿಂದ ರಜ-ತಮ ಗುಣಗಳು ಒಂದು ಲಕ್ಷಾಂಶದಷ್ಟು ಕಡಿಮೆಯಾಗಿ ಅಷ್ಟೇ ಪ್ರಮಾಣದಲ್ಲಿ ಸತ್ತ್ವಗುಣವು ಹೆಚ್ಚಾಗುತ್ತದೆ; ಇದರ ಪರಿಣಾಮವು ನಿತ್ಯದ ಸ್ನಾನದಿಂದ ಮೂರು ಗಂಟೆ ಉಳಿದರೆ ಅಭ್ಯಂಗಸ್ನಾನದ ಪ್ರಭಾವವು ನಾಲ್ಕರಿಂದ ಐದು ಗಂಟೆ ಉಳಿಯುತ್ತದೆ. ಚರ್ಮಕ್ಕೆ ಯಾವಾಗಲೂ ಸ್ನಿಗ್ಧತೆ ಇರಬೇಕಾಗುತ್ತದೆ, ಆದುದರಿಂದ ಎಣ್ಣೆಯನ್ನು ಹಚ್ಚುತ್ತಾರೆ. ಬಿಸಿನೀರು ಮಂಗಲಕಾರಕ ಮತ್ತು ಶರೀರಕ್ಕೆ ಸುಖದಾಯಕವಾಗಿರುತ್ತದೆ; ಆದುದರಿಂದ ಬಿಸಿನೀರಿನಿಂದ ಸ್ನಾನವನ್ನು ಮಾಡುತ್ತಾರೆ. ಎಣ್ಣೆಯನ್ನು ಹಚ್ಚಿದ ನಂತರ ಸ್ನಾನವನ್ನು ಮಾಡುವುದರಿಂದ ಚರ್ಮ ಮತ್ತು ಕೂದಲಿಗೆ ಬೇಕಾದಷ್ಟೇ ಎಣ್ಣೆಯು ಉಳಿಯುತ್ತದೆ. ಆದುದರಿಂದ ಸ್ನಾನಕ್ಕೆ ಮೊದಲು ಎಣ್ಣೆಯನ್ನು ಹಚ್ಚುವುದು ಆವಶ್ಯಕವಾಗಿದೆ. ಸ್ನಾನದ ನಂತರ ಎಣ್ಣೆಯನ್ನು ಹಚ್ಚುವುದು ಯೋಗ್ಯವಲ್ಲ. ದೀಪಾವಳಿಯ ದಿನಗಳಲ್ಲಿ ಅಭ್ಯಂಗ ಸ್ನಾನ ಮಾಡುವುದರಿಂದ ವ್ಯಕ್ತಿಗೆ ಉಳಿದ ದಿನಗಳ ತುಲನೆಯಲ್ಲಿ ಶೇ.6ರಷ್ಟು ಹೆಚ್ಚು ಸಾತ್ತ್ವಿಕತೆಯು ಸಿಗುತ್ತದೆ. ಸುಗಂಧಯುಕ್ತ ಎಣ್ಣೆ ಮತ್ತು ಉಟಣೆಯನ್ನು ಹಚ್ಚಿಕೊಂಡು ಶರೀರಕ್ಕೆ ಮಾಲಿಶ ಮಾಡಿ ಅಭ್ಯಂಗಸ್ನಾನ ಮಾಡುವುದರಿಂದ ವ್ಯಕ್ತಿಯಲ್ಲಿ ಸಾತ್ತ್ವಿಕತೆ ಮತ್ತು ತೇಜವು ಹೆಚ್ಚಾಗುತ್ತದೆ. ಉಟಣೆಯನ್ನು ಹಚ್ಚಿಕೊಂಡು ಸ್ನಾನವನ್ನು ಮಾಡುವುದರಿಂದ ಕಫ ಮತ್ತು ಕೊಬ್ಬು ಕಡಿಮೆಯಾಗುವುದು

ಸುವಾಸನೆ ಎಣ್ಣೆ ಮತ್ತು ಉಟಣೆ ಇವು ಸಾತ್ತ್ವಿಕವಾಗಿರುವುದರಿಂದ ಸ್ಥೂಲ ಮತ್ತು ಸೂಕ್ಷ್ಮದೇಹದ ಸುತ್ತಲೂ ಇರುವ ತ್ರಾಸದಾಯಕ ಆವರಣವು ನಾಶವಾಗಿ ಶರೀರವು ಶುದ್ಧ ಮತ್ತು ಸಾತ್ತ್ವಿಕವಾಗಲು ಸಹಾಯವಾಗುತ್ತದೆ. ಸುವಾಸನೆ ಎಣ್ಣೆ ಮತ್ತು ಉಟಣೆಗಳನ್ನು ನೈಸರ್ಗಿಕ ವಸ್ತುಗಳಿಂದ ತಯಾರಿಸಲಾಗಿರುತ್ತದೆ ಮತ್ತು ಅವು ಸಾತ್ತ್ವಿಕವಾಗಿರುತ್ತವೆ. ಸುವಾಸನೆಯೂ ಸಾತ್ತ್ವಿಕವಾಗಿರುತ್ತದೆ. ಅವುಗಳಲ್ಲಿ ವಾಯುಮಂಡಲದಲ್ಲಿನ ಸಾತ್ತ್ವಿಕತೆಯನ್ನು ಮತ್ತು ದೇವತೆಗಳ ಲಹರಿಗಳನ್ನು ಗ್ರಹಿಸಿಕೊಳ್ಳುವ ಕ್ಷಮತೆಯಿರುತ್ತದೆ. ಸುವಾಸನೆ ಎಣ್ಣೆ ಅಥವಾ ಉಟಣೆಯನ್ನು ಹಚ್ಚಿಕೊಂಡು ಸ್ನಾನ ಮಾಡುವುದರಿಂದ ಶರೀರದಲ್ಲಿನ ರಜ-ತಮ ಲಹರಿಗಳು ಕಡಿಮೆಯಾಗುತ್ತವೆ. ಹಾಗೆಯೇ ಸ್ಥೂಲ ಮತ್ತು ಸೂಕ್ಷ್ಮದೇಹದ ಸುತ್ತಲೂ ಇರುವ ತ್ರಾಸದಾಯಕ ಶಕ್ತಿಯ ಆವರಣವು ನಾಶವಾಗಿ ಶರೀರವು ಶುದ್ಧ ಹಾಗೂ ಸಾತ್ತ್ವಿಕವಾಗಲು ಸಹಾಯವಾಗುತ್ತದೆ. ಉಟಣೆಯು ರಜೋಗುಣ ಮತ್ತು ತೇಜತತ್ತ್ವಕ್ಕೆ ಸಂಬಂಧಿಸಿದೆ. ಶರೀರದ ಮೇಲೆ ದಕ್ಷಿಣಾವರ್ತ ಅಂದರೆ ಗಡಿಯಾರದ ಮುಳ್ಳಿನ ದಿಕ್ಕಿನಂತೆ ಉಟಣೆಯನ್ನು ಹಚ್ಚಿಕೊಳ್ಳಬೇಕು. ಕೈ ಬೆರಳುಗಳ ತುದಿಯು ಶರೀರವನ್ನು ಸ್ಪರ್ಷಿಸುವಂತೆ ಮತ್ತು ಶರೀರದ ಮೇಲೆ ಸ್ವಲ್ಪ ಒತ್ತಡ ಬರುವಂತೆ ನೋಡಬೇಕು. ತರ್ಜನಿ, ಮಧ್ಯಮಾ ಮತ್ತು ಅನಾಮಿಕಾ ಈ ಬೆರಳುಗಳಿಂದ ಹಣೆ ಮೇಲೆ ತಮ್ಮ ಎಡದಿಂದ ಬಲಕ್ಕೆ ಭಸ್ಮದಂತೆ ಉಟಣೆ ಹಚ್ಚಿಕೊಳ್ಳಬೇಕು.

ಉಟಣೆ ಹಚ್ಚಿಕೊಳ್ಳುವಾಗ ಬಲದಿಂದ ಎಡಕ್ಕೆ ವಿರುದ್ಧ ದಿಕ್ಕಿನಲ್ಲಿ ಬೆರಳುಗಳನ್ನು ತಿರುಗಿಸಬಾರದು. ಹಣೆಯ ಎರಡೂ ಕಡೆಗೆ ಮತ್ತು ಹುಬ್ಬುಗಳ ಹೊರಭಾಗಕ್ಕೆ ಬೆರಳುಗಳ ಅಗ್ರಭಾಗವನ್ನಿಟ್ಟು ಅವುಗಳನ್ನು ಹಿಂದೆ ಮುಂದೆ ಸರಿಸಬೇಕು. ಮೂಗಿನಿಂದ ಕಿವಿಯೆಡೆಗೆ ಕೈಯನ್ನು ತಿರುಗಿಸುತ್ತಾ ಕಣ್ಣು ರೆಪ್ಪೆಯ ಮೇಲೆ ಉಟಣೆಯನ್ನು ಹಚ್ಚಬೇಕು. ಬಲಗೈಯ ಹೆಬ್ಬೆರಳು ಮತ್ತು ತರ್ಜನಿಯಿಂದ ಮೂಗಿನ ಎರಡೂ ಬದಿಗೆ ಮೇಲಿನಿಂದ ಕೆಳಗೆ ಉಟಣೆಯನ್ನು ಹಚ್ಚಬೇಕು ಮತ್ತು ಅದನ್ನು ಆಘ್ರಾಣಿಸಬೇಕು. ಮೂಗಿನ ಕೆಳಗಿನಿಂದ ನಮ್ಮ ಬಲಬದಿಗೆ ಗದ್ದದ ತುದಿಯ ವರೆಗೆ ಹಚ್ಚಬೇಕು. ನಂತರ ಗದ್ದದ ತುದಿಯಿಂದ ನಮ್ಮ



ಶ್ರೀ. ವಿನೋದ ಕಾಮತ್,
ರಾಜ್ಯ ವಕ್ತಾರರು,
ಸನಾತನ ಸಂಸ್ಥೆ

ಉದ್ವರ್ತನಂ ಕಫಹರಂ ಮೇದಸಃ ಪ್ರವಿಲಾಯನಮ್ ।
ಸ್ಥಿರೀಕರಣಮಂಗಾನಾಂ ತ್ವಕ್ಪ್ರಸಾದಕರಂ ಪರಮ್ ।।
– ಅಷ್ಟಾಂಗಹೃದಯ, ಸೂತ್ರಸ್ಥಾನ, ಅಧ್ಯಾಯ 2, ಶ್ಲೋಕ 14

ಅರ್ಥ : ಶರೀರಕ್ಕೆ ಉಟಣೆಯನ್ನು ಹಚ್ಚಿಕೊಳ್ಳುವುದರಿಂದ ಕಫ ಮತ್ತು ಕೊಬ್ಬು ದೂರವಾಗಿ ಶರೀರವು ಸುದೃಢವಾಗುತ್ತದೆ ಮತ್ತು ಚರ್ಮವು ಸ್ವಚ್ಛವಾಗುತ್ತದೆ. (ಉಟಣೆ ಎಂದರೆ ಆಯುರ್ವೇದೀಯವಾದ ನೈಸರ್ಗಿಕ ಘಟಕಗಳಿಂದ ತಯಾರಿಸಿದ ಚೂರ್ಣ)


ಎಡಬದಿಗೆ ಹೋಗಿ ಮುಖದ ಸುತ್ತಲೂ ಗೋಲವನ್ನು ಪೂರ್ಣಗೊಳಿಸಿ ಉಟಣೆ ಹಚ್ಚಿಕೊಳ್ಳಬೇಕು. ಎರಡೂ ಕೆನ್ನೆಯ ಮಧ್ಯದಿಂದ ನಮ್ಮ ಬೆರಳುಗಳನ್ನು ಕಣ್ಣು, ಕಿವಿ ಮತ್ತು ಕೊನೆಗೆ ಕೆಳಗಿನ ದಿಕ್ಕಿನಲ್ಲಿ ವರ್ತುಲಾಕಾರದಲ್ಲಿ ತಿರುಗಿಸುತ್ತಾ ಕೆನ್ನೆಯ ಮೇಲೆ ಉಟಣೆಯನ್ನು ಹಚ್ಚಿಕೊಳ್ಳಬೇಕು.

ಎರಡೂ ಕಿವಿಯ ಕೆಳ ತುದಿಯ ಮೇಲೆ ಹೆಬ್ಬೆರಳು ಮತ್ತು ತರ್ಜನಿಯಿಂದ ಉಟಣೆಯನ್ನು ಹಚ್ಚಬೇಕು. ಹೆಬ್ಬೆರಳು ಮತ್ತು ತರ್ಜನಿಯಿಂದ ಎರಡೂ ಕಿವಿಗಳನ್ನು ಹಿಂದಿನಿಂದ ಹಿಡಿದು ಕೆಳಗಿನಿಂದ ಮೇಲಿನ ದಿಕ್ಕಿನತ್ತ ತಿರುಗಿಸಬೇಕು. ಕುತ್ತಿಗೆ ಹಿಂದೆ ಮಧ್ಯಭಾಗದಲ್ಲಿ ಬೆರಳುಗಳನ್ನಿಟ್ಟು ಎರಡೂ ಬದಿಯಿಂದ ಮುಂದೆ ಕುತ್ತಿಗೆಯ ಕೆಳ ಭಾಗದ ತನಕ ಹಾಗೂ ಎರಡೂ ಕೈಗಳ ಬೆರಳುಗಳನ್ನು ಎದೆಯ ಮಧ್ಯಭಾಗದಲ್ಲಿ ಬರುವಂತೆ ಇಟ್ಟು ಮೇಲಿನಿಂದ ಕೆಳಗೆ ಕೈಯಾಡಿಸಿ ಉಟಣೆಯನ್ನು ಹಚ್ಚಬೇಕು.

ಪಕ್ಕೆಗಳತ್ತ ಮುಂಬದಿಗೆ ಹೆಬ್ಬೆರಳು ಮತ್ತು ಹಿಂಬದಿ ಉಳಿದ ಬೆರಳು ಬರುವಂತೆ ಮೇಲಿನಿಂದ ಕೆಳದಿಕ್ಕಿನತ್ತ ಹಚ್ಚಬೇಕು. ಕೈಗಳಿಗೆ ಮೇಲಿನಿಂದ ಕೆಳಗೆ ಉಟಣೆ ಹಚ್ಚಬೇಕು. ಅದೇ ರೀತಿ ಕಾಲುಗಳಿಗೆ ಕೈಬೆರಳುಗಳಿಂದ ಮೇಲಿನಿಂದ ಕೆಳಗೆ ಉಟಣೆಯನ್ನು ಹಚ್ಚಬೇಕು. ಕಾಲು ಮತ್ತು ಕಾಲುಗಳ ಸಂದು ಅಂದರೆ ಮೇಲೆ ಹೆಬ್ಬೆರಳು ಮತ್ತು ತರ್ಜನಿಯಿಂದ ವರ್ತುಲದಂತೆ ತಿಕ್ಕಬೇಕು. ಉಟಣೆಯನ್ನು ಹಚ್ಚಿದ ನಂತರ ಕೊನೆಗೆ ತಲೆಯ ಮಧ್ಯಭಾಗದಲ್ಲಿ ಎಣ್ಣೆಯನ್ನು ಹಾಕಿ ಬಲಗೈಯ ಬೆರಳುಗಳಿಂದ ದಕ್ಷಿಣಾವರ್ತ ಅಂದರೆ ಗಡಿಯಾರದ ಮುಳ್ಳಿನ ದಿಕ್ಕಿನಲ್ಲಿ ತಿರುಗಿಸುತ್ತಾ ಹಚ್ಚಬೇಕು.

ದೀಪಾವಳಿಯ ಕಾಲಾವಧಿಯು ಉಟಣೆಯ ಉಪಯೋಗಕ್ಕೆ ಹೆಚ್ಚು ಪೂರಕವಾಗಿದೆ. ಉಟಣೆಯನ್ನು ಉಪಯೋಗಿಸುವ ಮುಂಚೆ ಅದರಲ್ಲಿ ಸುಗಂಧಿತ ಎಣ್ಣೆಯನ್ನು ಸೇರಿಸಲಾಗುತ್ತದೆ. ದೀಪಾವಳಿಯ ಕಾಲಾವಧಿಯಲ್ಲಿ ಬ್ರಹ್ಮಾಂಡದಿಂದ ಆಪ, ತೇಜ ಮತ್ತು ವಾಯುಯುಕ್ತ ಚೈತನ್ಯ ಪ್ರವಾಹವು ಪೃಥ್ವಿಯ ಮೇಲೆ ಆಗಮಿಸುವ ಪ್ರಮಾಣವು ಹೆಚ್ಚಿರುತ್ತದೆ. ಆದುದರಿಂದ ವಾತಾವರಣದಲ್ಲಿ ದೇವತೆಗಳ ತತ್ತ್ವದ ಪ್ರಮಾಣವೂ ಹೆಚ್ಚಿರುತ್ತದೆ. ಪಕ್ಕೆಗಳತ್ತ ಮುಂಬದಿಗೆ ಹೆಬ್ಬೆರಳು ಮತ್ತು ಹಿಂಬದಿ ಈ ಕಾಲಾವಧಿಯಲ್ಲಿ ಶರೀರಕ್ಕೆ ಉಟಣೆಯನ್ನು ಹಚ್ಚಿಕೊಳ್ಳುವುದರಿಂದ ಅದರಲ್ಲಿರುವ ಘಟಕಗಳಿಂದ ಶರೀರಕ್ಕೆ ಚೈತನ್ಯವನ್ನು ಗ್ರಹಿಸುವ ಕ್ಷಮತೆಯು ಹೆಚ್ಚಾಗುತ್ತದೆ. ಆದುದರಿಂದ ದೇವತೆಗಳ ತತ್ತ್ವದ ಚೈತನ್ಯಪ್ರವಾಹವು ವ್ಯಕ್ತಿಯ ಶರೀರದಲ್ಲಿ ಹರಡುತ್ತದೆ. ಇದರಿಂದ ವ್ಯಕ್ತಿಗೆ ಹೆಚ್ಚು ಪ್ರಮಾಣದಲ್ಲಿ ಚೈತನ್ಯವು ಲಭಿಸುತ್ತದೆ.

ಬೆಳಕಿನ ಹಬ್ಬ ದೀಪಾವಳಿ



ಶ್ರೀಶ ಚರಣಾರಾಧಕ:
ಕೆ.ವಿ.ಲಕ್ಷ್ಮೀನಾರಾಯಣಾಚಾರ್ಯ, ಆನೇಕಲ್.

ಸರ್ವರಿಗೂ ಮುಂಚಿತವಾಗಿ ದೀಪಾವಳಿ ಶುಭಾಶಯಗಳು.
ನರಕಾಂತಕ ಶ್ರೀಕೃಷ್ಣದೇವರು ಎಲ್ಲರನ್ನೂ ಸಲಹಲಿ. ಅಜ್ಞಾನವೆಂಬ ಕತ್ತಲೆ ಕಳೆದು ಸುಜ್ಞಾನವೆಂಬ ಬೆಳಕು ನೀಡಲಿ. ನಮ್ಮ ನಿಮ್ಮ ಬಾಳು ಬೆಳಕಾಗಲಿ, ಮನೆಯಲ್ಲಿ ಸಂತಸ, ನೆಮ್ಮದಿ ನೆಲೆಸಲಿ. ಈ ವರ್ಷವೂ ದೀಪಾವಳಿ ಹಬ್ಬದ ಆಚರಣೆ ಬಗ್ಗೆ ಸಾಕಷ್ಟು ಜನರಲ್ಲಿ ಗೊಂದಲವಿದೆ. ದೀಪಾವಳಿ ಆಚರಣೆ ನವೆಂಬರ್ 08 ರಂದು ಆಚರಿಸಬೇಕೇ ಅಥವಾ 09 ರಂದು ಆಚರಿಸಬೇಕೆ ಎಂಬ ತುಮುಲ ಜನರನ್ನು ಕಾಡುತ್ತಿದೆ. ಸಂಶಯವೇ ಬೇಡ ನವೆಂಬರ್ 08ರಂದು ಭಾನುವಾರವೇ ದೀಪಾವಳಿ ಆಚರಣೆ ಮಾಡಿ. ಕೆಲವರು ನಾವು ಬಿಸಿ ಕಜ್ಜಾಯ ಮಾಡುತ್ತೇವೆ ಹಾಗಾಗಿ ಸೋಮವಾರ ಬೆಳಗ್ಗೆ ಅಮಾವಾಸ್ಯೆಯಿದೆ ಅಂದು ಹಬ್ಬ ಆಚರಿಸಬಹುದಲ್ಲವೇ ಎಂದು ಕೇಳಿದ್ದಾರೆ. ಈ ದಿನ ಬೆಳಗ್ಗೆ ಅಮಾವಾಸ್ಯೆ ಇದೆ, ಆದರೆ ರಾತ್ರಿ ವ್ಯಾಪಿನಿಯಿಲ್ಲ. ಹಬ್ಬದ ಆಚರಣೆ ಸೇರಿದಂತೆ ಉಳಿದ ಶುಭ ಕಾರ್ಯಗಳಲ್ಲಿ ಅಪರಾಹ್ನ ವ್ಯಾಪಿನಿ ಅಮಾವಾಸ್ಯೆ, ಪೂರ್ವಾಹ್ನ ವ್ಯಾಪಿನಿ ಹುಣ್ಣಿಮೆಯನ್ನು ಪರಿಗಣಿಸಬೇಕು. ಈ ವರ್ಷ ನವೆಂಬರ್ 08 ರಂದು ಭಾನುವಾರ ಬೆಳಗ್ಗೆ 10-16 ಕ್ಕೆ ಚತುರ್ದಶಿ ಮುಗಿದು, ನಂತರ ಅಮಾವಾಸ್ಯೆ ಬರುತ್ತದೆ. ಸೋಮವಾರ ಬೆಳಗ್ಗೆ 10-51 ರವರೆಗೆ ಮಾತ್ರ ಅಮಾವಾಸ್ಯೆ ಇರುತ್ತದೆ. ಆದರೆ ಇದು ರಾತ್ರಿ ವ್ಯಾಪಿನಿಯಿರಲಿ, ಮಧ್ಯಾಹ್ನ ವ್ಯಾಪಿನಿಯೇ ಇಲ್ಲ. ಹಾಗಾಗಿ ಭಾನುವಾರ ರಾತ್ರಿ ಪೂರಾ ಅಮಾವಾಸ್ಯೆ ಇರುತ್ತದೆ. ಆದುದರಿಂದ ಈ ದಿನವೇ ನರಕಚತುರ್ದಶಿಯ ಜತೆ ದೀಪಾವಳಿ ಹಬ್ಬದ ಆಚರಣೆ ಮಾಡಬೇಕು. ಧನಲಕ್ಷ್ಮಿ ಪೂಜೆ ಹಾಗೂ ಕೇದಾರೇಶ್ವರ ವ್ರತವನ್ನು ಇದೇ ದಿನ ನಡೆಸಬೇಕು. ಯಾವುದೇ ಗೊಂದಲವಿಲ್ಲದೇ ಭಾನುವಾರ ಸಡಗರದಿಂದ ದೀಪಾವಳಿ ಆಚರಿಸಿ. ಬೆಳಕಿನ ಹಬ್ಬವಾದ ದೀಪಾವಳಿ ಸಡಗರ ಸಂಭ್ರಮದ ಹಬ್ಬ. ಈ ಹಬ್ಬವನ್ನು ಸಾಧ್ಯವಾದಷ್ಟು ಸಾಂಪ್ರದಾಯಿಕವಾಗಿ ಆಚರಿಸುವ ವಿಧಾನವನ್ನು ತಿಳಿದುಕೊಳ್ಳೋಣ. ಶನಿವಾರ(ನ.07) ಜಲಪೂರಣ ತ್ರಯೋದಶಿ (ನೀರು ತುಂಬುವ ಹಬ್ಬ). ಈ ದಿನ ಸ್ನಾನಕ್ಕೆಂದು ನೀರು ಕಾಯಿಸುವ ಹಂಡೆಯನ್ನು ತೊಳೆದು ಸುಣ್ಣ ಹಾಗೂ ಕೆಮ್ಮಣ್ಣಿನಿಂದ ಅಲಂಕರಿಸಿ. ಸಂಜೆ ಒಂದು ಕಲಶದಲ್ಲಿ ನೀರು ತುಂಬಿ ಅದರಲ್ಲಿ ಗಂಗಾಜನಕನಾದ ಶ್ರೀಹರಿಯನ್ನು ಅನುಸಂಧಾನ ಮಾಡಿ. ಗಂಗೇ ಚ ಯಮುನೇ ಕೃಷ್ಣೇ, ಗೋದಾವರಿ ಸರಸ್ವತಿ । ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು ।। ಎಂಬ ಮಂತ್ರದಿಂದ ಪೂಜಿಸಿ. ನಂತರ ಗಂಗಾದೇವಿ ಯನ್ನು ಪ್ರಾರ್ಥಿಸಿ, ಈ ಕಲಶದ ನೀರನ್ನು ಬಿಸಿನೀರು ಕಾಯಿಸುವ ಹಂಡೆಗೆ ಸುರಿದು, ನಂತರ ನೀರು ತುಂಬಿ. ಮನೆಯಲ್ಲಿ ಹಂಡೆ ಮತ್ತಿತರ ಸಾಂಪ್ರದಾಯಿಕ ನೀರು ಕಾಯಿಸುವ ವ್ಯವಸ್ಥೆ ಇಲ್ಲವಾದಲ್ಲಿ ಗಂಗಾಪೂಜೆ ನಡೆಸಿ, ಆ ನೀರನ್ನು ಮರುದಿನ ಸ್ನಾನಕ್ಕೆ ಬಳಸಬಹುದು. ಈ ದಿನ ಸೂರ್ಯಾಸ್ತದ ನಂತರ ಯಜ್ಞೀಯ ಕಾಷ್ಠ ಅಥವಾ ಬಿದಿರುಕೋಲ ನ್ನು ಮನೆಯ ಮುಂದೆ ನೆಟ್ಟು ಇದರ ತುದಿಯಲ್ಲಿ ಅಷ್ಟದಳಾಕೃತಿಯ ಆಕಾಶದೀಪ ವನ್ನು ಹಚ್ಚಿ, ಈ ದೀಪವನ್ನು ತಿಂಗಳು ಪೂರ್ತಿ ಹಚ್ಚಬಹುದು.

ಭಾನುವಾರ (ನ.08) ನರಕ ಚತುರ್ದಶಿ ಹಾಗೂ ದೀಪಾವಳಿ. ಆಚರಣೆಗೆ ಮೊದಲು ನರಕಚತುರ್ದಶಿಯ ಬಗ್ಗೆ ತಿಳಿಯೋಣ. ಮಹಾವಿಷ್ಣು ಶ್ರೀಕೃಷ್ಣಾವತಾರ ತಾಳಿದ ಸಮಯದಲ್ಲಿ ಜರಾಸಂಧ ಮತ್ತು ನರಕಾಸುರ ಎಂಬ ಇಬ್ಬರು ಬಲಿಷ್ಠ ರಕ್ಕಸ ರಾಜರಿದ್ದರು. ಇವರು ಅತ್ಯಧಿಕ ಸೈನ್ಯವನ್ನು ಕೂಡಿಹಾಕಿಕೊಂಡು ದಾಂಧಲೆ ನಡೆಸಿ ಪುಂಡಾಟ ನಡೆಸುತ್ತಿದ್ದರು. ಜರಾಸಂಧ ಎಲ್ಲಾ ರಾಜರನ್ನು ಸೋಲಿಸಿ ಅವರ ಗಂಡು ಮಕ್ಕಳನ್ನು ಸೆರೆ ಹಿಡಿಯುತ್ತಿದ್ದ. ಈತ ಹೆಣ್ಣು ಮಕ್ಕಳ ತಂಟೆಗೆ ಹೋಗುತ್ತಿರಲಿಲ್ಲ. ಆದರೆ ಈತನ ಸಂಗಡಿಗನಾದ ನರಕಾಸುರ ಈಗಿನ ಅಸ್ಸಾಂ ಪ್ರಾಂತ್ಯಕ್ಕೆ ಸೇರಿದ ಪ್ರಾಗ್ ಜ್ಯೋತಿಶ್ ಪುರದ ರಾಜನಾಗಿದ್ದ. ಈತ ಮಾತ್ರ ಎಲ್ಲಾ ರಾಜರನ್ನು ಸೋಲಿಸಿ ಅವರ ಹೆಣ್ಣು ಮಕ್ಕಳನ್ನೆಲ್ಲಾ ಹಿಡಿದು ತಂದು ತನ್ನ ಸೆರೆಮನೆಯಲ್ಲಿ ಕೂಡಿಹಾಕುತ್ತಿದ್ದ. ಹೀಗೆ ಆತ ಕೂಡಿ ಹಾಕಿದ್ದ ರಾಜಕುಮಾರಿಯರ ಸಂಖ್ಯೆ ಹದಿನಾರು ಸಾವಿರ ದಾಟಿತ್ತು. ಈತ ಮಾನವರಿಗಷ್ಟೇ ಉಪಟಳ ನೀಡದೆ, ದೇವತೆಗಳಿಗೂ ಕಾಟ ಕೊಡಲಾರಂಭಿಸಿದ. ದುರಹಂಕಾರಿಯಾದ ನರಕಾಸುರ ಒಮ್ಮೆ, ವೇದಮಾತೆಯಾದ ಅದಿತಿದೇವಿಯ ಆಭರಣಗಳನ್ನೂ ಲೂಟಿ ಮಾಡಿಕೊಂಡು ಬಂದಿದ್ದ. ಇದು ದೇವತೆಗಳನ್ನು ಕಂಗೆಡಿಸಿತ್ತು. ದೇವತೆಗಳೆಲ್ಲ ಸೇರಿ ಇಂದ್ರನ ಮೂಲಕ ಸತ್ಯಭಾಮಾ ದೇವಿಯ ಜತೆಯಲ್ಲಿದ್ದ ಶ್ರೀಕೃಷ್ಣನಲ್ಲಿ ಪ್ರಾರ್ಥನೆ ಸಲ್ಲಿಸಿದರು.ಸುದ್ದಿ ಕೇಳಿ, ಅದಿತಿ ದೇವಿಗಾದ ಅಪಮಾನವನ್ನು ಸಹಿಸದ ಶ್ರೀಕೃಷ್ಣದೇವರ ಪತ್ನಿ ಸತ್ಯಭಾಮೆಯು ನರಕಾಸುರನನ್ನು ಸಂಹರಿಸುವಂತೆ ಪ್ರಾರ್ಥಿಸಿದಳು. ಕೂಡಲೇ ಶ್ರೀಕೃಷ್ಣ ದೇವರು ಸತ್ಯಭಾಮೆಯೊಡನೆ ಪ್ರಾಗ್‌ಜ್ಯೋತಿಶ್ ಪುರದ ಮೇಲೆ ದಾಳಿ ನಡೆಸಿ ಯುದ್ಧ ಸಾರಿದ. ಯುದ್ಧದಲ್ಲಿ ಸುದರ್ಶನ ಚಕ್ರದಿಂದ ನರಕಾಸುರನನ್ನು ತೀವ್ರವಾಗಿ ಗಾಯಗೊಳಿಸಿದ. ಈ ವೇಳೆ ತಾನು ಸಾಯುವ ಸಮಯ ಸನ್ನಿಹಿತವಾಯಿತೆಂದು ನರಕಾಸುರ ಅರಿತ. ಇದರ ಮಧ್ಯೆಯೂ ತಾನು ಶ್ರೀಮನ್ನಾರಾಯಣ ಅವತಾರಿಯಾದ ಶ್ರೀಕೃಷ್ಣನಿಂದ ಮೋಕ್ಷ ಪಡೆಯುತ್ತಿರುವುದನ್ನು ತಿಳಿದು ಖುಷಿಗೊಂಡ. ಆಗ ಶ್ರೀಹರಿಯಲ್ಲಿ ಒಂದು ಬೇಡಿಕೆಯಿಟ್ಟ. ಸ್ವಾಮಿ ನನ್ನ ಅವಸಾನ(ಸಾವು)ವನ್ನು ಲೋಕದ ಜನರು ಸಂತಸದಿಂದ ಆಚರಿಸಲಿ, ಬಾಣ ಬಿರುಸು ಗಳನ್ನು ಸುಡುವುದರ ಜತೆ ಸಾಲು ದೀಪಗಳನ್ನು ಹಚ್ಚಿ ಸಂಭ್ರಮಿಸಲಿ ಎಂಬ ವರಬೇಡಿದ. ಶ್ರೀಕೃಷ್ಣದೇವರು ಅಸ್ತು ಎಂದದ್ದಲ್ಲದೇ, ಸತ್ಯಭಾಮೆಯ ಮೂಲಕ ಬಾಣ ಬಿಟ್ಟು ಸಂಹರಿಸಿದ. ನಂತರ ರಾಜ್ಯದ ಅಧಿಕಾರವನ್ನು ನರಕಾಸುರನ ಮಗ ಭಗದತ್ತನಿಗೆ ವಹಿಸಿಕೊಟ್ಟ. ನರಕಾಸುರ ಸೆರೆಮನೆಯಲ್ಲಿ ಬಂಧಿಸಿದ್ದ ಸ್ತ್ರೀಯರನ್ನೆಲ್ಲಾ ಬಿಡುಗಡೆ ಮಾಡಿಸಿದ. ಬಿಡುಗಡೆಯಾದ ನಾರಿಯರು ಸಂತಸಗೊಂಡು ಶ್ರೀಕೃಷ್ಣನಿಗೆ ಆರತಿ ಎತ್ತಿ ಕೃತಜ್ಞತೆ ಸಲ್ಲಿಸಿದರು. ಇದು ಚಂದ್ರೋದಯ ಸಮಯವಾದ್ದರಿಂದ, ಈಗಲೂ ಮುಂಜಾನೆ ನರಕ ಚತುರ್ದಶಿಯಂದು ನಾರಿಯರು ದೇವರಿಗೆ ನೀರಾಜನ ಮಾಡುವ ಪದ್ಧತಿ ನಡೆದು ಬಂದಿದೆ. ಅಂದಿನಿಂದ ನರಕಚತುರ್ದಶಿಯಂದು ಬಾಣ, ಬಿರುಸು ಹಾರಿಸುವುದು, ಪಟಾಕಿ ಸಿಡಿಸುವುದು ಜತೆಗೆ ಸಾಲು ಸಾಲು ದೀಪಗಳನ್ನು ಹಚ್ಚಿ ಸಡಗರ ಸಂಭ್ರಮದಿಂದ ಹಬ್ಬ ಆಚರಿಸಲಾಗುತ್ತಿದೆ. ಈ ನರಕಚತುರ್ದಶಿಯ ದಿನ(ಭಾನುವಾರ) ಮುಂಜಾನೆ ಚಂದ್ರೋದಯ ಕಾಲಕ್ಕೆ (ಬೆಳಗ್ಗೆ 04-27 ರಿಂದ 05 -07 ಕ್ಕೆ ಚಂದ್ರೋದಯ) ನರಕಚತುರ್ದಶಿ ಆಚರಿಸಬೇಕು. ಹಿಂದಿನ ದಿನ ಪೂಜಿಸಿ ಕಾಯಿಸಿಟ್ಟ ಬಿಸಿ ನೀರನ್ನು ಒಂದು ತಂಬಿಗೆಯಲ್ಲಿ ಹಾಗೂ ತಣ್ಣೀರನ್ನು ಮತ್ತೊಂದು ತಂಬಿಗೆಯಲ್ಲಿ ತುಂಬಿಸಬೇಕು. ಇದರ ಜತೆ ಶ್ರೀಗಂಧದೆಣ್ಣೆ ಯಂತಹ ಸುಗಂಧ ತೈಲ, ಇಲ್ಲವಾದಲ್ಲಿ ಶುದ್ಧ ಎಳ್ಳೆಣ್ಣೆ ಅಥವಾ ಕೊಬ್ಬರಿ ಎಣ್ಣೆಯನ್ನು ಒಂದು ಬಟ್ಟಲಿನಲ್ಲಿ ತುಂಬಿ ದೇವರ ಮುಂದೆ ಚೌಕಾಕಾರ ಮಂಡಲ ಮಾಡಿ ಇಡಬೇಕು. ಇದರ ಜತೆ ಎಳೆಗರಿಕೆ ಯನ್ನು ಒಟ್ಟು ಮಾಡಿದ ಗುಚ್ಛವನ್ನು ಇಟ್ಟು ಎಣ್ಣೆಯಲ್ಲಿ ಶ್ರೀಲಕ್ಷ್ಮೀದೇವಿಯನ್ನು, ನೀರಿನಲ್ಲಿ ಗಂಗೆ ಯ ಜತೆ ಗಂಗಾಜನಕ ಶ್ರೀಕೃಷ್ಣನನ್ನು ಸ್ಮರಿಸಿ, ಓಂ ಕನಿಕ್ರದಜ್ಜನುಷಂ ಪ್ರಬ್ರುವಾಣ ಇಯರ್ತಿನಾವ ಮರಿತೇವ ನಾವಂ ।ಸುಮಂಗಲಶ್ಚ ಶಕುನೇ ಭವಾಸಿ ಮಾ ತ್ವಾ ಕಾಚಿದಭಿಭಾವಿಶ್ವ್ಯಾ ವಿದತ್ ।। ಎಂದು ಪ್ರಾರ್ಥಿಸಬೇಕು.ಇದಾದ ಮೇಲೆ, ಸುಮಂಗಲಿ ಯರು ದೇವರು, ತುಳಸಿ ಹಾಗೂ ಗೋವು ಗಳಿದ್ದರೆ ಗೋವುಗಳಿಗೆ, ಗುರು ಗಳಿಗೆ ಆರತಿ ಮಾಡಿ ನಂತರ ಮನೆಯಲ್ಲಿನ ಪುರುಷರಿಗೆ ಆರತಿ ಬೆಳಗಬೇಕು.ಅಶ್ವತ್ಥಾಮಾ ಬಲಿರ್ವ್ಯಾಸೋ ಹನೂಮಾಂಶ್ಚ ವಿಭೀಷಣಃ । ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಂಜೀವಿನಃ ।।ಮಾರ್ಕಂಡೇಯ ಮಹಾಭಾಗ ಸಪ್ತಕಲ್ಪಾಂತಜೀವನ । ಆಯುರಾರೋಗ್ಯಮೈಶ್ವರ್ಯಂ ದೇಹಿ ಮೇ ಮುನಿಪುಂಗವ ।। ನಮಃ ಚಿರಜೀವಿಭ್ಯಃ । ಆಯುರಾರೋಗ್ಯೈಶ್ವರ್ಯಾಭಿವೃದ್ಧಿ ಕುರ್ವಂತು ।। ಎಂದು ಪ್ರಾರ್ಥಿಸಿ ದೇವರಿಗೆ ಸಮರ್ಪಿಸಿದ ಎಣ್ಣೆಯನ್ನು ಗರಿಕೆ ಕಂತೆಯಿಂದ ನೆಲಕ್ಕೆ 7 ಬಾರಿ ತಾಗಿಸಬೇಕು. ನಂತರ ಮೊದಲು ಭೂಮಿಗೆ ಆಮೇಲೆ ತಲೆಗೆ, ಹೀಗೆ ಮೂರು ಬಾರಿ ಎಣ್ಣೆಯನ್ನು ತಲೆಗೆ ಹಚ್ಚಬೇಕು. ನಂತರ ಪ್ರತಿಯೊಬ್ಬರೂ ದೇಹದ ಎಲ್ಲಾ ಅಂಗ ಗಳಿಗೂ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡಬೇಕು. ಮನೆಯ ಹಿರಿಯರು, ಕಿರಿಯರಿಗೆ ಎಣ್ಣೆ ಶಾಸ್ತ್ರ ಮಾಡುವುದು ಶ್ರೇಯಸ್ಕರ. ಸ್ನಾನಾನಂತರ ಅಧಿಕಾರ ಉಳ್ಳವರು ಪೂರ್ವಾಕ್ಕೆ ಮುಖ ಮಾಡಿ. ಯಮಂ ತರ್ಪಯಾಮಿ । ಧರ್ಮರಾಜಂ ತರ್ಪಯಾಮಿ । ಮೃತ್ಯುಂ ತರ್ಪಯಾಮಿ । ಅಂತಕಂ ತರ್ಪಯಾಮಿ । ವೈವಸ್ವತಂ ತರ್ಪಯಾಮಿ । ಕಾಲಂ ತರ್ಪಯಾಮಿ । ಸರ್ವಭೂತಕ್ಷಯಂ ತರ್ಪಯಾಮಿ । ಔದುಂಬರಂ ತರ್ಪಯಾಮಿ । ದಧ್ನಂ ತರ್ಪಯಾಮಿ । ನೀಲಂ ತರ್ಪಯಾಮಿ । ಪರಮೇಷ್ಠಿನಂ ತರ್ಪಯಾಮಿ । ವೃಕೋದರಂ ತರ್ಪಯಾಮಿ । ಚಿತ್ರಂ ತರ್ಪಯಾಮಿ । ಚಿತ್ರಗುಪ್ತಂ ತರ್ಪಯಾಮಿ ।। ಎಂದು ದೇವತೀರ್ಥದಿಂದ ಯಮ ತರ್ಪಣ ನೀಡಬೇಕು. ಯಮೋ ನಿಹಂತಾ ಪಿತೃಧರ್ಮರಾಜೋ ವೈವಸ್ವತೋ ದಂಡಧರಶ್ಚ ಕಾಲಃ । ಭೂತಾಧಿಪೋ ದತ್ತಕೃತಾನುಸಾರೀ ಕೃತಾಂತಕಶ್ಚೇತಿ ಸಕೃಜ್ಜಪಂತಿ ।। ಎಂದು ಪ್ರಾರ್ಥಿಸ ಬೇಕು.

ಉದಯ ವಾಹಿನಿ ವರದಿಗೆ ತಕ್ಷಣ ಸ್ಪಂದಿಸಿದ ಜಿಲ್ಲಾಡಳಿತ

ಗ್ರಾಮಕ್ಕೆ ಹಿರಿಯ ಅಧಿಕಾರಿಗಳ ಭೇಟಿ, ಶಾಂತಿ ಸಭೆ ನಡೆಸಿ ಕಟ್ಟುನಿಟ್ಟಿನ ಸೂಚನೆ

• **ಉದಯವಾಹಿನಿ ಯಾದಗಿರಿ:**

ತಾಲ್ಲೂಕಿನ ಸೂಗೂರು ಗ್ರಾಮದಲ್ಲಿ ದಲಿತ ಸಮುದಾಯದವರಿಗೆ ಸಾರ್ವಜನಿಕ ಹೋಟೆಲ್‌ಗಳು ಹಾಗೂ ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಿಸಲಾಗುತ್ತಿರುವ ಗಂಭೀರ ವಿಷಯದ ಕುರಿತು 'ಉದಯ ವಾಹಿನಿ'ಯಲ್ಲಿ ಪ್ರಕಟವಾದ ವಿಶೇಷ ಜಾಗೃತಿ ವರದಿಗೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ತಕ್ಷಣವೇ ಸ್ಪಂದಿಸಿ ಸೂಕ್ತ ಕ್ರಮ ಕೈಗೊಂಡಿವೆ.

ಉದಯವಾಹಿನಿ ಪತ್ರಿಕಾ ವರದಿಯ ಬೆನ್ನಲ್ಲೇ ಘಟನೆಯ ತೀವ್ರತೆಯನ್ನು ಪರಿಗಣಿಸಿದ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಸುರಪುರ ಡಿವೈಎಸ್ಪಿ ಹಾಗೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳನ್ನೊಳಗೊಂಡ ಉನ್ನತಾಧಿಕಾರಿಗಳ ತಂಡವು ಸೂಗೂರು ಗ್ರಾಮಕ್ಕೆ ನೇರವಾಗಿ ಭೇಟಿ ನೀಡಿ ಸ್ಥಳೀಯ ಪರಿಸ್ಥಿತಿಯನ್ನು ಪರಿಶೀಲಿಸಿತು.

ಸಾರ್ವಜನಿಕ ಸ್ಥಳಗಳಲ್ಲಿ ತಾರತಮ್ಯ ಎಸಗಿದರೆ ಕಠಿಣ ಕಾನೂನು ಕ್ರಮ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಶಾಂತಿ ಸಭೆಯಲ್ಲಿ ಸವರ್ಣೀಯರು ಹಾಗೂ ಗ್ರಾಮಸ್ಥರನ್ನು ಉದ್ದೇಶಿಸಿ ಮಾತನಾಡಿದ


ಉದಯವಾಹಿನಿ ಚಿತ್ರ



'ಉದಯ ವಾಹಿನಿ' ವರದಿಯಿಂದ ಜಾಗೃತಗೊಂಡ ಜಿಲ್ಲಾಡಳಿತದ ಈ ಶೀಘ್ರ ಕಾರ್ಯಾಚರಣೆಗೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದ್ದು, ಸೂಗೂರು ಗ್ರಾಮದಲ್ಲಿ ದಲಿತರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಸಮಾನ ಹಕ್ಕು ಮತ್ತು ಗೌರವ ಸಿಗುವ ಹೊಸ ಆಶಾವಾದ ಮೂಡಿದೆ.

ಜಿಲ್ಲಾಧಿಕಾರಿಗಳು, ''ಸಾರ್ವಜನಿಕ ಹೋಟೆಲ್‌ಗಳು ಹಾಗೂ ದೇವಸ್ಥಾನಗಳಲ್ಲಿ ದಲಿತರಿಗೆ ಪ್ರವೇಶ ನಿರಾಕರಿಸುವುದು ಕಾನೂನು ಬಾಹಿರ. ಇನ್ಮುಂದೆ ಇಂತಹ ತಾರತಮ್ಯದ ಘಟನೆಗಳು ಮರುಕಳಿಸಿದರೆ ಸಂಬಂಧಪಟ್ಟವರ ವಿರುದ್ಧ ಕಾನೂನಿನ ಅಡಿಯಲ್ಲಿ ಅತ್ಯಂತ ಕಠಿಣ ಕ್ರಮ ಜರುಗಿಸಲಾಗುವುದು. ಗ್ರಾಮದಲ್ಲಿ ಪ್ರತಿಯೊಬ್ಬರೂ ಅನ್ಯೋನ್ಯವಾಗಿ, ಸೌಹಾರ್ದತೆ ಮತ್ತು ಸಹಬಾಳ್ವೆಯಿಂದ ಜೀವಿಸಬೇಕು'' ಎಂದು ಖಡಕ್ ಎಚ್ಚರಿಕೆ ನೀಡಿದರು.

ಗ್ರಾಮದ ಪ್ರಮುಖರು ಭಾಗಿ

ಶಾಂತಿ ಸಭೆಯಲ್ಲಿ ಗ್ರಾಮದ ಮುಖಂಡರು, ದಲಿತ ಸಂಘಟನೆಗಳ ಪ್ರಮುಖ ನಾಯಕರಾದ ನಿಂಗಣ್ಣ ಗೋನಾಳ, ನಂದಕುಮಾರ್ ಬಾಂಬೆಕರ್, ನಾಗರಾಜ್ ಓಕುಳ್ಳಿ, ಭೀಮಾಶಂಕರ ಬಿಲ್ಲವ್, ದಾನಪ್ಪ ಕಡಿಮನಿ, ಹನಮಂತ ಬಿಲ್ಲವ್, ನಾಗು ಗೋಗಿಕೇರ, ಭೀಮಣ್ಣ ಅಡ್ಡೋಡಗಿ, ರಾಮಪ್ಪ ಕೊರೆ, ರಮೇಶ್ ಪೂಜಾರಿ, ಬಸವರಾಜ್ ಕೊಡೇಕಲ್, ಮಲ್ಲಣ್ಣ ವಜ್ಜಲ್, ಶರಣಪ್ಪ ಲಕ್ಷಂಪುರ, ಬಸವರಾಜ್ ಹಾದಿಮನಿ ಸೇರಿದಂತೆ ಹಲವಾರು ಹೋರಾಟಗಾರರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಹಕ್ಕು

ಜಿಲ್ಲಾ ಎಸ್‌ಪಿ ನಂತರ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ''ಭಾರತದ ಸಂವಿಧಾನವು ದೇಶದ ಪ್ರತಿಯೊಬ್ಬ ಪ್ರಜೆಗೂ ಸಮಾನತೆ ಮತ್ತು ಗೌರವದಿಂದ ಬದುಕುವ ಮೂಲಭೂತ ಹಕ್ಕನ್ನು ನೀಡಿದೆ. ಜಾತಿ ಆಧಾರಿತ ನಿಷೇಧ ಅಥವಾ ಪ್ರತ್ಯೇಕತೆಗೆ ಸಂವಿಧಾನದಲ್ಲಿ ಅವಕಾಶವಿಲ್ಲ. ಪ್ರತಿಯೊಬ್ಬರೂ ಸಂವಿಧಾನದ ನಿಯಮಗಳಿಗೆ ಬದ್ಧರಾಗಿ ಸಮಾನತೆಯಿಂದ ಬದುಕಬೇಕು'' ಎಂದು ತಿಳಿಸಿದರು.

ಸಾಹಿತ್ಯ ಸಂಸ್ಕೃತಿ ಪರಂಪರೆಗೆ ಗದಗಿನ ಕೊಡುಗೆ ಅಪಾರ

• **ಉದಯವಾಹಿನಿ ಗದಗ,**

ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಗದಗಿನ ಮಹನೀಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕನ್ನಡ ನಾಡಿನ ಸಾಹಿತ್ಯ, ಸಂಸ್ಕೃತಿ ಹಾಗೂ ಪರಂಪರೆಯ ಶ್ರೀಮಂತಿಕೆಗೆ ಗದಗಿನ ಕೊಡುಗೆ ಅಪಾರವಾಗಿದೆ. ಕನ್ನಡ ಭಾಷೆ ಮತ್ತು ನಾಡಿನ ಅಸ್ಮಿತೆಯನ್ನು ಉಳಿಸಿ ಬೆಳೆಸುವಲ್ಲಿ ಗದಗಿನ ಸಾಹಿತಿಗಳು, ಕಲಾವಿದರು ಹಾಗೂ ಹೋರಾಟಗಾರರ ಸೇವೆ ಸ್ಮರಣೀಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರೆಡ್ಡಿ ಹೇಳಿದರು.

ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದಿಂದ ಏರ್ಪಡಿಸಿದ್ದ 71 ನೇಯ ಕನ್ನಡ ರಾಜ್ಯೋತ್ಸವದ ಸಾರ್ವಜನಿಕ ಧ್ವಜಾರೋಹಣ ನೆರವೇರಿಸಿ ಸಚಿವರು ಮಾತನಾಡಿದರು.

ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು'' ಎಂದು ಗದುಗಿನ ಹುಯಿಲಗೋಳ ನಾರಾಯಣರಾಯರು ಕನಸು ಕಂಡಂತೆ ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ, ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ'' ಎಂದು ಕನ್ನಡಾಂಬೆಯನ್ನು ಆಹ್ವಾನಿಸಿ ನಮ್ಮೆಲ್ಲರನ್ನು ಏಕೀಕರಣಕ್ಕಾಗಿ ಒಗ್ಗೂಡುವಂತೆ ಅನೇಕ ಮಹನೀಯರು ಹೋರಾಡಿದ ಫಲಶ್ರುತಿಯಾಗಿ ಹರಿದು ಹಂಚಿಹೋಗಿದ್ದ ಈ ರಾಜ್ಯವು 1956 ರಲ್ಲಿ ಮೈಸೂರು ರಾಜ್ಯ ಉದಯವಾಯಿತು ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಕೊಡಗು, ಮದ್ರಾಸ್, ಹೈದರಾಬಾದ ಹಾಗೂ ಬಾಂಬೆ ಕರ್ನಾಟಕ ರಾಜ್ಯದ ಭಾಗಗಳನ್ನು ಮೈಸೂರು ರಾಜ್ಯಕ್ಕೆ ಸೇರ್ಪಡಿಸಲಾಯಿತು. ಈ ಪ್ರದೇಶಗಳಲ್ಲಿ ಬಹಳಷ್ಟು ಜನರು ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದರಿಂದ ಹಾಗೂ ಭಾಷಾವಾರು ಪ್ರಾಂತ್ಯ ನಿರ್ಮಾಣವಾಗಬೇಕೆಂದು ಕರ್ನಾಟಕ ಏಕೀಕರಣ ಚಳುವಳಿಯ ಉದ್ದೇಶವಾಗಿದ್ದರಿಂದ ಮೈಸೂರು ರಾಜ್ಯವನ್ನು 1973 ನವೆಂಬರ 01 ರಂದು ಕರ್ನಾಟಕ ರಾಜ್ಯವೆಂದು ಪುನರ್ ನಾಮಕರಣ ಮಾಡಲಾಯಿತು.

ಉಪವಿಭಾಗ ಮಟ್ಟದ ಸಹಕಾರ ನಿಬಂಧಕರ ಕಚೇರಿ ಮಂಜೂರು

• **ಉದಯವಾಹಿನಿ, ಅಥಣಿ :**

ಅಥಣಿ ಮತಕ್ಷೇತ್ರದ ಅಭಿವೃದ್ಧಿಯ ಮುಕುಟಕ್ಕೆ ಮತ್ತೊಂದು ಗರಿ ಸೇರ್ಪಡೆಯಾಗಿದೆ. ಸಹಕಾರ ಕ್ಷೇತ್ರದ ಆಡಳಿತ ವ್ಯವಸ್ಥೆಯನ್ನು ಜನಸಾಮಾನ್ಯರ ಮನೆಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಸಹಕಾರ ಸಚಿವ ಲಕ್ಷ್ಮಣ ಸವದಿ ಅವರು ನಡೆಸಿದ ನಿರಂತರ ಪ್ರಯತ್ನಕ್ಕೆ ಯಶಸ್ಸು ದೊರೆತಿದ್ದು, ಅಥಣಿಯಲ್ಲಿ ಉಪವಿಭಾಗ ಮಟ್ಟದ ಸಹಕಾರ ಸಂಘಗಳ ಸಹಕಾರ ನಿಬಂಧಕರ ಕಚೇರಿ ಮಂಜೂರಾಗಿದೆ.

ಅಥಣಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಸಹಕಾರ ಸಂಘಗಳ ಬಹುದಿನಗಳ ಬೇಡಿಕೆಗೆ ಇದೀಗ ಸ್ಪಂದನೆ ದೊರೆತಂತಾಗಿದೆ.

ಈ ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಸಹಕಾರ ಸಂಸ್ಥೆಗಳಿಗೆ ಆಡಳಿತಾತ್ಮಕವಾಗಿ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಈ ಕಚೇರಿ ಮಂಜೂರಾತಿ ಮಹತ್ವದ ನಿರ್ಧಾರವಾಗಿದೆ.

ಸಹಕಾರ ಕ್ಷೇತ್ರವು ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಜೀವನಾಡಿಯಾಗಿದ್ದು, ರೈತರ ಆರ್ಥಿಕ ಸಬಲೀಕರಣ, ಗ್ರಾಮೀಣ ಜನರ ಸ್ವಾವಲಂಬನೆ ಹಾಗೂ ಸ್ಥಳೀಯ ಆರ್ಥಿಕ ಚಟುವಟಿಕೆಗಳ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ.

ಇಂತಹ ಸಹಕಾರ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಅಗತ್ಯವಿರುವ ಆಡಳಿತಾತ್ಮಕ ಸೌಲಭ್ಯಗಳನ್ನು ಸ್ಥಳೀಯವಾಗಿಯೇ ಒದಗಿಸಬೇಕೆಂಬ ಆಶಯದೊಂದಿಗೆ ಸಚಿವ ಲಕ್ಷ್ಮಣ ಸವದಿ ಅವರು ಈ ವಿಷಯಕ್ಕೆ ವಿಶೇಷ ಆದ್ಯತೆ ನೀಡಿ ಸಂಬಂಧಿಸಿದ ಇಲಾಖೆಯ ಮಟ್ಟದಲ್ಲಿ ನಿರಂತರ ಪ್ರಯತ್ನ ನಡೆಸಿದ್ದಾರೆ.

ಅಥಣಿಯಲ್ಲಿ ಉಪವಿಭಾಗ ಮಟ್ಟದ ಸಹಕಾರ ಸಂಘಗಳ ಸಹಕಾರ ನಿಬಂಧಕರ ಕಚೇರಿ ಕಾರ್ಯಾರಂಭ ಮಾಡಿದ ನಂತರ ಅಥಣಿ ಉಪವಿಭಾಗದ ವ್ಯಾಪ್ತಿಯ ಸಹಕಾರ ಸಂಘಗಳ ಪದಾಧಿಕಾರಿಗಳು, ಆಡಳಿತ ಮಂಡಳಿಗಳು, ರೈತರು ಹಾಗೂ ಸಾರ್ವಜನಿಕರಿಗೆ ಇಲಾಖೆಯ ವಿವಿಧ ಸೇವೆಗಳನ್ನು ಸ್ಥಳೀಯವಾಗಿಯೇ ಪಡೆಯಲು ಅನುಕೂಲವಾಗಲಿದೆ.


ಉದಯವಾಹಿನಿ ಚಿತ್ರ

ಅವರ ಪ್ರಯತ್ನದ ಫಲವಾಗಿ ಇದೀಗ ಅಥಣಿಗೆ ಉಪವಿಭಾಗ ಮಟ್ಟದ ಸಹಕಾರ ನಿಬಂಧಕರ ಕಚೇರಿ ಮಂಜೂರಾಗಿರುವುದು ಸಹಕಾರ ವಲಯದಲ್ಲಿ ಸಂತಸಕ್ಕೆ ಕಾರಣವಾಗಿದೆ.

1 ಕೋಟಿ ಅನುದಾನ ದುರ್ಬಳಕೆ ಆರೋಪ ನಿರಾಧಾರ

• **ಉದಯವಾಹಿನಿ ಬೀದರ್:**

ಇಂದಿರಾ ಗಾಂಧಿ ಮೆಮೋರಿಯಲ್ ಎಜುಕೇಶನ್ ಸೊಸೈಟಿಗೆ ಮಂಜೂರಾದ 1 ಕೋಟಿ ಸರ್ಕಾರಿ ಅನುದಾನದ ದುರ್ಬಳಕೆಗೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಮಾಡಿರುವ ಆರೋಪಗಳು ಆಧಾರರಹಿತವಾಗಿವೆ ಎಂದು ಕ್ರೈಸ್ತ ಯುವ ಮುಖಂಡ ದಿನೇಶ ತಂದೆ ದಯಾನಂದ ಸ್ಪಷ್ಟಪಡಿಸಿದರು.

ಬುಧವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಾಮಾಜಿಕ ಜಾಲತಾಣದಲ್ಲಿ ಐಸಾಕ್ ಕಂಪೆಸನೋರ್ ಅವರು ನನ್ನ ಹೆಸರನ್ನು ಅನಗತ್ಯವಾಗಿ ಪ್ರಸ್ತಾಪಿಸಿ, ಸೊಸೈಟಿಯ 2022–23ರ ಅವಧಿಯಲ್ಲಿ ನಾನು ಖಜಾಂಚಿಯಾಗಿದ್ದೆ ಎಂಬ ತಪ್ಪು ಮಾಹಿತಿ ಹರಡಿದ್ದಾರೆ. ಸರ್ಕಾರಿ ಅನುದಾನದ ಹಣಕಾಸು ವ್ಯವಹಾರಗಳಿಗೂ ನನ್ನನ್ನು ಸಂಬಂಧ ಕಲ್ಪಿಸಿ ಆರೋಪಿಸಿದ್ದಾರೆ. ಇದರಿಂದ ನನ್ನ ವೈಯಕ್ತಿಕ ಗೌರವ ಹಾಗೂ ಕುಟುಂಬದ ಮಾನಮರ್ಯಾದೆಗೆ ಧಕ್ಕೆಯಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಬೀದರ್‌ನ ಸಂಘ ಸಂಸ್ಥೆಗಳ ನೋಂದಣಾಧಿಕಾರಿ ಕಚೇರಿಯಲ್ಲಿ ಲಭ್ಯವಿರುವ ಅಧಿಕೃತ ದಾಖಲೆಗಳ ಪ್ರಕಾರ, 2022–23ರ ಅವಧಿಯ ಸೊಸೈಟಿಯ ಆಡಳಿತ ಮಂಡಳಿಯಲ್ಲಿ ನನ್ನ ಹೆಸರೇ ಇಲ್ಲ. ಆ ಅವಧಿಯಲ್ಲಿ ನಾನು ಖಜಾಂಚಿಯಾಗಿರಲಿಲ್ಲ. ಆಡಳಿತ ಮಂಡಳಿಯ ಪದಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿಲ್ಲ. ಯಾವುದೇ ಹಣಕಾಸು ವ್ಯವಹಾರ ಅಥವಾ ಸರ್ಕಾರಿ ಅನುದಾನದ ನಿರ್ವಹಣೆಯಲ್ಲಿ ಭಾಗಿಯಾಗಿಲ್ಲ' ಎಂದು ತಿಳಿಸಿದರು.

'ಅಧಿಕೃತ ದಾಖಲೆಗಳ ಪ್ರಕಾರ, ಆ ಅವಧಿಯಲ್ಲಿ ಪೀಟರ್ ಎಸ್.ಆರ್. ಅಧ್ಯಕ್ಷರಾಗಿ, ದೇವಿದಾಸ್ ಕಾರ್ಯದರ್ಶಿಯಾಗಿ ಹಾಗೂ ವೈಜಿನಾಥ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಆಡಳಿತ ಮಂಡಳಿಯ ಸದಸ್ಯರ ಪಟ್ಟಿಯಲ್ಲಿಯೂ ನನ್ನ ಹೆಸರಿಲ್ಲ. ಹೀಗಿರುವಾಗ ಅನುದಾನದ ದುರ್ಬಳಕೆಗೆ ನನ್ನನ್ನು ಹೊಣೆಗಾರನನ್ನಾಗಿ ಮಾಡುವುದು ಸರಿಯಲ್ಲ' ಎಂದರು.



ಉದಯವಾಹಿನಿ ಚಿತ್ರ

ಸಮುದಾಯ ಭವನದ ಕಟ್ಟಡ ನಿರ್ಮಾಣ ಈಗಾಗಲೇ ಪೂರ್ಣಗೊಂಡಿದ್ದು, ಸ್ಥಳದಲ್ಲಿ ಅಸ್ತಿತ್ವದಲ್ಲಿದೆ. ಇದಕ್ಕೆ ಸಂಬಂಧಿಸಿದ ಜಿಪಿಎಸ್ ಆಧಾರಿತ ಛಾಯಾಚಿತ್ರಗಳು ನಮ್ಮ ಬಳಿ ಇವೆ. ಆರೋಪ ಮಾಡುವವರು ಸ್ಥಳಕ್ಕೆ ಭೇಟಿ ನೀಡಿ ವಾಸ್ತವಾಂಶ ಪರಿಶೀಲಿಸಬಹುದು' ಎಂದು ಹೇಳಿದರು. -ಮುಖಂಡ ದಿನೇಶ

4.17 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

• **ಉದಯವಾಹಿನಿಯಾದಗಿರಿ:**

ಗ್ರಾಮೀಣ ಭಾಗದ ಪಾಲಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು. ಬಡತನದ ಕಾರಣಕ್ಕೆ ಮಕ್ಕಳ ಭವಿಷ್ಯಕ್ಕೆ ಅಡ್ಡಿಯಾಗಬಾರದು ಎಂದು ಶಾಸಕ ಶರಣಗೌಡ ಕಂದಕೂರ ಸಲಹೆ ನೀಡಿದರು. ತಾಲ್ಲೂಕಿನ ಮಲ್ಹಾರ ಹಾಗೂ ಜಿನಕೇರಾ ಗ್ರಾಮಗಳಲ್ಲಿ ಮಂಗಳವಾರ ಒಟ್ಟು 4.17 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಬಂಡವಾಳ ವೆಚ್ಚದಡಿ 80 ಲಕ್ಷ ರೂ. ವೆಚ್ಚದಲ್ಲಿ ಸೇತುವೆ ದುರಸ್ತಿ ಕಾಮಗಾರಿ, ಕೆಕೆಆರ್‌ಡಿಬಿ ಯೋಜನೆಯಡಿ ಮಲ್ಹಾರದಿಂದ ಸಾವೂರು ಗ್ರಾಮದವರೆಗೆ 1.95 ಕೋಟಿ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೆ ಅಡಿಗಲ್ಲು ನೆರವೇರಿಸಿದರು. ಇದೇ ವೇಳೆ ಜಿನಕೇರಾ ಗ್ರಾಮದಲ್ಲಿ ಕೆಕೆಆರ್‌ಡಿಬಿ ಮ್ಯಾಕ್ರೋ ಯೋಜನೆಯಡಿ 55 ಲಕ್ಷ ರೂ. ವೆಚ್ಚದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿರ್ಮಿಸಲಾದ ಆರು ನೂತನ ವರ್ಗ ಕೊಠಡಿಗಳನ್ನು ಉದ್ಘಾಟಿಸಿದರು. ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೂ ಚಾಲನೆ ನೀಡಿದರು. ರಾಜ್ಯಾದ್ಯಂತ ವಿದ್ಯುತ್ ಸಮಸ್ಯೆ ತೀವ್ರಗೊಂಡಿದೆ. ರೈತರಿಗೆ ಈ ಹಿಂದೆ ಏಳು ಗಂಟೆ ವಿದ್ಯುತ್ ನೀಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ ಇದೀಗ ಒಂದು ಗಂಟೆ ಕಡಿತಗೊಳಿಸಿ ಆರು ಗಂಟೆ ಮಾತ್ರ ವಿದ್ಯುತ್ ನೀಡಲಾಗುತ್ತಿದೆ. ಅದೂ ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ. ಈಗಾಗಲೇ ಬರಗಾಲದಿಂದ ಸಂಕಷ್ಟದಲ್ಲಿರುವ ರೈತರಿಗೆ ವಿದ್ಯುತ್ ಸಮಸ್ಯೆ, ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಗ್ರಾಮೀಣ ಭಾಗದಲ್ಲಿ ಸರ್ಕಾರದ ಯೋಜನೆಗಳ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ಪ್ರಾಮಾಣಿಕವಾಗಿ ತಲುಪುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು.


ಉದಯವಾಹಿನಿ ಚಿತ್ರ

ಸಾವೂರು ಗ್ರಾಮದಲ್ಲಿ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣವಾಗಿದ್ದರೂ ನೀರಿನ ಸಂಪರ್ಕ ಕಲ್ಪಿಸಿಲ್ಲ ಎಂಬ ಗ್ರಾಮಸ್ಥರ ದೂರಿಗೆ ಸ್ಪಂದಿಸಿದ ಅವರು, ಕೂಡಲೇ ನೀರಿನ ಸಂಪರ್ಕ ಕಲ್ಪಿಸುವಂತೆ ಸೂಚಿಸಿದರು.

ಸರ್ಕಾರಿ ಶಾಲೆಗಳತ್ತ ಪೋಷಕರ ಒಲವು

• **ಉದಯವಾಹಿನಿ, ಅಥಣಿ:**

ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲೆಗಳ ಬಗ್ಗೆ ಪೊಷಕರಲ್ಲಿದ್ದ ದೃಷ್ಟಿಕೋನ ಬದಲಾಗುತ್ತಿದ್ದು, ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದ್ದು, ಪೊಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಲು ಹೆಚ್ಚಿನ ಉತ್ಸಾಹ ಆಸಕ್ತಿ ತೋರುತ್ತಿದ್ದಾರೆ. ಇದರ ಪರಿಣಾಮವಾಗಿ ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡು ಬರುತ್ತಿರುವುದು ಶಿಕ್ಷಣ ಕ್ಷೇತ್ರದಲ್ಲಿ ಆಶಾದಾಯಕ ಬೆಳವಣಿಗೆಯಾಗಿದೆ ಎಂದು ದರೂರ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಎ ಎಸ್ ಸುಂಡಿ ಹೇಳಿದರು.

ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯ, ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವುದು, ಅನುಭವಿ ಹಾಗೂ ಅರ್ಹ ಶಿಕ್ಷಕರ ಬೋಧನೆ, ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ ಸೇರಿದಂತೆ ಸರ್ಕಾರದ ವಿವಿಧ ಶೈಕ್ಷಣಿಕ ಸೌಲಭ್ಯಗಳು ಪೊಷಕರನ್ನು ಆಕರ್ಷಿಸುತ್ತಿವೆ. ಇದರ ಜೊತೆಗೆ ಶಾಲೆಗಳಲ್ಲಿ ಸುಧಾರಿತ ಕಲಿಕಾ ವಾತಾವರಣ, ಉತ್ತಮ ಬೋಧನಾ ಪದ್ಧತಿ, ಅನುಷ್ಠಾನವೇ ಈ ಧನಾತ್ಮಕ ಬದಲಾವಣೆಗೆ ಪ್ರಮುಖ ಕಾರಣವಾಗಿದೆ.

ಮಹಿಳಾ ಶಿಕ್ಷಣದಿಂದ ಸಾಧನೆ ಸಾಧ್ಯ, ಹಕ್ಕುಗಳ ಅರಿವು ಅಗತ್ಯ

• **ಉದಯವಾಹಿನಿ ಕಲಬುರಗಿ:**

ನಗರದ ಸೇಂಟ್ ಮೇರಿ ಚರ್ಚ್‌ನ ಮದರ್ ತೆರೇಸಾ ಸಭಾಂಗಣದಲ್ಲಿ ಮಾರ್ಗದರ್ಶಿ ಸಂಸ್ಥೆಯ ವತಿಯಿಂದ ಜಿಲ್ಲಾಮಟ್ಟದ ಮಕ್ಕಳ ಹಕ್ಕುಗಳ ಸಂಸತ್–2026 ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಕಲಬುರಗಿ ಮಹಾನಗರ ಪಾಲಿಕೆ ಸದಸ್ಯೆ ಹಾಗೂ ಮಾಜಿ ಮಹಿಳಾ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಲತಾ ರವಿ ರಾಠೋಡ್ ಉದ್ಘಾಟಿಸಿ ಮಾತನಾಡಿ, ಮಹಿಳೆಯಾಗಿ ತಾವು ನಡೆದುಬಂದ ಹಾದಿ, ಶಿಕ್ಷಣ ಪಡೆಯಲು ಎದುರಿಸಿದ ಸವಾಲುಗಳು ಹಾಗೂ ಶಿಕ್ಷಣದಿಂದ ಜೀವನದಲ್ಲಿ ಸಾಧಿಸಬಹುದಾದ ಯಶಸ್ಸಿನ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು. ಹೆಣ್ಣುಮಕ್ಕಳು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಶಿಕ್ಷಣ ಪಡೆದ ಮಹಿಳೆ ತನ್ನ ಬದುಕನ್ನು ರೂಪಿಸಿಕೊಳ್ಳುವುದರ ಜೊತೆಗೆ ಸಮಾಜದಲ್ಲಿಯೂ ಮಹತ್ವದ ಬದಲಾವಣೆ ತರಲು ಸಾಧ್ಯ ಎಂದು ಹೇಳಿ ವಿದ್ಯಾರ್ಥಿನಿಯರಲ್ಲಿ ಆತ್ಮಸ್ಥೈರ್ಯ ತುಂಬಿದರು. ಕಾರ್ಯಕ್ರಮದ ಘನ ಉಪಸ್ಥಿತಿಯನ್ನು ಸೇಂಟ್ ಮೇರಿ ಚರ್ಚ್‌ನ ಪ್ರಾಂಶುಪಾಲರಾದ ಫಾದರ್ ಪ್ರವೀಣ್ ಜೋಸೆಫ್ ವಹಿಸಿದ್ದರು. ದೈವಾನುಗ್ರಹ ಮಾತೆ ಮಹಾದೇವಾಲಯದ ಮಹಾಗುರುಗಳು ಸಾನ್ನಿಧ್ಯ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಸೂರ್ಯಕಾಂತ್ ಜಮಖಂಡಿ ಮಾತನಾಡಿ, ಶಿಕ್ಷಣದ ಮಹತ್ವವನ್ನು ವಿವರಿಸಿದರು. ಯಾವುದೇ ಕಾರಣಕ್ಕೂ ಮಕ್ಕಳು ಶಾಲೆಯಿಂದ ಹೊರಗುಳಿಯಬಾರದು. ಶಿಕ್ಷಣವು ಮಕ್ಕಳ ಭವಿಷ್ಯ ರೂಪಿಸುವ ಅಮೂಲ್ಯ ಅಸ್ತ್ರವಾಗಿದ್ದು, ಪ್ರತಿಯೊಬ್ಬ ಮಗುವೂ ಶಿಕ್ಷಣದ ಹಕ್ಕನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ವಿಶ್ವರಾಧ್ಯ ಇಚೇರಿ ಮಾತನಾಡಿ, ಮಕ್ಕಳಿಗೆ ಬದುಕುವ ಹಕ್ಕು, ಭಾಗವಹಿಸುವ ಹಕ್ಕು, ರಕ್ಷಣೆಯ ಹಕ್ಕು ಹಾಗೂ ವಿಕಾಸದ ಹಕ್ಕುಗಳಿದ್ದು, ಪ್ರತಿಯೊಂದು ಮಗುವಿನ ಹಕ್ಕುಗಳನ್ನು ಗೌರವಿಸಿ ರಕ್ಷಿಸುವುದು ಸಮಾಜದ ಜವಾಬ್ದಾರಿಯಾಗಿದೆ ಎಂದು ಮಕ್ಕಳ ಹಕ್ಕುಗಳ ಕುರಿತು ಸವಿಸ್ತಾರವಾಗಿ ತಿಳಿಸಿದರು.


ಉದಯವಾಹಿನಿ ಚಿತ್ರ

ಮಮತೆಯ ತೊಟ್ಟಿಲು ಮತ್ತು ದತ್ತು ಪ್ರಕ್ರಿಯೆ

• **ಉದಯವಾಹಿನಿ ಬೀದರ, :**

ನವೆಂಬರ್ ತಿಂಗಳನ್ನು ''ದತ್ತು ಮಾಸಾಚರಣೆ'' ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ, ಮಮತೆಯ ತೊಟ್ಟಿಲು ಮತ್ತು ದತ್ತು ಪ್ರಕ್ರಿಯೆಯ ಬಗ್ಗೆ ಸಾರ್ವಜನಿಕರಲ್ಲಿ ವ್ಯಾಪಕ ಪ್ರಚಾರ ನೀಡುವ ಉದ್ದೇಶದಿಂದ ಸ್ತಬ್ಧಚಿತ್ರವನ್ನು ಸಿದ್ಧಪಡಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರು ಈ ಸ್ತಬ್ಧಚಿತ್ರಕ್ಕೆ ಚಾಲನೆ ನೀಡಿದರು. ದತ್ತು ಮಾಸಾಚರಣೆ–2026ರ ಅಂಗವಾಗಿ ಕನ್ನಡ ರಾಜ್ಯೋತ್ಸವದ ದಿನದಂದು ಮಮತೆಯ ತೊಟ್ಟಿಲನ್ನು ಒಳಗೊಂಡಿರುವ ಸ್ತಬ್ಧಚಿತ್ರವನ್ನು ಅನಾವರಣಗೊಳಿಸಿ ದತ್ತು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ''ಕನ್ನಡ ರಾಜ್ಯೋತ್ಸವ''ದ ನಿಮಿತ್ತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ನಡೆಯುವ ವಿವಿಧ ಕಾರ್ಯಕ್ರಮ ಹಾಗೂ ಯೋಜನೆಗಳ ಕುರಿತು ಈ ಸ್ತಬ್ಧಚಿತ್ರವನ್ನು ಸಿದ್ಧಪಡಿಸಲಾಗಿದೆ. ಸಚಿವರು ಇದನ್ನು ಉದ್ಘಾಟಿಸುವ ಮೂಲಕ ದತ್ತು ಮಾಸಾಚರಣೆಗೆ ಅಧಿಕೃತ ಚಾಲನೆ ನೀಡಿದರು. ನಂತರ ಈ ಸ್ತಬ್ಧಚಿತ್ರವಿರುವ ವಾಹನವು ನೆಹರು ಕ್ರೀಡಾಂಗಣದಿಂದ ನಗರದ ಪ್ರಮುಖ ವೃತ್ತಗಳಲ್ಲಿ ಸಂಚರಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿತು. ಬೀದರ ಜಿಲ್ಲಾಧಿಕಾರಿ ಶ್ರೀಮತಿ ಶಿಲ್ಪಾ ಶರ್ಮಾ ಮಾತನಾಡಿ, ದತ್ತು ಕಾರ್ಯಕ್ರಮದ ಕುರಿತು ಬೀದರ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಒಟ್ಟು 107 ಮಕ್ಕಳನ್ನು ದತ್ತು ನೀಡಲಾಗಿದೆ ಎಂದರು. ಬೇಡವಾದ ಮಕ್ಕಳನ್ನು ತಿಪ್ಪೆಗುಂಡಿಗಳಲ್ಲಿ ಹಾಗೂ ಮುಳ್ಳಿನ ಪೊದೆಗಳಲ್ಲಿ ಬಿಸಾಡದೆ, ಆಸ್ಪತ್ರೆಗಳು ಮತ್ತು ಬಸ್ ನಿಲ್ದಾಣಗಳಲ್ಲಿರುವ ಮಮತೆಯ ತೊಟ್ಟಿಲುಗಳಲ್ಲಿ ಮಕ್ಕಳನ್ನು ಸುರಕ್ಷಿತವಾಗಿ ಬಿಡಬೇಕೆಂದು ಕರೆ ನೀಡಿದರು.

ಮಿನಿ ನ್ಯೂಸ್

ಬಸ್ ನಿಲ್ದಾಣದಲ್ಲಿ ಚಿತ್ರಗಳ ಮೆರುಗು

• **ಉದಯವಾಹಿನಿ,** ಲಕ್ಷ್ಮೇಶ್ವರ,:

ಪಟ್ಟಣದ ಹೊಸ ಬಸ್ ನಿಲ್ದಾಣ ಆರಂಭಗೊಂಡು ಮೂರು ದಶಕಗಳಾಗಿದ್ದರು ಕಾಂಪೌಂಡ್ ಗೋಡೆಗಳು ಸುಣ್ಣ ಬಣ್ಣವಿಲ್ಲದೆ ಹಾಳು ಸುರಿಯುತ್ತಿದ್ದವು. ಯಾವುದಕ್ಕೂ ಕಾಲ ಕೂಡಿ ಬರಬೇಕು ಎಂಬ ನಿಯಮದಂತೆ ಈ ಬಾರಿಯ ನವೆಂಬರ್ 1 ರಾಜ್ಯೋತ್ಸವದ ದಿನದಂದು ಕುಂಚಗಳ ಕಲರವ ಮೂಡಿಬಂದಿತು.

ಕಲಾವಿದ ಶಿಕ್ಷಕ ಪ್ರವೀಣ್ ಗಾಯಕರ ಅವರ ನೇತೃತ್ವದಲ್ಲಿ ಕಲಾವಿದರ ತಂಡ ತಮ್ಮ ಕುಂಚದ ಮೂಲಕ ಕಲೆಯ ಬಲೆಯನ್ನು ಸಾಕಾರಗೊಳಿಸಿದರು. ಕಾಂಪೌಂಡ್ ಗೋಡೆಯ ಎತ್ತ ತಿರುಗಿದರು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಚಿತ್ರಗಳು ಪತ್ರಿಕೆಗಳ ಮಹತ್ವ ಸಾರುವ ಅಕ್ಷರಗಳು ಸಾಮಾಜಿಕ ಕಳಕಳಿಯ ಕಲೆ ಸಾಹಿತ್ಯ ಸಂಸ್ಕೃತಿ ಪರಂಪರೆ ಇತಿಹಾಸಗಳ ಚಿತ್ರಣ ಮೂಡಿಬಂದಿವೆ.

ಈಗ ಹೊಸ ಬಸ್ ನಿಲ್ದಾಣಕ್ಕೆ ಮೆರಗು ಬಂದಿದ್ದು ನಿಜವಾಗಿಯೂ ಕಲಾವಿದರ ಪರಿಶ್ರಮಕ್ಕೆ ಒಂದು ಸೆಲ್ಯೂಟ್ ಹೇಳಲೇಬೇಕು. ಕಾಂಪೌಂಡ್ ಗೋಡೆಗಳ ಮೇಲೆ ದೊಡ್ಡಾಟ ಯಕ್ಷಗಾನ ಬೇಂದ್ರೆ, ಕುವೆಂಪು ವಿಕ್ರ ಗೋಕಾಕ ಸೇರಿದಂತೆ ಅನೇಕರ ಚಿತ್ರಗಳು ಕೆಎಸ್‌ಆರ್‌ಟಿ ಸಿ ಲಾಂಛನ ನುಡಿಮುತ್ತುಗಳು ಹೀಗೆ ಕಲಾವಿದರು ತಮ್ಮ ಅಭೂತಪೂರ್ವವಾದ ಕಲೆಯನ್ನು ಅರಳಿಸುವ ಮೂಲಕ ಕಲೆಯ ಬಲೆಯ ಸಾಕಾರ ಮಾಡಿದ್ದಾರೆ. ಸದಾ ಸಾವಿರಾರು ವಿದ್ಯಾರ್ಥಿಗಳಿಂದ ತುಂಬಿ ತುಳುಕುತ್ತಿರುವ ಬಸ್ ನಿಲ್ದಾಣದಲ್ಲಿ ಈ ಚಿತ್ರಕಲೆ ವಿದ್ಯಾರ್ಥಿಗಳಿಗೆ ಪ್ರೇರಣೆ ಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.


ಉದಯವಾಹಿನಿ ಚಿತ್ರ

ಡಾ. ಅಂಬೇಡ್ಕರ್ ಭವನಕ್ಕೆ ನಿವೇಶನ ಮಂಜೂರು ಮಾಡಿ

• **ಉದಯವಾಹಿನಿ ಬೀದರ್:**

ಜಿಲ್ಲಾ ಕೇಂದ್ರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಬೇಕು ಎಂದು ಹಮಿಲಾಪುರದ ದಿ ಬುದ್ಧ ಯುತ್ ಕ್ಲಬ್ ಅಧ್ಯಕ್ಷ ಮಹೇಶ ಎಸ್. ರಾಂಪುರೆ ಒತ್ತಾಯಿಸಿದ್ದಾರೆ. ಈ ಕುರಿತು ನಗರದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯಿಂದ ಭವನಕ್ಕೆ ಈಗಾಗಲೇ ರೂ. 4 ಕೋಟಿ ಅನುದಾನ ಮಂಜೂರಾಗಿದೆ. ಆದರೆ, ನಿವೇಶನ ಲಭ್ಯ ಇಲ್ಲದ ಕಾರಣ ಅದನ್ನು ತಡೆ ಹಿಡಿಯಲಾಗಿದೆ ಎಂದು ತಿಳಿಸಿದ್ದಾರೆ.ಕೂಡಲೇ ನಾಲ್ಕು ಎಕರೆ ಜಮೀನು, ಹೆಚ್ಚುವರಿ ರೂ. 100 ಕೋಟಿ ಒಳಗೊಂಡಂತೆ ಒಟ್ಟು ರೂ. 104 ಕೋಟಿ ಅನುದಾನ ಮಂಜೂರು ಮಾಡಿ, ಭವನ ನಿರ್ಮಿಸಬೇಕು ಎಂದು ಆಗ್ರಹಿಸಿದ್ದಾರೆ.

ಪಂಚ ಗ್ಯಾರಂಟಿ ಯೋಜನೆಗಳಿಗೆ 3,143.26 ಕೋಟಿ ವೆಚ್ಚ

• **ಉದಯವಾಹಿನಿ ಯಾದಗಿರಿ:**

ಬಡವರ ಸ್ವಾಭಿಮಾನದ ಬದುಕಿಗೆ ನೆರವಾಗುವ ಉದ್ದೇಶದಿಂದ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳಡಿ ಯಾದಗಿರಿ ಜಿಲ್ಲೆಯ ಫಲಾನುಭವಿಗಳಿಗಾಗಿ ಒಟ್ಟು 3,143.26 ಕೋಟಿ ಅನುದಾನವನ್ನು ಸರ್ಕಾರ ಭರಿಸಿದೆ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಪಿ.ಟಿ. ಪರಮೇಶ್ವರ ನಾಯ್ಕ ತಿಳಿಸಿದರು. ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗೃಹಲಕ್ಷ್ಮೀ ಯೋಜನೆ: 2023–24ನೇ ಸಾಲಿನಲ್ಲಿ 7,52,901 ಫಲಾನುಭವಿಗಳಿಗೆ 1,390.84 ಕೋಟಿ ಸಹಾಯಧನ ಜಮೆ ಮಾಡಲಾಗಿದೆ. 2026–27ನೇ ಸಾಲಿನಲ್ಲಿ ನಾಲ್ಕು ಕಂತುಗಳಲ್ಲಿ 9,92,777 ಫಲಾನುಭವಿಗಳಿಗೆ 198.56 ಕೋಟಿ ಜಮೆ ಮಾಡಲಾಗಿದೆ. ಜಿಲ್ಲೆಯಲ್ಲಿ 429 ಅರ್ಹ ಫಲಾನುಭವಿಗಳು ಮೃತಪಟ್ಟಿದ್ದು, ಸುಮಾರು 50 ಲಕ್ಷ ಹಣ ಬ್ಯಾಂಕ್‌ಗಳಲ್ಲಿ ತಡೆಹಿಡಿಯಲಾಗಿದೆ. ಈ ಮೊತ್ತವನ್ನು ಸರ್ಕಾರಕ್ಕೆ ಹಿಂದಿರುಗಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಶಕ್ತಿ ಯೋಜನೆ: ಕಳೆದ ಒಂದು ವರ್ಷದಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಒಟ್ಟು 9.22 ಕೋಟಿ ಪ್ರಯಾಣಿಕರು ಉಚಿತವಾಗಿ ಪ್ರಯಾಣಿಸಿದ್ದು, ಇದಕ್ಕಾಗಿ ಸರ್ಕಾರ 335 ಕೋಟಿ ವೆಚ್ಚ ಭರಿಸಿದೆ ಎಂದು ತಿಳಿಸಿದರು. ಜಿಲ್ಲೆಯ ವಿವಿಧ ಬಸ್ ನಿಲ್ದಾಣಗಳಲ್ಲಿ ಮಹಿಳೆಯರ ಸುರಕ್ಷತೆಗಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ, ಶೌಚಾಲಯಗಳ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಮಕ್ಕಳಿಗೆ ಹಾಲುಣಿಸುವ ತಾಯಂದಿರಿಗಾಗಿ ಪ್ರತ್ಯೇಕ ಕೊಠಡಿಗಳ ವ್ಯವಸ್ಥೆ ಕಲ್ಪಿಸಬೇಕು ಎಂದು ಸಾರಿಗೆ ಅಧಿಕಾರಿಗಳಿಗೆ ಸೂಚಿಸಿದರು. ಗುರುಮಠಕಲ್‌ನಿಂದ ಕಲಬುರಗಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುವಂತೆಯೂ ನಿರ್ದೇಶನ ನೀಡಿದರು.

ಸೂಕ್ತ ರಕ್ಷಣೆ ಒದಗಿಸಲು ಗೃಹ ಸಚಿವರಿಗೆ ಮನವಿ

• **ಉದಯವಾಹಿನಿ ಮುದ್ದೇಬಿಹಾಳ:**



ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ನ್ಯಾಯವಾದಿಗಳ ಮೇಲಿನ ಹಲ್ಲೆ, ಹತ್ಯೆ ಹಾಗೂ ದೌರ್ಜನ್ಯ ಪ್ರಕರಣಗಳನ್ನು ಖಂಡಿಸಿ, ಸಮಗ್ರ ನ್ಯಾಯವಾದಿಗಳ ರಕ್ಷಣಾ ಕಾಯ್ದೆಯನ್ನು ತಕ್ಷಣ ಜಾರಿಗೆ ತರಬೇಕೆಂದು ಆಗ್ರಹಿಸಿ ಮುದ್ದೇಬಿಹಾಳದ ಹಿರಿಯ ಶ್ರೇಣಿ ಮತ್ತು ಕಿರಿಯ ಶ್ರೇಣಿ ನ್ಯಾಯಾಲಯದ ನ್ಯಾಯವಾದಿಗಳ ಸಂಘದ ವತಿಯಿಂದ ಸಾಂಕೇತಿಕವಾಗಿ ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ನಡೆಸಿದ ನ್ಯಾಯವಾದಿಗಳು ಪಟ್ಟಣದ ತಹಶೀಲ್ದಾರ್ ಕಚೇರಿಗೆ ತೆರಳಿ ತಹಶೀಲ್ದಾರ್ ಎಂ.ಎಸ್. ಬಾಗೇವಾಡಿ ಅವರ ಮೂಲಕ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನ್ಯಾಯವಾದಿ ಸಂಘದ ಅಧ್ಯಕ್ಷ ಎಸ್.ಎಸ್. ಮಾಲಗತ್ತಿ ಅವರು, ರಾಜ್ಯದ ವಿವಿಧೆಡೆ ನ್ಯಾಯವಾದಿಗಳ ಮೇಲೆ ಹಲ್ಲೆ ಹಾಗೂ ಹತ್ಯೆಯಂತಹ ಘಟನೆಗಳು ನಡೆಯುತ್ತಿರುವುದು ನ್ಯಾಯವಾದಿಗಳ ಸುರಕ್ಷತೆ ಕುರಿತು ಗಂಭೀರ ಆತಂಕ ಮೂಡಿಸಿದೆ ಎಂದರು. ಬೆಂಗಳೂರಿನ ವೈಟ್‌ಫೀಲ್ಡ್‌ನ ನ್ಯಾಯವಾದಿ ಮಂಜುನಾಥ, ಅನ್ನಪೂರ್ಣೇಶ್ವರಿ ನಗರದ ನ್ಯಾಯವಾದಿ ಶ್ರೀರಾಮ್ ಅವರ ಹತ್ಯೆ ಹಾಗೂ ಗೌರಿಬಿದನೂರಿನ ನ್ಯಾಯವಾದಿ ವೆಂಕಟರಮಣ ಸಣ್ಣಕ್ಕಿ ಅವರ ಮೇಲಿನ ಕೊಲೆ ಯತ್ನದ ಘಟನೆಯನ್ನು ನ್ಯಾಯವಾದಿಗಳ ಸಂಘ ತೀವ್ರವಾಗಿ ಖಂಡಿಸುತ್ತದೆ ಎಂದರು.

ಕಾರಣ ನ್ಯಾಯವಾದಿಗಳ ಮೇಲಿನ ಹಲ್ಲೆ, ಹತ್ಯೆ ಹಾಗೂ ದೌರ್ಜನ್ಯಗಳನ್ನು ತಡೆಯಲು ಈಗಿರುವ ರಕ್ಷಣಾ ಕಾನೂನನ್ನು ಮತ್ತಷ್ಟು ಬಲಪಡಿಸಿ, ಸಮಗ್ರ ನ್ಯಾಯವಾದಿಗಳ ರಕ್ಷಣಾ ಕಾಯ್ದೆಯನ್ನು ಕೂಡಲೇ ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ಕೃಷಿಕರ ಸುಸ್ಥಿರ ಅಭಿವೃದ್ಧಿಗೆ ಜಲಸಮೃದ್ಧಿ ಭದ್ರ ಅಡಿಪಾಯ

ಕಲ್ಯಾಣ ಕರ್ನಾಟಕದ ಪ್ರತಿಯೊಂದು ಪ್ರದೇಶಕ್ಕೂ ಸಮರ್ಪಕ ನೀರಾವರಿ ಸೌಲಭ್ಯ ಕಲ್ಪಿಸುವ ದೂರದೃಷ್ಟಿಯೊಂದಿಗೆ, ಪ್ರಗತಿಯಲ್ಲಿರುವ ಯೋಜನೆಗಳ ಅನುಷ್ಠಾನ

• **ಉದಯವಾಹಿನಿ,** ಕಲಬುರಗಿ,:

1 : ಸ್ಥಗಿತಗೊಂಡ ಕಾಮಗಾರಿಗಳ ಪುನಶ್ಚೇತನ

2 : ಮೂಲಸೌಕರ್ಯವನ್ನು ಬಲಪಡಿಸುವುದು

3 :ಜಲಸಂಪನ್ಮೂಲಗಳ ಸಮರ್ಪಕ ಬಳಕೆ

ಕಲ್ಯಾಣ ಕರ್ನಾಟಕ ಪ್ರದೇಶದ 7 ಜಿಲ್ಲೆಗಳು, 41 ಅಸೆಂಬ್ಲಿ ಕ್ಷೇತ್ರಗಳಲ್ಲಿನ ಸುಸ್ಥಿರ ಅಭಿವೃದ್ಧಿಗೆ ಸಣ್ಣ ನೀರಾವರಿ ರಂಗದಲ್ಲಿ ಹೊಸ ಯೋಜನೆ ರೂಪಿಸಿ ಜಲ ಸಮೃದ್ಧಿಯ ಭದ್ರ ಅಡಿಪಾಯ ಹಾಕಲು ಸಣ್ಣ ನೀರಾವರಿ ಸಚಿವ ಡಾ. ಅಜಯ್ ಧರ್ಮಸಿಂಗ್ ದೃಢ ಸಂಕಲ್ಪ ಮಾಡಿದ್ದಾರೆ. ತಮ್ಮ ಈ ವಿನೂತನ ಸಂಕಲ್ಪಕ್ಕೆ ಪೂರಕವಾಗಿ ಸಚಿವ ಡಾ. ಅಜಯ್ ಸಿಂಗ್ ಅವರು ಬೆಂಗಳೂರಿನ ಮುಖ್ಯ ಇಂಜಿನಿಯರ್ ಕಚೇರಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ಕಲಬುರಗಿ ವಿಭಾಗದ ವಿವಿಧ ನೀರಾವರಿ ಯೋಜನೆಗಳ ಕುರಿತಂತೆ ಮಹತ್ವದ ಸಭೆ ನಡೆಸಿದ್ದಾರೆ.


ಕಲ್ಯಾಣ ನಾಡಿನ ಹೆಬ್ಬಾಗಿಲು ಕಲಬುರಗಿ ಸೇರಿದಂತೆ ಕಲ್ಯಾಣ ಪ್ರದೇಶದ ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಯಾದಗಿರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿರುವ ಸಣ್ಣ ನೀರಾವರಿ ಕ್ಷೇತ್ರಕ್ಕೆ ಹೊಸ ಕಾಯಕಲ್ಪ ಕೊಡುವ ಸಂಕಲ್ಪದೊಂದಿಗೆ ಪ್ರಗತಿ ಪರಿಶೀಲನೆ ನಡೆಸಿ ಗಮನ ಸೆಳೆದಿದ್ದಾರೆ. ಸಭೆಯಲ್ಲಿ ಸಚಿವರು ಹಲವು ಮಹತ್ವದ ವಿಷಯಗಳನ್ನು ಪ್ರಸ್ತಾಪಿಸಿ ಈ ಭಾಗದ ಇಂಜಿನಿಯರ್‌ಗಳು, ಅಧಿಕಾರಿಗಳು, ತಾಂತ್ರಿಕ ಪರಿಣಿತರಿಗೆ ಸೂಚನೆಗಳನ್ನು ರವಾನಿಸಿದ್ದಾರೆ.

ಕಲ್ಯಾಣ ಕರ್ನಾಟಕದ ಪ್ರತಿಯೊಂದು ಪ್ರದೇಶಕ್ಕೂ ಸಮರ್ಪಕ ನೀರಾವರಿ ಸೌಲಭ್ಯ ಕಲ್ಪಿಸುವ ದೂರದೃಷ್ಟಿಯೊಂದಿಗೆ, ಪ್ರಗತಿಯಲ್ಲಿರುವ ಯೋಜನೆಗಳ ಅನುಷ್ಠಾನ, ಸ್ಥಗಿತಗೊಂಡ ಕಾಮಗಾರಿಗಳ ಪುನಶ್ಚೇತನ ಹಾಗೂ ಹೊಸ ನೀರಾವರಿ ಯೋಜನೆಗಳ ರೂಪುರೇಷೆಗಳ ಕುರಿತು ಸಮಗ್ರ ಚರ್ಚೆ ನಡೆಸಲಾಯಿತು ಎಂದು ಬೆಂಗಳೂರಿನ ಸಭೆಯಲ್ಲಿನ ಮಹತ್ವದ ಚರ್ಚೆಗಳ ಕುರಿತಂತೆ ಸಚಿವ ಡಾ. ಅಜಯ್ ಸಿಂಗ್ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಕಲ್ಯಾಣ ಕರ್ನಾಟಕದಲ್ಲಿರುವ ನೀರಾವರಿ ಮೂಲಸೌಕರ್ಯವನ್ನು ಬಲಪಡಿಸುವುದು, ಜಲಸಂಪನ್ಮೂಲಗಳ ಸಮರ್ಪಕ ಬಳಕೆ ಮತ್ತು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು ನಮ್ಮ ಆದ್ಯತೆಯಾಗಿದೆ.

ಇದಲ್ಲದೆ ಜಿಲ್ಲೆಗೊಂದು ವಿಶೇಷ ನೀರಾವರಿ ಯೋಜನೆ ಕೈಗೆತ್ತಿಕೊಳ್ಳುವುದು, ಇಡೀ ಪ್ರದೇಶದ ಅಸಂಬ್ಲಿ ಕ್ಷೇತ್ರವಾರು ಶಾಸಕರ ಅಭಿಪ್ರಾಯದಂತೆ ಹೊಸ ನೀರಾವರಿ ಯೋಜನೆ ಅನುಷ್ಠಾನಕ್ಕೆ ತರುವ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೆಕೆಆರ್‌ಡಿ ಬಿ ಸಹಯೋಗದೊಂದಿಗೆ ಅದಾಗಲೇ ಕಳೆದ ಬಾರಿ 200 ಕೋಟಿ ರು ವೆಚ್ಚದಲ್ಲಿ ಅಂತರ್ಜಲ ಮಟ್ಟ ಹೆಚ್ಚಳದ ಯೋಜನೆ ರೂಪಿಲಾಗಿತ್ತು.


ಉದಯವಾಹಿನಿ ಚಿತ್ರ

ಈ ಬಾರಿ ಇದೇ ಸಹಕಾರದಲ್ಲಿ 300 ಕೋಟಿ ರು ಮೊತ್ತದ ಯೋಜನೆ ರೂಪಿಸುವ ಚಿಂತೆ ಇರುವ ಬಗ್ಗೆಯೂ ಸಭೆಯಲ್ಲಿ ಪ್ರಸ್ತಾಪಿಸಿ ಇಂಜಿನಿಯರ್ಗಳಿಗೆ ತಾಂತ್ರಿಕ ವರದಿ ಸಿದ್ಧಪಡಿಸಲು ಸೂಚಿಸಿದ್ದಾಗಿ ಹೇಳಿದ್ದಾರೆ.-ಸಚಿವ ಡಾ. ಅಜಯ್ ಸಿಂಗ್

ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಜಲಸಮೃದ್ಧಿ ಅಡಿಪಾಯ ಹಾಕಿ ರೈತರ ಬದುಕಿನಲ್ಲಿ ಸಮೃದ್ಧಿ ತರುವ ಸುಸ್ಥಿರ ನೀರಾವರಿ ವ್ಯವಸ್ಥೆಯ ನಿರ್ಮಾಣ ಮಾಡುವ ಗುರಿ ತಮ್ಮದಾಗಿದೆ ಎಂದು ಹೇಳಿದ್ದಾರೆ.-ಡಾ. ಅಜಯ್ ಸಿಂಗ್

ಕಾಮಗಾರಿಗಳಲ್ಲಿ ಗುಣಮಟ್ಟ, ವೇಗ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಂಡು, ಪ್ರತಿಯೊಂದು ಯೋಜನೆಯ ಪ್ರಯೋಜನ ನೇರವಾಗಿ ರೈತರ ಹೊಲಗಳಿಗೆ ತಲುಪುವಂತೆ ಅಧಿಕಾರಿಗಳು ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದ ತಾವು ಜಿಲ್ಲೆಯ ಪ್ರತಿಯೊಬ್ಬರಿಂದಲೂ ಇಲಾಖೆಯ ಮಾಹಿತಿ ಪಡೆದಿರುವ ತಾವು ಬರುವ ದಿನಗಳಲ್ಲಿ ಕಲ್ಯಾಣದ ಜಿಲ್ಲೆಗಳಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ ಹೊಸ ವೇಗದೊಂದಿಗೆ ಅನುಷ್ಠಾನಕ್ಕೆ ತರುವುದಾಗಿ ಹೇಳಿದ್ದಾರೆ. ಸಣ್ಣ ನೀರಾವರಿ ಸಚಿವ ಡಾ. ಅಜಯ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಇಲಾಖೆಯ ಮುಖ್ಯ ಇಂಜಿನಿಯರ್, ಉನ್ನತ ಅಧಿಕಾರಿಗಳು, ಕಲ್ಯಾಣ ನಾಡಿನ ಕಲಬುರಗಿ ಸೇರಿದಂತೆ 7 ಜಿಲ್ಲೆಗಳ ಸಣ್ಣ ನೀರಾವರಿ ಇಲಾಖೆ ಹಿರಿಯ ಇಂಜಿನಿಯರ್‌ಗಳು ಪಾಲ್ಗೊಂಡಿದ್ದರು.

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	01:30 ರಿಂದ 03:00
ಗುಳಿಕ ಕಾಲ	ಬೆಳಿಗ್ಗೆ	09:00 ರಿಂದ 10:30
ಯಮಗಂಡ ಕಾಲ	ಬೆಳಿಗ್ಗೆ	06:00 ರಿಂದ 07:30

ಮೇಷ ನಗು ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು. ನೀವು ಬಯಸುವ ಎಲ್ಲಾ ಗಮನವನ್ನೂ ನೀವು ಪಡೆಯುವ ಒಳ್ಳೆಯ ದಿನ.

ವೃಷಭ ಸ್ನೇಹಿತರೊಂದಿಗಿನ ಸಂಜೆ ಆಹ್ಲಾದಕರವಾಗಿದ್ದರೂ ಆದರೆ ವಿಪರೀತವಾಗಿ ತಿನ್ನುವುದು ನಿಮ್ಮ ಮರುದಿನದ ಮುಂಜಾನೆಗೆ ಅಸಮಾಧಾನವುಂಟುಮಾಡಬಹುದು. ಆವತ್ತಿಗಾಗಿ ಮಾತ್ರ ಬದುಕುವ ಮತ್ತು ಮನೋರಂಜನೆಗಾಗಿ ಹೆಚ್ಚು ಸಮಯ ಮತ್ತು ಹಣ ಖರ್ಚು ಮಾಡುವ ನಿಮ್ಮ ಪ್ರವೃತ್ತಿಯನ್ನು ನಿಯಂತ್ರಿಸಿ.

ಮಿಥುನ ನಿಮ್ಮ ಹಠಾತ್ ಪ್ರವೃತ್ತಿ ನಿಮಗೆ ಗಂಭೀರವಾದ ಆರೋಗ್ಯದ ಸಮಸ್ಯೆಗಳನ್ನು ಉಂಟುಮಾಡಬಹುದು. ನಿಮ್ಮ ಜೀವನ ಸಂಗಾತಿಯೊಂದಿಗೆ ಹಣದ ಯಾವುದೇ ವಿಷಯದ ಬಗ್ಗೆ ಇಂದು ನಿಮ್ಮ ಜಗಳವಾಗಬಹುದು. ಆದಾಗ್ಯೂ ನೀವು ನಿಮ್ಮ ಶಾಂತ ಸ್ವಭಾವದಿಂದ ಎಲ್ಲವನ್ನು ಸರಿಗೊಳಿಸಬಹುದು.

ಕಟಕ ಹೂಡಿಕೆಗಳನ್ನು ಮಾಡುವ ಮೊದಲು ವ್ಯಕ್ತಿಯ ವಿಶ್ವಾಸಾರ್ಹತೆ ಪ್ರಾಮಾಣಿಕತೆಯನ್ನು ದೃಢೀಕರಿಸಿ. ಸಾಮಾಜಿಕ ಸಮಾರಂಭಗಳು ಪ್ರಭಾವಿ ಮತ್ತು ಪ್ರಮುಖ ಜನರೊಡನೆ ನಿಮ್ಮ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ. ಕನಸಿನ ಚಿಂತೆಗಳನ್ನು ಬಿಟ್ಟು ನಿಮ್ಮ ಪ್ರೀತಿಪಾತ್ರ ಸಂಗಾತಿಯ ಜೊತೆಯಿರಿ.

ಸಿಂಹ ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ನೀವು ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು, ಇದರಿಂದ ನೀವು ಮಾನಸಿಕ ಶಾಂತಿಯನ್ನು ಪಡೆಯುವ ಸಂಪೂರ್ಣ ಸಾಧ್ಯತೆ ಇದೆ.

ಕನ್ಯಾ ಮನೋಬಲದ ನಿಮ್ಮ ಕೊರತೆ ನಿಮ್ಮನ್ನು ಭಾವನಾತ್ಮಕ ಮತ್ತು ಮಾನಸಿಕ ವರ್ತನೆಯ ಬಲಿಪಶುವಾಗಿ ಮಾಡಬಹುದು. ತಮ್ಮ ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ಇಂದು ನಷ್ಟ ಅನುಭವಿಸುವ ಸಾಧ್ಯತೆಯಿದೆ. ಬೆಟ್ಟಿಂಗ್‌ನಿಂದ ದೂರವಿರಲು ನಿಮಗೆ ಸೂಚಿಸಲಾಗಿದೆ.

ತುಲಾ ಕ್ರೀಡೆಗಳು ,ಹೊರಾಂಗಣ ಚಟುವಟಿಕೆಗಳಲ್ಲಿ ಭಾಗವಹಿಸುವುದು ನಿಮ್ಮ ಕಳೆದುಕೊಂಡ ಚೈತನ್ಯವನ್ನು ಸಂಗ್ರಹಿಸಲು ಸಹಾಯ ಮಾಡುತ್ತದೆ. ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ. ನಿಮ್ಮ ಸ್ನೇಹಿತರು ನಿಮ್ಮ ಉದಾರ ವರ್ತನೆಯ ದುರುಪಯೋಗ ಮಾಡಲು ಬಿಡಬೇಡಿ.

ವೃಶ್ಚಿಕ ನಿಮ್ಮ ಪ್ರಚಂಡ ಬೌದ್ಧಿಕ ಸಾಮರ್ಥ್ಯ ಅಂಗವೈಕಲ್ಯದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಕೇವಲ ಸಕಾರಾತ್ಮಕ ಆಲೋಚನೆಗಳ ಜೊತೆ ಮಾತ್ರ ನೀವು ಈ ಸಮಸ್ಯೆಯ ವಿರುದ್ಧ ಹೋರಾಡಬೇಕು. ನೀವು ಇಂದು ನಿಮಗೆ ನೀಡಲಾದ ಹೂಡಿಕೆಯ ಯೋಜನೆಗಳ ಬಗ್ಗೆ ಚೆನ್ನಾಗಿ ಆಲೋಚಿಸಬೇಕು.

ಧನಸ್ಸು ನಿಮ್ಮ ಅಸೂಯೆ ವರ್ತನೆ ನಿಮ್ಮನ್ನು ದುಃಖಿಗಳಾಗಿಯೂ ಮತ್ತು ಖಿನ್ನರಾಗಿಯೂ ಮಾಡಬಹುದು. ಆದರೆ ಇದು ಒಂದು ಸ್ವಯಂಕೃತ ಗಾಯವಾಗಿರುವುದರಿಂದ ಇದರ ಬಗ್ಗೆ ಪ್ರಲಾಪಿಸುವ ಅಗತ್ಯವಿಲ್ಲ. ಇತರರ ಸಂತೋಷ ಮತ್ತು ಅತೃಪ್ತಿಯನ್ನು ಹಂಚಿಕೊಳ್ಳುವ ಮೂಲಕ ಇದನ್ನು ತೊಡೆದುಹಾಕಲು ಪಣತೊಡಿ.

ಮಕರ ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ನಿಮ್ಮ ಪತ್ನಿಯ ಸಾಧನೆಯನ್ನು ಶ್ಲಾಘಿಸಿ .

ಕುಂಭ ಉತ್ತಮ ಆರೋಗ್ಯ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲು ನಿಮ್ಮನ್ನು ಸಕ್ರಿಯಗೊಳಿಸುತ್ತದೆ. ಈ ರಾಶಿಚಕ್ರದ ಕೆಲವರು ಇಂದು ಭೂಮಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಹಣವನ್ನು ಖರ್ಚು ಮಾಡಬೇಕಾಗಬಹುದು. ಸ್ನೇಹಿತರೊಂದಿಗಿನ ಸಂಜೆ ಸಂತೋಷಕರವಾಗಿರುತ್ತದೆ.

ಮೀನ ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ. ನಿಮ್ಮ ಹೆಚ್ಚುವರಿ ಹಣವನ್ನು ಒಂದು ಸುರಕ್ಷಿತ ಸ್ಥಳದಲ್ಲಿರಿಸಿ ಇದು ಮುಂದಿನ ಕಾಲದಲ್ಲಿ ನಿಮಗೆ ಒಳ್ಳೆಯ ಆದಾಯ ತರುತ್ತದೆ.



ಉದಯವಾಹಿನಿ ಚಿತ್ರ

• **ಉದಯವಾಹಿನಿ ಗದಗ:**

ಸೊರಟೂರ ಗ್ರಾಮದ ಬಸ್ ನಿಲ್ದಾಣ ವೃತ್ತದಲ್ಲಿ ರೈತ ಮಕ್ಕಳಿಂದ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಕನ್ನಡ ರಾಜ್ಯೋತ್ಸವ ಆಚರಿಸಿದರು. ನಂತರ ಭುವನೇಶ್ವರಿ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಂಜು ಜಂಗವಾಡ. ಪರಮೇಶ್ ಕಳಂಗನವರ. ಶರಣಪ್ಪ ದಿವಟರ. ಸತ್ಯಪ್ಪ ತಳವಾರ. ಪ್ರವೀಣ ಮುಶಪ್ಪನವರ. ಚೇತನ್ ಕಮ್ಮಾರ. ಅಭಿಷೇಕ್ ಪಲ್ಲೆದ. ಆನಂದ ಗಾಣಿಗೇರ. ಮಂಜು ಮಿರಗಾಣಿ. ಹಾಗೂ ಊರಿನ ಹಿರಿಯರು ಯುವಕರು ಮುಂತಾದವರು ಭಾಗಿಯಾಗಿದ್ದರು.

ರಸ್ತೆ ದುರಸ್ತಿಗೆ ದಲಿತ ಮುಖಂಡ ಮರೆಪ್ಪ ಎಂ. ಕಟ್ಟಿಮನಿ ಆಗ್ರಹ

• **ಉದಯವಾಹಿನಿ ಕೆಂಭಾವಿ:**



ಉದಯವಾಹಿನಿ ಚಿತ್ರ

ಪಟ್ಟಣದ ಆಶ್ರಯ ಕಾಲೋನಿಯಿಂದ ಸಂಜೀವ ನಗರದ ಶ್ರೀ ರಾಮ ವೃತ್ತದವರೆಗಿನ ಸುಮಾರು 1 ಕಿಲೋಮೀಟರ್ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟು ಹೋಗಿದ್ದು, ದಿನೇ ದಿನೇ ಅಪಘಾತಗಳು ಹೆಚ್ಚುತ್ತಿರುವುದರಿಂದ ಸಾರ್ವಜನಿಕರು ಆತಂಕಗೊಂಡಿದ್ದಾರೆ. ಈ ಕೂಡಲೇ ರಸ್ತೆ ಕಾಮಗಾರಿಯನ್ನು ಆರಂಭಿಸಬೇಕು ಅಥವಾ ತಾತ್ಕಾಲಿಕವಾಗಿ ರಸ್ತೆಯ ತೆಗ್ಗು–ಗುಂಡಿಗಳನ್ನು ಮುಚ್ಚಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕೆಂದು ದಲಿತ ಮುಖಂಡ ಮರೆಪ್ಪ ಎಂ. ಕಟ್ಟಿಮನಿ ಕೆಂಭಾವಿ ತೀವ್ರವಾಗಿ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೇವಲ ಒಂದು ಕಿಲೋಮೀಟರ್ ಅಂತರದ ಈ ರಸ್ತೆಯಲ್ಲಿ ದೊಡ್ಡ–ದೊಡ್ಡ ಗುಂಡಿಗಳು ಬಿದ್ದಿದ್ದು, ವಾಹನ ಸವಾರರು ಹಾಗೂ ಪಾದಚಾರಿಗಳು ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ. ರಸ್ತೆಯ ಹದಗೆಟ್ಟ ಸ್ಥಿತಿಯಿಂದಾಗಿ ಈಗಾಗಲೇ ವಾರದಲ್ಲಿ 4 ರಿಂದ 5 ಸಣ್ಣ–ಪುಟ್ಟ ಅಪಘಾತಗಳು ಸಂಭವಿಸುತ್ತಿದ್ದು, ಅಮಾಯಕರ ಪ್ರಾಣಕ್ಕೆ ಹಾಗೂ ಆರೋಗ್ಯಕ್ಕೆ ಕುತ್ತು ಬರುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಶಾಸಕರು ಹಾಗೂ ಸ್ಥಳೀಯ ಪುರಸಭೆ ಸದಸ್ಯರು ಈ ಕೂಡಲೇ ಇತ್ತ ಗಮನಹರಿಸಿ, ನಿರ್ಲಕ್ಷ್ಯ ಧೋರಣೆಯನ್ನು ಬಿಟ್ಟು ಕೂಡಲೇ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಬೇಕು. ಇಲ್ಲದಿದ್ದರೆ ಸಾರ್ವಜನಿಕರನ್ನು ಒಗ್ಗೂಡಿಸಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ಕಾರ್ಖಾನೆಯಲ್ಲಿ ಯಂತ್ರ ಸಿಡಿದು ಕಾರ್ಮಿಕ ಸಾವು

• **ಉದಯವಾಹಿನಿ ಕಲಬುರಗಿ.**

ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಚೆಟ್ಟಿನಾಡ್ ಸಿಮೆಂಟ್ ಕಾರ್ಖಾನೆಯಲ್ಲಿ ಯಂತ್ರೋಪಕರಣ ಸಿಡಿದು ಬಡಿದ ಪರಿಣಾಮ ಓರ್ವ ಕಾರ್ಮಿಕ ಮೃತಪಟ್ಟಿದ್ದು, ಇಬ್ಬರು ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ. ಬಿಹಾರ ಮೂಲದ ಅಜಿತ್ ಕುಮಾರ್ (32) ಮೃತಪಟ್ಟ ಕಾರ್ಮಿಕ. ಉದ್ಯೋಗ ಅರಸಿ ಬಿಹಾರದಿಂದ ಚಿಂಚೋಳಿಗೆ ಬಂದಿದ್ದ ಅಜಿತ್ ಕುಮಾರ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು.ಸಿಮೆಂಟ್ ಕಂಪನಿಯ ಮಿಲ್‌ನಲ್ಲಿ ಕಪ್ಲಿಂಗ್ ಒಡೆದ ಪರಿಣಾಮ ಯಂತ್ರೋಪಕರಣಗಳು ಸಿಡಿದು ಕಾರ್ಮಿಕರಿಗೆ ಬಡಿದಿವೆ. ಘಟನೆಯಲ್ಲಿ ಮಹಿಪಾಲರೆಡ್ಡಿ, ಮನುಕುಮಾರ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಾರ್ಖಾನೆ ಮಾಲೀಕರೊಂದಿಗಿನ ಮಾತುಕತೆ ಶೇ.90ರಷ್ಟು ಯಶಸ್ವಿ

ಕಾರ್ಖಾನೆ ಮಾಲೀಕರೊಂದಿಗೆ ನಡೆಸಿದ ಮಾತುಕತೆ ಬಹುತೇಕ ಯಶಸ್ವಿಯಾಗಿದೆ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಚೂನಪ್ಪ ಪೂಜಾರಿ ಹೇಳಿದ್ದಾರೆ.

• **ಉದಯವಾಹಿನಿ** ಚಿಕ್ಕೋಡಿ



ಉದಯವಾಹಿನಿ ಚಿತ್ರ

ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆ ಮಾಲೀಕರ ನಡುವಿನ ಮಾತುಕತೆ ಶೇ. 90ರಷ್ಟು ಯಶಸ್ವಿಯಾಗಿದೆ. ಆದರೆ, ರಾಜ್ಯ ಸರ್ಕಾರ ಪ್ರತಿ ಟನ್ ಕಬ್ಬಿಗೆ 1,000 ರೂಪಾಯಿ ಪರಿಹಾರ ಘೋಷಿಸದಿದ್ದರೆ ನಾಳೆ ಬೆಳಗಾವಿಯಲ್ಲಿ ರಾಜ್ಯದ 31 ಜಿಲ್ಲೆಗಳ 1 ಕೋಟಿಗೂ ಅಧಿಕ ಮಂದಿ ಸೇರಿ ಬೃಹತ್ ಪ್ರತಿಭಟನೆ ನಡೆಸಲಿದ್ದಾರೆ ಎಂದು ಹಸಿರು ಸೇನೆ ಮತ್ತು ರೈತ ಸಂಘದ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ಎಚ್ಚರಿಕೆ ನೀಡಿದರು.

1 : 3,500 ಮುಂಗಡ ನೀಡಲು ಮುಂದಾಗಿದ್ದಾರೆ
2 : ಎರಡನೇ ಕಂತಿನಲ್ಲಿ ರೈತರಿಗೆ ನೀಡುತ್ತಾರೆ
3 : ರಾಜೀನಾಮೆ ನೀಡಬೇಕಾದಂತಹ ಪರಿಸ್ಥಿತಿ

ಕಾರ್ಖಾನೆಗಳಿಗೆ ಬರುವ ಲಾಭಾಂಶವನ್ನು ಎರಡನೇ ಕಂತಿನಲ್ಲಿ ರೈತರಿಗೆ ಯಾವ ರೀತಿ ನೀಡುತ್ತಾರೆ ಎಂಬುದರ ಕುರಿತು ಖಚಿತ ಒಪ್ಪಂದ (ಅಗ್ರಿಮೆಂಟ್) ಆಗಬೇಕು. ಕಾರ್ಖಾನೆ ಮಾಲೀಕರೊಂದಿಗೆ ನಡೆಯುವ ಮತ್ತೊಂದು ಸಭೆಯಲ್ಲಿ 100% ಇಂದೇ ಬಗೆಹರಿಯುವ ವಿಶ್ವಾಸವಿದೆ ಎಂದು ಅವರು ತಿಳಿಸಿದರು. –ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬಡಕುಂದರಿ ಗ್ರಾಮದ ಹೊಳೆಮ್ಮ ತಾಯಿ ದೇವಸ್ಥಾನದ ಬಳಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರೈತರ ಪಾದಯಾತ್ರೆ ಇವತ್ತಿಗೆ 4ನೇ ದಿನಕ್ಕೆ ಕಾಲಿಟ್ಟಿದೆ. ಶ್ರೀ ಚಂದ್ರಶೇಖರ ಅಪ್ಪಾಜಿ ಹಾಗೂ ಶಶಿಕಾಂತ ಗುರೂಜಿ ಅವರ ನೇತೃತ್ವದಲ್ಲಿ ಲಕ್ಷಾಂತರ ರೈತರು ಸೇರಿದ್ದಾರೆ. ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರು ರೈತರ ಕಬ್ಬು ಒಣಗುತ್ತಿರುವ ಸಂಕಷ್ಟವನ್ನು ಅರಿತು, ಈ ಸಮಸ್ಯೆಯನ್ನು ಬಗೆಹರಿಸಲು ತೀವ್ರ ಶ್ರಮ ಹಾಕುತ್ತಿದ್ದಾರೆ. ಹೀಗಾಗಿ ಇಂದು ನಡೆದ ಕಾರ್ಖಾನೆ ಮಾಲೀಕರ ಸಭೆಯು ಶೇ.90ರಷ್ಟು ಯಶಸ್ವಿಯಾಗಿದೆ ಎಂದರು.

ರಾಜ್ಯ ಸರ್ಕಾರದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಚೂನಪ್ಪ ಪೂಜಾರಿ, ಕಬ್ಬು ಬೆಳೆ ಒಣಗಿದರೂ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಅಡಿ ಸರ್ಕಾರದಿಂದ ಯಾವುದೇ ಪರಿಹಾರ ಸಿಗುತ್ತಿಲ್ಲ. ಸರ್ಕಾರಕ್ಕೆ ಅಬಕಾರಿ ಇಲಾಖೆಯಿಂದಲೇ 56,000 ಕೋಟಿ ರೂ. ಆದಾಯ ಬರುತ್ತಿದೆ. ಅದರಲ್ಲಿ 5,000 ಕೋಟಿ ರೂ.ಗಳನ್ನು ಮೀಸಲಿಟ್ಟು, ಕಬ್ಬು ಬೆಳೆಗಾರರಿಗೆ ಪ್ರತಿ ಟನ್‌ಗೆ 1,000 ರೂ. ಪರಿಹಾರವನ್ನು ಮುಖ್ಯಮಂತ್ರಿಗಳು ತಕ್ಷಣವೇ ಘೋಷಣೆ ಮಾಡಲೇಬೇಕು. ಹೆಣ್ಣುಮಕ್ಕಳಿಗೆ ವರ್ಷಕ್ಕೆ 30 ಸಾವಿರ ಕೋಟಿ ರೂ. ನೀಡುತ್ತಿರುವ ಸರ್ಕಾರ ರೈತರನ್ನು ನಿರ್ಲಕ್ಷ್ಯ ಮಾಡುತ್ತಿದೆ ಎಂದು ಕಿಡಿಕಾರಿದರು.

ಸರ್ಕಾರ 1,000 ರೂ. ಪರಿಹಾರ ಘೋಷಿಸಬೇಕು, ಇಲ್ಲವೇ ನಮ್ಮೆಲ್ಲರನ್ನೂ ಹಿಂಡಲಗಾ ಜೈಲಿಗೆ ಕಳುಹಿಸಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸಿದರೆ ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕಾದಂತಹ ಗಂಭೀರ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಅವರು ಖಡಕ್ ಎಚ್ಚರಿಕೆ ರವಾನಿಸಿದರು.

ಪರಿಹಾರ ಘೋಷಿಸದಿದ್ದರೆ, ನಾಳೆ (ನ.5) ಮಧ್ಯಾಹ್ನ 12 ರಿಂದ 1 ಗಂಟೆ ಸುಮಾರಿಗೆ ಬೆಳಗಾವಿಯ ಚೆನ್ನಮ್ಮ ವೃತ್ತ ಮತ್ತು ಸಿ.ಪಿ.ಎಡ್ ಮೈದಾನದಲ್ಲಿ 31 ಜಿಲ್ಲೆಗಳಿಂದ ರೈತರು, ಯುವಕರು, ವಕೀಲರು, ಕನ್ನಡಪರ ಹಾಗೂ ದಲಿತಪರ ಸಂಘಟನೆಗಳು ಮತ್ತು ಮಾಜಿ ಸೈನಿಕರು ಸೇರಿದಂತೆ ಸುಮಾರು ಒಂದು ಕೋಟಿ ಜನ ಸೇರಿ ಬೃಹತ್ ಸಮಾವೇಶ ನಡೆಸಲಿದ್ದೇವೆ.

ನವೆಂಬರ್ 6 ರಿಂದ ಕಾರ್ಖಾನೆಗಳು ಆರಂಭ: ಕಾರ್ಖಾನೆಗಳ ಸಮಸ್ಯೆ ಶೀಘ್ರವೇ ಬಗೆಹರಿಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರು ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಹೀಗಾಗಿ ಇದೇ ನವೆಂಬರ್ 6ನೇ ತಾರೀಖಿನಿಂದಲೇ ಕಾರ್ಖಾನೆಗಳು ಕಾರ್ಯಾರಂಭ ಮಾಡಲಿವೆ. ಪಾದಯಾತ್ರೆಯಲ್ಲಿರುವ ರೈತ ದೇವರುಗಳು ಯಾವುದೇ ಆತಂಕ ಪಡುವ ಅಗತ್ಯವಿಲ್ಲ. ಎಲ್ಲರೂ ಬೃಹತ್ ಸಮಾವೇಶದಲ್ಲಿ ಪಾಲ್ಗೊಳ್ಳಬೇಕು ಎಂದು ಅವರು ಮನವಿ ಮಾಡಿದರು.

244 ಕೋಟಿ ರೂ. ನೀರಾವರಿ ಯೋಜನೆಗೆ ಸಿಎಂ ಡಿಕೆಶಿ ಚಾಲನೆ

• **ಉದಯವಾಹಿನಿ ಚಿತ್ರದುರ್ಗ:**



ಉದಯವಾಹಿನಿ ಚಿತ್ರ

ಹಿರಿಯೂರು ತಾಲ್ಲೂಕಿಗೆ 2,238 ಕೋಟಿ ರೂಪಾಯಿ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

244 ಕೋಟಿ ರೂಪಾಯಿ ವೆಚ್ಚದ ನೀರಾವರಿ ಯೋಜನೆಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಮುಖ್ಯಮಂತ್ರಿಗಳು, ಮಾಜಿ ಸಚಿವ ದಿವಂಗತ ಡಿ. ಸುಧಾಕರ್ ಅವರು ರೂಪಿಸಿದ್ದ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸುವ ಜವಾಬ್ದಾರಿಯೊಂದಿಗೆ ತಾವು ಇಲ್ಲಿಗೆ ಬಂದಿರುವುದಾಗಿ ಹೇಳಿದರು.

ಹಿರಿಯೂರು ವಿಧಾನಸಭಾ ಕ್ಷೇತ್ರಕ್ಕೆ ಶೀಘ್ರದಲ್ಲೇ ಉಪಚುನಾವಣೆ ನಡೆಯಲಿದೆ. ಹಿರಿಯೂರು ಕ್ಷೇತ್ರವೂ ತಮಗೆ ತಮ್ಮ ತವರು ಕ್ಷೇತ್ರ ಕನಕಪುರದಷ್ಟೇ ಮಹತ್ವದ್ದಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ಕುಡಿಯುವ ನೀರು ಮತ್ತು ರಸ್ತೆ ಅಭಿವೃದ್ಧಿಗಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಮೂಲಕ ವಿಶೇಷ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.ಬರಪೀಡಿತ ಪ್ರದೇಶದಲ್ಲಿ ನೀರಿನ ಲಭ್ಯತೆಯನ್ನು ಸುಧಾರಿಸುವುದು ಈ ನೀರಾವರಿ ಯೋಜನೆಯ ಉದ್ದೇಶವಾಗಿದೆ.ರಾಜ್ಯದ ಅತ್ಯಂತ ಬರಪೀಡಿತ ಪ್ರದೇಶಗಳಲ್ಲಿ ಹಿರಿಯೂರು ಕೂಡ ಒಂದಾಗಿದ್ದು, ಇಲ್ಲಿ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದಿದೆ. 1,000 ಅಡಿ ಆಳದ ಕೊಳವೆಬಾವಿಗಳಲ್ಲಿಯೂ ನೀರು ಸಿಗದೆ ಬತ್ತಿಹೋಗುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಣ್ಣ ನೀರಾವರಿ ಸಚಿವ ಅಜಯ್ ಸಿಂಗ್, ವೇದಾವತಿ ನದಿಗೆ ಅಡ್ಡಲಾಗಿ ಸಬ್‌ಮರ್ಸಿಬಲ್ ಡೈವರ್ಷನ್ ವಿಯರ್ ನಿರ್ಮಿಸಿ, 0.3 ಟಿಎಂಸಿ ಅಡಿ ನೀರನ್ನು ಸಂಗ್ರಹಿಸಿ ಪಂಪ್ ಮಾಡುವ ಯೋಜನೆ ಇದಾಗಿದೆ ಎಂದು ತಿಳಿಸಿದರು. ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯ 10 ಕೆರೆಗಳು ಹಾಗೂ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಆರು ಕೆರೆಗಳು ಸೇರಿದಂತೆ ಒಟ್ಟು 16 ಕೆರೆಗಳಿಗೆ ನೀರು ಪೂರೈಸಲಾಗುವುದು ಎಂದರು.

ಸಸಿಗಳನ್ನು ನೆಡುವ ಮೂಲಕ ವಿಶೇಷವಾಗಿ ಕನ್ನಡ ರಾಜ್ಯೋತ್ಸವ ಆಚರಣೆ

• **ಉದಯವಾಹಿನಿ ಮುದ್ದೇಬಿಹಾಳ:**

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ತಾಲ್ಲೂಕು ಆಸ್ಪತ್ರೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ವಿಶೇಷವಾಗಿ ಆಚರಿಸಲಾಯಿತು.ಈ ಸಂದರ್ಭದಲ್ಲಿ ಆಸ್ಪತ್ರೆಯ ಆವರಣದಲ್ಲಿ ಸಸಿಗಳನ್ನು ನೆಡುವುದರ ಜೊತೆಗೆ, ಪ್ರತಿಯೊಬ್ಬರೂ ಒಂದೊಂದು ಸಸಿಯನ್ನು ದತ್ತು ಸ್ವೀಕರಿಸುವ ಮೂಲಕ ಪರಿಸರ ಸಂರಕ್ಷಣೆಗೆ ವಿನೂತನ ಹೆಜ್ಜೆ ಇಡಲಾಯಿತು.

ಆಸ್ಪತ್ರೆಗೆ ಆಗಮಿಸುವ ರೋಗಿಗಳು ಹಾಗೂ ಅವರ ಸಂಬಂಧಿಕರಿಗೆ ಉತ್ತಮ, ಹಸಿರುಮಯ ಮತ್ತು ಆಹ್ಲಾದಕರ ವಾತಾವರಣ ನಿರ್ಮಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳಾದ ಡಾ. ರಂಗನಾಥ್ ವೈದ್ಯ ಅವರು, ಪ್ರತಿಯೊಬ್ಬ ಸಿಬ್ಬಂದಿಯೂ ಒಂದೊಂದು ಸಸಿಯನ್ನು ದತ್ತು ಸ್ವೀಕರಿಸಿ, ಅದರ ನಿರಂತರ ಪೋಷಣೆ ಹಾಗೂ ಸಂರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಅದೇ ರೀತಿ ಆಸ್ಪತ್ರೆಯ ಸ್ವಚ್ಛತೆಯ ಜವಾಬ್ದಾರಿಯನ್ನೂ ಪ್ರತಿಯೊಬ್ಬ ಸಿಬ್ಬಂದಿಯು ಅರಿತುಕೊಂಡು ಕಾರ್ಯನಿರ್ವಹಿಸಬೇಕು.



ಉದಯವಾಹಿನಿ ಚಿತ್ರ

ಎಲ್ಲರೂ ಒಗ್ಗಟ್ಟಿನಿಂದ ಕೈಜೋಡಿಸಿದಾಗ ಮಾತ್ರ ಇಂತಹ ಉತ್ತಮ ಕಾರ್ಯಗಳು ಯಶಸ್ವಿಯಾಗಲು ಹಾಗೂ ನಮ್ಮ ಆಸ್ಪತ್ರೆಯನ್ನು ಮಾದರಿ ಆಸ್ಪತ್ರೆಯನ್ನಾಗಿ ರೂಪಿಸಲು ಸಾಧ್ಯ ಎಂದು ಹೇಳಿದರು. ಆಸ್ಪತ್ರೆಯ ಚಿಕ್ಕ ಮಕ್ಕಳ ತಜ್ಞರಾದ ಡಾ. ಸೀಮಾ, ಡಾ. ಪರಶುರಾಮ್ ವಡ್ಡರ,ಡಾ. ಶಿವಾನಂದ ನಾಡಗೌಡ್ರು ಹಾಗೂ ಆಸ್ಪತ್ರೆಯ ಎಲ್ಲಾ ವಿಭಾಗಗಳ ವೈದ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಹಸಿರು ಪರಿಸರ , ಸ್ವಚ್ಛ ಆಸ್ಪತ್ರೆ , ಆರೋಗ್ಯವಂತ ಸಮಾಜ

ಚರಂಡಿ ಇಲ್ಲದೆ ರಸ್ತೆ ಕಾಮಗಾರಿ: ಯಾದಗಿರಿಯ ಅಗ್ನಿ ಗ್ರಾಮಸ್ಥರ ಆಕ್ರೋಶ

• **ಉದಯವಾಹಿನಿ ಹುಣಸಗಿ:**

ಮೊದಲು ಚರಂಡಿ ನಿರ್ಮಿಸಿ, ನಂತರ ರಸ್ತೆ ಮಾಡಿ! ? ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಅಗ್ನಿ ಗ್ರಾಮದಲ್ಲಿ ಸುಮಾರು 18 ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ಆರಂಭವಾಗಿರುವ ಸಿಸಿ ರಸ್ತೆ ಕಾಮಗಾರಿ ಈಗ ಗ್ರಾಮಸ್ಥರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.18 ಅಡಿ ಅಗಲದ ರಸ್ತೆ ನಿರ್ಮಾಣಕ್ಕೆ ಚರಂಡಿ ವ್ಯವಸ್ಥೆಯನ್ನೇ ಕಲ್ಪಿಸದಿರುವುದು ಇಂಜಿನಿಯರ್‌ಗಳು ಹಾಗೂ ಅಧಿಕಾರಿಗಳ ಅವೈಜ್ಞಾನಿಕ ಯೋಜನೆ ಮತ್ತು ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಗ್ರಾಮಸ್ಥರ ಪ್ರಮುಖ ಆತಂಕ ಹಾಗೂ ಆಗ್ರಹಗಳು: ರಸ್ತೆ ಹಾಳಾಗುವ ಭೀತಿ: ಮಳೆನೀರು ಹರಿದುಹೋಗಲು ಚರಂಡಿ ಇಲ್ಲದಿದ್ದರೆ ನೀರು ರಸ್ತೆಯ ಮೇಲೆಯೇ ನಿಂತು, ನಿರ್ಮಿಸಿದ 2/3 ತಿಂಗಳಲ್ಲೇ ರಸ್ತೆ ಕಿತ್ತುಹೋಗುವ ಭೀತಿ ವ್ಯಕ್ತವಾಗಿದೆ.



ಉದಯವಾಹಿನಿ ಚಿತ್ರ

ಸಾರ್ವಜನಿಕ ಹಣ ಪೋಲು: ಚರಂಡಿ ಇಲ್ಲದೆ ರಸ್ತೆ ನಿರ್ಮಿಸಿದರೆ ಜನರ ತೆರಿಗೆ ಹಣ ನೀರುಪಾಲಾಗುತ್ತದೆ. ಅಧಿಕಾರಿಗಳು ಕೇವಲ ಕಾಮಗಾರಿಯ ಬಿಲ್ ಮಾಡಲು ಯೋಜನೆ ರೂಪಿಸದೆ ದೀರ್ಘಕಾಲ ಬಾಳಿಕೆ ಬರುವಂತೆ ಕೆಲಸ ಮಾಡಬೇಕು.

ಗ್ರಾಮಸ್ಥರ ಪಟ್ಟು: ಚರಂಡಿ ನಿರ್ಮಾಣಕ್ಕೆ ಅಂದಾಜುಪಟ್ಟಿಯಲ್ಲಿ ಅನುದಾನ ಮೀಸಲಿಡಲಾಗಿದೆಯೇ ಎಂಬುದನ್ನು ಅಧಿಕಾರಿಗಳು ಸ್ಪಷ್ಟಪಡಿಸಬೇಕು. ಸೂಕ್ತ ಚರಂಡಿ ನಿರ್ಮಿಸುವವರೆಗೆ ರಸ್ತೆ ಕಾಮಗಾರಿಗೆ ಅವಕಾಶ ನೀಡುವುದಿಲ್ಲ ಎಂದು ಗ್ರಾಮಸ್ಥರು ಎಚ್ಚರಿಸಿದ್ದಾರೆ.

ಅಧಿಕಾರಿಗಳ ಗಮನಕ್ಕೆ: ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಇಂಜಿನಿಯರ್‌ಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಿ, ತಾಂತ್ರಿಕ ನಕ್ಷೆಯನ್ನು ಮರುಪರಿಶೀಲಿಸಬೇಕು. ರಸ್ತೆಗೆ ಚರಂಡಿ ವ್ಯವಸ್ಥೆ ಕಲ್ಪಿಸಿದ ನಂತರವೇ ರಸ್ತೆ ಕಾಮಗಾರಿಯನ್ನು ಮುಂದುವರಿಸಬೇಕೆಂದು ಅಗ್ನಿ ಗ್ರಾಮಸ್ಥರು ಒಕ್ಕೊರಲಿನಿಂದ ಒತ್ತಾಯಿಸಿದ್ದಾರೆ.

ವಕೀಲರ ರಕ್ಷಣೆಗೆ ಪ್ರತ್ಯೇಕ ಕಾಯ್ದೆ ಜಾರಿಗೆ ಆಗ್ರಹ

• **ಉದಯವಾಹಿನಿ ಜೇವರಗಿ,:**



ಉದಯವಾಹಿನಿ ಚಿತ್ರ

ನ್ಯಾಯದ ಪರವಾಗಿ ಹೋರಾಡುವ ವಕೀಲರ ಮೇಲಿನ ಹಲ್ಲೆ, ಬೆದರಿಕೆ ಹಾಗೂ ವೃತ್ತಿಪರ ಕರ್ತವ್ಯಕ್ಕೆ ಅಡ್ಡಿಪಡಿಸುವ ಘಟನೆಗಳನ್ನು ತಡೆಗಟ್ಟಲು ರಾಜ್ಯದಲ್ಲಿ ವಕೀಲರ ರಕ್ಷಣಾ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಜೇವರ್ಗಿ ತಾಲ್ಲೂಕು ನ್ಯಾಯವಾದಿಗಳ ಸಂಘವು ಕರ್ನಾಟಕ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ವಕೀಲರು ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ದೊರಕಿಸಿಕೊಡುವ ಉದ್ದೇಶದಿಂದ ಹಗಲು–ರಾತ್ರಿ ಎನ್ನದೆ ಕಾನೂನು ಹೋರಾಟ ನಡೆಸುತ್ತಾರೆ. ಕಕ್ಷಿದಾರರ ಹಕ್ಕುಗಳ ರಕ್ಷಣೆ, ನ್ಯಾಯಾಂಗ ವ್ಯವಸ್ಥೆಯ ಗೌರವ ಹಾಗೂ ಸಂವಿಧಾನಬದ್ಧ ನ್ಯಾಯದ ಸ್ಥಾಪನೆಗಾಗಿ ಕಾರ್ಯನಿರ್ವಹಿಸುವ ವಕೀಲರೇ ಇಂದು ಹಲ್ಲೆ ಮತ್ತು ಬೆದರಿಕೆಗಳ ಆತಂಕ ಎದುರಿಸುವಂತಾಗಿದೆ.ಇಂತಹ ಘಟನೆಗಳಿಂದ ವಕೀಲರು ನಿರ್ಭೀತಿಯಿಂದ ವೃತ್ತಿ ನಿರ್ವಹಿಸಲು ಅಡ್ಡಿಯಾಗುತ್ತಿದ್ದು, ಅವರ ಸುರಕ್ಷತೆಗೆ ಸರ್ಕಾರ ವಿಶೇಷ ಆದ್ಯತೆ ನೀಡಬೇಕೆಂದು ಸಂಘವು ಮನವಿಯಲ್ಲಿ ಒತ್ತಾಯಿಸಿದೆ.

ಈ ಕುರಿತು ನವೆಂಬರ್ 3ರಂದು ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಅವರಿಗೆ ಜೇವರ್ಗಿ ತಹಶೀಲ್ದಾರರ ಮುಖಾಂತರ ಮನವಿ ಸಲ್ಲಿಸಲಾಗಿದ್ದು, ವಕೀಲರ ರಕ್ಷಣೆಗೆ ಸಂಬಂಧಿಸಿದಂತೆ ಮೂರು ಪ್ರಮುಖ ಬೇಡಿಕೆಗಳನ್ನು ಮುಂದಿಡಲಾಗಿದೆ. ವಕೀಲರ ರಕ್ಷಣಾ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.

ವಕೀಲರ ಮೇಲೆ ಹಲ್ಲೆ ನಡೆಸುವ ಹಾಗೂ ಹಲ್ಲೆಗೆ ಪ್ರಯತ್ನಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ವಕೀಲರ ಸುರಕ್ಷತೆ ಮತ್ತು ವೃತ್ತಿಪರ ಸ್ವಾತಂತ್ರ್ಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕಾಯ್ದೆಗೆ ಅಗತ್ಯ ತಿದ್ದುಪಡಿ ತಂದು ಹೆಚ್ಚಿನ ಭದ್ರತೆ ಒದಗಿಸಬೇಕು ಎಂಬುದು ಸಂಘದ ಪ್ರಮುಖ ಬೇಡಿಕೆಗಳಾಗಿವೆ.

ಎಸ್‌ಸಿ (ಮಹಿಳೆ) ಮೀಸಲಾತಿ ಬದಲಿಸದಂತೆ ವಿವಿಧ ಸಂಘಟನೆಗಳ ಆಗ್ರಹ

• **ಉದಯವಾಹಿನಿ ಬೀದರ್:**

ಬೀದರ್ ತಾಲ್ಲೂಕಿನ ಜನವಾಡ ಹೋಬಳಿಗೆ ಸುಮಾರು 25ರಿಂದ 30 ವರ್ಷಗಳ ನಂತರ 2026–27ನೇ ಸಾಲಿನ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಮೀಸಲಾತಿಯಲ್ಲಿ ಅನುಸೂಚಿತ ಜಾತಿ (ಮಹಿಳೆ) ಮೀಸಲಾತಿ ಲಭಿಸಿರುವುದನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಬಾರದು ಎಂದು ವಿವಿಧ ದಲಿತ ಸಂಘಟನೆಗಳ ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಕರ್ನಾಟಕ ಸರ್ಕಾರದ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಮೀಸಲಾತಿ ಪಟ್ಟಿಯ ಪ್ರಕಾರ ಜನವಾಡ ಹೋಬಳಿಯ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಕ್ರಮ ಸಂಖ್ಯೆ 16ರಲ್ಲಿ ಅನುಸೂಚಿತ ಜಾತಿ (ಮಹಿಳೆ) ಮೀಸಲಾತಿ ನಿಗದಿಪಡಿಸಲಾಗಿದೆ.

ಸುಮಾರು ಮೂರು ದಶಕಗಳ ಬಳಿಕ ಈ ಮೀಸಲಾತಿ ದೊರೆತಿರುವುದರಿಂದ ಜನವಾಡ ಹೋಬಳಿ ವ್ಯಾಪ್ತಿಯ ಜನರು ಸಂತಸ ವ್ಯಕ್ತಪಡಿಸಿದ್ದಾರೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.ಈ ಮೀಸಲಾತಿಯಿಂದ ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಸ್ಥಳೀಯ ಆಡಳಿತದಲ್ಲಿ ರಾಜಕೀಯ ಪ್ರಾತಿನಿಧ್ಯ ಪಡೆಯಲು ಉತ್ತಮ ಅವಕಾಶ ದೊರೆತಿದೆ.

STಪಟ್ಟಿಗೆ ಸೇರಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ

• **ಉದಯವಾಹಿನಿ ಚಿತ್ರದುರ್ಗ:**



ಉದಯವಾಹಿನಿ ಚಿತ್ರ

ಜನಾಂಗೀಯ ಅಧ್ಯಯನ ವರದಿಯ ಆಧಾರದ ಮೇಲೆ ಕಾಡುಗೊಲ್ಲ ಸಮುದಾಯವನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವಂತೆ ಕರ್ನಾಟಕ ಸರ್ಕಾರ ಮಾಡಿದ್ದ ಶಿಫಾರಸನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಕೇಂದ್ರದ ಈ ನಿರ್ಧಾರದಿಂದ ರಾಜ್ಯಾದ್ಯಂತ ವಾಸಿಸುತ್ತಿರುವ ಸುಮಾರು 2.5 ಲಕ್ಷ ಕಾಡುಗೊಲ್ಲ ಸಮುದಾಯದ ಜನರ ಅಭಿವೃದ್ಧಿಗೆ ಹಿನ್ನಡೆಯಾಗಿದೆ ಎಂದು ಹೇಳಿದರು.

ನಿನ್ನೆ ಹಿರಿಯೂರು ಪಟ್ಟಣದ ನಂಜಯ್ಯನಕೋಟಿಗೆಯಲ್ಲಿರುವ ಒಕ್ಕಲಿಗರ ಸಮುದಾಯ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಡಿ ಕೆ ಶಿವಕುಮಾರ್, ಹಿರಿಯೂರು ತಾಲ್ಲೂಕಿನಲ್ಲಿ ಸುಮಾರು 60 ಸಾವಿರ ಜನಸಂಖ್ಯೆ ಹೊಂದಿರುವ ಕಾಡುಗೊಲ್ಲ ಸಮುದಾಯ ಶೈಕ್ಷಣಿಕ, ರಾಜಕೀಯ ಹಾಗೂ ಆರ್ಥಿಕವಾಗಿ ಹಿಂದುಳಿದಿದೆ ಎಂದು ತಿಳಿಸಿದರು. ವಿರೋಧ ಪಕ್ಷ ನಾಯಕರು ಕೂಡ ಕೇಂದ್ರ ಸರ್ಕಾರ ಕರ್ನಾಟಕದ ಶಿಫಾರಸನ್ನು ಒಪ್ಪಿಕೊಳ್ಳುವಂತೆ ಮನವೊಲಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಕೇಂದ್ರ ಸರ್ಕಾರದ ನಿರ್ಧಾರ ನಿರೀಕ್ಷೆಗೆ ವಿರುದ್ಧವಾಗಿದ್ದು, ಪ್ರತಿಪಕ್ಷದ ನಾಯಕರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯವನ್ನು ಮರುಪರಿಶೀಲಿಸಿ, ಕಾಡುಗೊಲ್ಲ ಸಮುದಾಯಕ್ಕೆ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ನ್ಯಾಯ ದೊರಕಿಸಿಕೊಡಲು ಕೇಂದ್ರದ ಮೇಲೆ ಮತ್ತೊಮ್ಮೆ ಒತ್ತಡ ಹೇರಲಾಗುವುದು ಎಂದು ಹೇಳಿದರು. ಕಾಡುಗೊಲ್ಲ ಸಮುದಾಯಕ್ಕೆ ನ್ಯಾಯ ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

77 ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ

• **ಉದಯವಾಹಿನಿ ಕಮಲನಗರ:**

ತಾಲ್ಲೂಕಿನ ಠಾಣಾಕುಶನೂರಿನ ಶ್ರೀ ಮಾಣಿಕರಾವ್ ಪಾಟೀಲ ರೂರಲ್ ಪಾಲಿಟೆಕ್ನಿಕ್‌ನಲ್ಲಿ ಇತ್ತೀಚೆಗೆ ನಡೆದ ಕ್ಯಾಂಪಸ್ ಆಯ್ಕೆ ಪ್ರಕ್ರಿಯೆಯಲ್ಲಿ ಕಾಲೇಜಿನ 77 ವಿದ್ಯಾರ್ಥಿಗಳು ಉದ್ಯೋಗಕ್ಕೆ ಆಯ್ಕೆಯಾಗಿದ್ದಾರೆ.ಪುಣೆಯ ಪ್ರಸಿದ್ಧ 'ನೆಕ್ಸ್‌ಟೀರ್ ಆಟೋಮೋಟಿವ್ ಇಂಡಿಯಾ ಪ್ರೈವೇಟ್ ಲಿಮಿಟೆಡ್' ಕಂಪನಿಯು ನಡೆಸಿದ ಸಂದರ್ಶನದಲ್ಲಿ ಎಲೆಕ್ಟ್ರಿಕಲ್ ಆಯಿಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ 38, ಮೆಕ್ಯಾನಿಕಲ್ ವಿಭಾಗದ 18 ಹಾಗೂ ಎಲೆಕ್ಟ್ರಾನಿಕ್ಸ್ ಆಯಿಂಡ್ ಕಮ್ಯುನಿಕೇಷನ್ ವಿಭಾಗದ 21 ವಿದ್ಯಾರ್ಥಿಗಳು ಸೇರಿ ಒಟ್ಟು 77 ಅಂತಿಮ ಸೆಮಿಸ್ಟರ್ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಆಯ್ಕೆಯಾದ ಅಭ್ಯರ್ಥಿಗಳಿಗೆ ಮೊದಲ ನಾಲ್ಕು ತಿಂಗಳು ಇಂಟರ್ನ್‌ಶಿಪ್ ಜೊತೆಗೆ ಶಿಷ್ಯವೇತನ ನೀಡಲಾಗುವುದು.

ಇಂಟರ್ನ್‌ಶಿಪ್ ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಆಕರ್ಷಕ ವೇತನದೊಂದಿಗೆ ಕಾಯಂ ಉದ್ಯೋಗ ದೊರೆಯಲಿದೆ ಎಂದು ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಈ ಕುರಿತು ಮಾತನಾಡಿದ ಪಾಲಿಟೆಕ್ನಿಕ್ ಪ್ರಾಚಾರ್ಯ ರಾಜಶೇಖರ ಮುದ್ದಾ, ''ನಮ್ಮ ಸಂಸ್ಥೆಯು ಕಳೆದ ನಾಲ್ಕು ದಶಕಗಳಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ತಾಂತ್ರಿಕ ಶಿಕ್ಷಣ ನೀಡುತ್ತಾ ಬಂದಿದೆ.

ಈ ಕಾರಣದಿಂದಲೇ ಹೆಸರಾಂತ ಕಂಪನಿಗಳು ಪ್ರತಿ ವರ್ಷ ನಮ್ಮ ಕಾಲೇಜಿಗೆ ಆಗಮಿಸಿ ಕ್ಯಾಂಪಸ್ ಸಂದರ್ಶನ ನಡೆಸಿ ಉದ್ಯೋಗಾವಕಾಶ ಕಲ್ಪಿಸುತ್ತಿವೆ'' ಎಂದು ಸಂತಸ ಹಂಚಿಕೊಂಡರು.

2.68 ಕೋಟಿ ದರೋಡೆ ಪ್ರಕರಣ ಭೇದಿಸಿದ ಮೂಡಲಗಿ ಪೊಲೀಸರು

2.68 ಕೋಟಿ ದರೋಡೆ ಪ್ರಕರಣವನ್ನು ಭೇದಿಸಿದ ಮೂಡಲಗಿ ಪೊಲೀಸರು, 8 ಆರೋಪಿಗಳ ಬಂಧನ ಸಹಿತ 2.39 ಕೋಟಿ ಹಣವನ್ನು ಜಪ್ತಿ

• **ಉದಯವಾಹಿನಿ ಯಾದಗಿರಿ:**



ಉದಯವಾಹಿನಿ ಚಿತ್ರ

1 ಲಕ್ಷ ರೂಪಾಯಿ ನಗದು ಕೊಟ್ಟರೆ, ನಿಮ್ಮ ಖಾತೆಗೆ 1 ಲಕ್ಷದ 30 ಸಾವಿರ ರೂಪಾಯಿ ಹಣ ಜಮಾ ಮಾಡುತ್ತೇವೆ ಅಂತಾ ನಂಬಿಸಿದ್ದರು. ಇದನ್ನು ನಂಬಿ ಐದು ಜನ ಸೇರಿಕೊಂಡು ಬರೋಬ್ಬರಿ 2.68 ಕೋಟಿ ರೂ. ಹಣ ಕೊಡುವ ವೇಳೆ ಸಂಚು ರೂಪಿಸಿ, ಅಷ್ಟೂ ಹಣವನ್ನು ದರೋಡೆ ಮಾಡಿದ್ದ ಪ್ರಕರಣದಲ್ಲಿ 8 ಜನ ಆರೋಪಿಗಳನ್ನು ಬಂಧಿಸುವಲ್ಲಿ ಮೂಡಲಗಿ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.ಮೂಡಲಗಿ ತಾಲ್ಲೂಕಿನ ಸಂಗನಕೇರಿ ಗ್ರಾಮದ ಡಿಆರ್ ಕಾನ್ಸ್‌ಟೇಬಲ್ ಚಿದಾನಂದ ಸಿದ್ದಾರೂಢ ಕುರಬೇಟ್, ರಾಜಾರಾಮ ಸುರೇಶ ಮಾಳ್ಯಾಗೋಳ, ರಮೇಶ ದುಂಡಪ್ಪ ಮಾಳ್ಯಾಗೋಳ, ವಿಠಲ ಸುರೇಶ ಮಾಳ್ಯಾಗೋಳ, ತುಕ್ಕಾನಟ್ಟಿ ಗ್ರಾಮದ ಸಂಜೀವ ರಾಮಪ್ಪ ಅರಭಾವಿ, ಮಾರುತಿ ಅರಭಾವಿ, ಗೋಕಾಕಿನ ಪ್ರಕಾಶ ರಾಮಲಿಂಗಪ್ಪ ಮೇಳವಂಕಿ, ರಾಘವೇಂದ್ರ, ಪ್ರಕಾಶ ಕೊಪ್ಪದ ಬಂಧಿತರು. ಅಕ್ಟೋಬರ್ 30ರಂದು ನಡೆದಿದ್ದ ದರೋಡೆ ಕುರಿತು ಮೂಡಲಗಿಯ ಕಲ್ಮೇಶ ಬಸವರಾಜ ರಂಗಾಪುರ ಅವರು ದೂರು ದಾಖಲಿಸಿದ್ದರು. ಪ್ರಕರಣ ಭೇದಿಸಿರುವ ಪೊಲೀಸರು 8 ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ 2.39 ಕೋಟಿ ಹಣ, 2 ಬೈಕ್, 1 ಕಾರು ಹಾಗೂ ಹಣ ಎಣಿಕೆ ಯಂತ್ರಗಳು ಸೇರಿ ಕೃತ್ಯಕ್ಕೆ ಬಳಸಿದ್ದ ವಸ್ತುಗಳನ್ನು ಪೊಲೀಸರು ಜಪ್ತಿ ಪಡಿಸಿಕೊಂಡಿದ್ದಾರೆ.

1 : ದರೋಡೆ ಮಾಡಿದ್ದು ಸ್ಪಷ್ಟವಾಗಿದೆ
2 : ಶೀಘ್ರವೇ ಪತ್ತೆ ಹಚ್ಚಿ ಬಂಧಿಸುತ್ತೇವೆ
3 : 29 ಲಕ್ಷ ರೂಪಾಯಿಯನ್ನು ಜಪ್ತಿ

ಈ ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ಆರೋಪಿ ರಾಮಪ್ಪಾ ತಳವಾರನನ್ನು ಬಂಧಿಸಬೇಕಿದೆ. ಅವನನ್ನು ಶೀಘ್ರವೇ ಪತ್ತೆ ಹಚ್ಚಿ ಬಂಧಿಸುತ್ತೇವೆ. ಇನ್ನುಳಿದ 29 ಲಕ್ಷ ರೂಪಾಯಿಯನ್ನು ಜಪ್ತಿ ಮಾಡಲಾಗುವುದು ಎಂದು ತಿಳಿಸಿದರು. –ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್

ಏನಿದು ದರೋಡೆ ಪ್ರಕರಣ: ಆರೋಪಿ ಚಿದಾನಂದ ಕುರಬೇಟ್ ನಮಗೆ 1 ಲಕ್ಷ ರೂ. ನಗದು ನೀಡಿದರೆ ನಿಮ್ಮ ಬ್ಯಾಂಕ್ ಖಾತೆಗಳಿಗೆ 1,30,000 ರೂಪಾಯಿ ಜಮಾ ಮಾಡುತ್ತೇವೆ ಎಂದು ಆಮಿಷವೊಡ್ಡಿ ನಂಬಿಸಿದ್ದನು. ಅದನ್ನು ನಂಬಿದ ನಾನು 48 ಲಕ್ಷ, ಸೋದರಮಾವ ಚನ್ನಬಸಪ್ಪ 40 ಲಕ್ಷ, ಬೀರಪ್ಪ ವನಸನ್ನಿ 50 ಲಕ್ಷ, ಕಲ್ಮೇಶ ಗೋಕಾಕ 50 ಲಕ್ಷ ಹಾಗೂ ಶಂಕರ ಜಕ್ಕಣ್ಣವರ 80 ಲಕ್ಷ ಎಲ್ಲಾ ಸೇರಿ ಒಟ್ಟು 2.68 ಕೋಟಿ ಹಣವನ್ನು ಸಂಗ್ರಹಿಸಿದ್ದರು. ಆರೋಪಿ ಚಿದಾನಂದ ಈ ಹಣವನ್ನು ಬೇರೆಯವರಿಂದ ದರೋಡೆ ಮಾಡಿಸುವ ದುರುದ್ದೇಶದಿಂದ, ಆ ಹಣವನ್ನು ಒಂದು ಶೆಡ್‌ನಲ್ಲಿ ಎಣಿಕೆ ಮಾಡೋಣ ಎಂದು ನಂಬಿಸಿ, ಬೀರಪ್ಪ ವನಸನ್ನಿ ಅವರ ಶೆಡ್‌ಗೆ ಹಣ ತರಿಸಿಕೊಂಡಿದ್ದನು. ಹಣ ಎಣಿಸುತ್ತಿದ್ದಾಗ, ಚಿದಾನಂದನ ಪೂರ್ವನಿಯೋಜಿತ ಸಂಚಿನಂತೆ ಆರೋಪಿಗಳಾದ ಮಾರುತಿ ಅರಭಾವಿ, ಸಂಜು ಅರಭಾವಿ, ರಾಜಾರಾಮ ಮಾಳ್ಯಾಗೋಳ ಹಾಗೂ ಇತರೆ ನಾಲ್ಕೈದು ಜನರು ಅಕ್ಟೋಬರ್ 30ರ ರಾತ್ರಿ 11:45ರ ಸುಮಾರಿಗೆ ಖಾರದಪುಡಿಯೊಂದಿಗೆ ಶೆಡ್ ಮೇಲೆ ದಾಳಿ ಮಾಡಿ, ಅಲ್ಲಿ ನಮ್ಮ ಸೋದರಮಾವ ಚನ್ನಬಸಪ್ಪ ಅವರ ಕಣ್ಣಿಗೆ ಖಾರದ ಪುಡಿ ಎರಚಿ, ಹಗ್ಗದಿಂದ ಹೊಡೆದು ದೌರ್ಜನ್ಯ ಎಸಗಿ, 5 ಬ್ಯಾಗ್‌ಗಳಲ್ಲಿದ್ದ ಒಟ್ಟು 2.68 ಕೋಟಿ ಹಣವನ್ನು ದರೋಡೆ ಮಾಡಿಕೊಂಡು ಓಡಿ ಹೋಗಿದ್ದರು ಅಂತಾ ಕಲ್ಮೇಶ ರಂಗಾಪುರ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಆರ್.ಬಿ.ಬಸರಗಿ ಅವರ ಮಾರ್ಗದರ್ಶನದಲ್ಲಿ ಗೋಕಾಕ ಉಪವಿಭಾಗದ ಡಿಎಸ್‌ಪಿ ರವಿ ನಾಯಕ್ ಅವರ ನೇತೃತ್ವದಲ್ಲಿ ಈ ಯಶಸ್ವಿ ಕಾರ್ಯಾಚರಣೆ ನಡೆಸಲಾಗಿದೆ.

ದರೋಡೆ ಪ್ರಕರಣ ಸಂಬಂಧ ಮೂಡಲಗಿ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಕಲಂ 310(2) ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಪೊಲೀಸರು ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದ್ದಾರೆ.ಸಿಪಿಐ ಶ್ರೀಶೈಲ ಬ್ಯಾಕೋಡ, ಪಿಎಸ್‌ಐ ಎಸ್. ಡಿ. ಯಡಹಳ್ಳಿ, ಪ್ರೊಬೇಷನರಿ ಪಿಎಸ್‌ಐ ರಾಜೀವ ಪೂಜಾರ, ಎಎಸ್‌ಐ ಪಿ.ಎಂ. ಗಸ್ತಿ ಸೇರಿ ಸಿಬ್ಬಂದಿಗಳು ಈ ತಂಡದಲ್ಲಿದ್ದರು. ಈ ತಂಡದ ಕಾರ್ಯಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.